ಬುಧವಾರ, ಮಾರ್ಚ್ 29, 2023 | ₹ 6.00

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಾಸಕ ಮಾಡಾಳ್ ನಾಲ್ಕು ದಿನ ಲೋಕಾಯುಕ್ತ ಪೊಲೀಸ್ ವಶಕ್ಕೆ

ಕಚ್ಚಾವಸ್ತು ಪೂರೈಕೆದಾರರ ಸಂಪರ್ಕದಲ್ಲಿದ್ದ ಅಪ್ಪ, ಮಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಅಧ್ಯಕ್ಷರಾಗಿದ್ದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಕೆ.ಮಾಡಾಳ್ ವಿರೂಪಾಕ್ಷಪ್ಪ ಮತ್ತು ಅವರ ಮಗ ಪ್ರಶಾಂತ್ ಮಾಡಾಳ್ ಮಾರ್ಚ್ 2ರಂದು ಲಂಚ ಪ್ರಕರಣ ದಾಖಲಾಗುವ ಮುನ್ನ ಕಚ್ಚಾವಸ್ತು ಪೂರೈಸುವ ಸಂಸ್ಥೆಗಳ ಪ್ರತಿನಿಧಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದರು ಎಂಬ ಮಾಹಿತಿ ಲೋಕಾಯುಕ್ತ ಪೊಲೀಸರಿಗೆ ಲಭಿಸಿದೆ.

ಲಂಚ ಪ್ರಕರಣ ಹಾಗೂ ಶಾಸಕರ ಮನೆಯಲ್ಲಿ ₹ 6.10 ಕೋಟಿ ನಗದು ಪತ್ತೆಯಾಗಿರುವ ಕುರಿತು ತನಿಖೆ ಚುರುಕುಗೊಂಡಿದೆ. ಹಣ ಸಂಗ್ರಹದ ಮೂಲದ ಬಗ್ಗೆ ತನಿಖಾಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದಾರೆ. ಕೆಎಸ್‌ಡಿಎಲ್ 106 ಬಗೆಯ ಕಚ್ಚಾವಸ್ತುಗಳನ್ನು ಖರೀದಿಸುತ್ತಿದೆ. ಆರರಿಂದ ಏಳು ಮಂದಿ ಪ್ರಮುಖ ಪೂರೈಕೆದಾರರಿದ್ದಾರೆ. ಅವರೊಂದಿಗೆ ಅಪ್ಪ–ಮಗ ನಿರಂತರ ಸಂಪರ್ಕದಲ್ಲಿದ್ದರು ಎಂಬುದಕ್ಕೆ ದಾಖಲೆಗಳು ಲಭಿಸಿವೆ ಎಂದು ಮೂಲಗಳು ತಿಳಿಸಿವೆ.

ವಿರೂಪಾಕ್ಷಪ್ಪ ಅವರನ್ನು ಸೋಮವಾರ ಬಂಧಿಸಿದ ಬಳಿಕ ತಡರಾತ್ರಿಯವರೆಗೆ ವಿಚಾರಣೆ ನಡೆಸಲಾಗಿದೆ. ಕೆಲವು ಪ್ರಶ್ನೆಗಳಿಗಷ್ಟೇ ಉತ್ತರಿಸಿದ್ದಾರೆ. ಅವರ ಮಲಗುವ ಕೋಣೆಯಲ್ಲಿ ಪತ್ತೆಯಾಗಿರುವ ₹ 6.10 ಕೋಟಿಯನ್ನು ತಲುಪಿಸಿದ ವ್ಯಕ್ತಿಗಳ ಕುರಿತು ಯಾವುದೇ ಮಾಹಿತಿ ನೀಡಿಲ್ಲ. ಅವರ ಮೊಬೈಲ್‌ನಿಂದ ಸಂಗ್ರಹಿಸಿರುವ ಮಾಹಿತಿ ಆಧರಿಸಿ ಬುಧವಾರದಿಂದ ವಿಚಾರಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಹೇಳಿವೆ.

ಚುನಾವಣೆ ಘೋಷಣೆಯಾಗುವ ಮುನ್ನವೇ ಎಲ್ಲ ಪೂರೈಕೆದಾರರಿಂದ ಲಂಚದ ಹಣವನ್ನು ವಸೂಲಿ ಮಾಡುವ ತರಾತುರಿಯಲ್ಲಿ ಅಪ್ಪ ಮತ್ತು ಮಗ ಇದ್ದರು.

ಅದೇ ಕಾರಣಕ್ಕಾಗಿ ಪ್ರಶಾಂತ್ ನಿತ್ಯವೂ ಬೆಂಗಳೂರು ಜಲಮಂಡಳಿ ಕಚೇರಿಯಿಂದ ಕ್ರೆಸೆಂಟ್ ರಸ್ತೆಯ ಖಾಸಗಿ ಕಚೇರಿಗೆ ಬಂದು ಕೆಎಸ್‌ಡಿಎಲ್‌ಗೆ ಕಚ್ಚಾವಸ್ತು ಪೂರೈಸುವ ಕಂಪನಿಗಳ ಪ್ರತಿನಿಧಿಗಳನ್ನು ಭೇಟಿ ಮಾಡುತ್ತಿದ್ದರು ಎಂಬ ಮಾಹಿತಿ ತನಿಖಾ ತಂಡಕ್ಕೆ ಲಭಿಸಿದೆ.

ಡಿವಿಆರ್ ಮಾಹಿತಿ ನಾಪತ್ತೆ: ವಿರೂಪಾಕ್ಷಪ್ಪ ಅವರ ಬೆಂಗಳೂರಿನ ಮನೆ ಹಾಗೂ ಚನ್ನಗಿರಿ ತಾಲ್ಲೂಕಿನ ಚನ್ನೇಶಪುರದ ಮನೆಗಳಿಗೆ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ಮಾಹಿತಿಗಳನ್ನು ಡಿವಿಆರ್‌ನಿಂದ ಅಳಿಸಿ ಹಾಕಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಎರಡೂ ಡಿವಿಆರ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುವ ಲೋಕಾಯುಕ್ತ ಪೊಲೀಸರು, ಮಾರ್ಚ್ 2ರಂದು ಲಂಚ ಪ್ರಕರಣದಲ್ಲಿ ಪ್ರಶಾಂತ್ ಅವರನ್ನು ಬಂಧಿಸುವ ಮುಂಚಿನ ದೃಶ್ಯಾವಳಿಗಳನ್ನು ಹೊರತೆಗೆದುಕೊಡುವಂತೆ ಮನವಿ ಮಾಡಿದ್ದಾರೆ.

ನಾಲ್ಕು ದಿನ ತನಿಖಾ ತಂಡದ ವಶಕ್ಕೆ

ಲಂಚ ಪ್ರಕರಣದಲ್ಲಿ ಬಂಧಿತರಾಗಿರುವ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಹೆಚ್ಚಿನ ವಿಚಾರಣೆಗೆ ನಾಲ್ಕು ದಿನ ಕಾಲ ಲೋಕಾಯುಕ್ತ ಪೊಲೀಸರ ವಶಕ್ಕೆ ನೀಡಿ ಜನಪ್ರತಿನಿಧಿಗಳ ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯ ಮಂಗಳವಾರ ಆದೇಶ ಹೊರಡಿಸಿದೆ.

ಸೋಮವಾರ ರಾತ್ರಿ ವಿರೂಪಾಕ್ಷಪ್ಪ ಅವರನ್ನು ಬಂಧಿಸಲಾಗಿತ್ತು. ಮಂಗಳವಾರ ಮಧ್ಯಾಹ್ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗೆ ವಶಕ್ಕೆ ನೀಡುವಂತೆ ಲೋಕಾಯುಕ್ತ ಪೊಲೀಸರು ಕೋರ್ಟ್‌ಗೆ ಮನವಿ ಮಾಡಿದರು. ಅದನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ನಾಲ್ಕು ದಿನ ವಶಕ್ಕೆ ನೀಡಿ ಆದೇಶ ಹೊರಡಿಸಿದರು.

ಕೆಲಸ ಕಳೆದುಕೊಂಡ ಎಚ್–1ಬಿ ವೀಸಾ ಉಳ್ಳವರ ವಾಸ್ತವ್ಯ – ಅಮೆರಿಕ ಹೇಳಿಕೆ

‘ಎಚ್‌–1ಬಿ ವೀಸಾ: 60 ದಿನದ ಗಡುವು, ತಪ್ಪು ಗ್ರಹಿಕೆ

ವಾಷಿಂಗ್ಟನ್ (ಪಿಟಿಐ): ಸಿಬ್ಬಂದಿ ಕಡಿತದಡಿ ಕೆಲಸ ಕಳೆದುಕೊಂಡ, ಎಚ್‌–1ಬಿ ವೀಸಾವುಳ್ಳವರು 60 ದಿನದಲ್ಲಿ ದೇಶ ಬಿಡಬೇಕು ಎಂಬುದು ತಪ್ಪುಗ್ರಹಿಕೆ. ದೇಶದಲ್ಲಿ ಉಳಿಯಲು ಬಹು ಆಯ್ಕೆಗಳಿವೆ ಎಂದು ಅಮೆರಿಕದ ಪೌರತ್ವ, ವಲಸೆ ಸೇವೆ ವಿಭಾಗ (ಯುಎಸ್‌ಸಿಐಎಸ್) ತಿಳಿಸಿದೆ.

ವಿಭಾಗದ ನಿರ್ದೇಶಕ ಉರ್ ಎಂ.ಜದ್ದೌ ಅವರು, ‘ಬಹುಆಯ್ಕೆಗಳಿರುವ ವಿಷಯ ಬಹುಶಃ ಅವರಿಗೆ ಅರಿವಿಲ್ಲ. ಕೆಲಸ ಕಳೆದುಕೊಂಡ 60 ದಿನದಲ್ಲಿ ದೇಶ ತೊರೆಯದೇ ಅನ್ಯ ಮಾರ್ಗಗಳಿಲ್ಲ ಎಂದೇ ಭಾವಿಸಿದ್ದಾರೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಎಚ್‌–1ಬಿ ವೀಸಾ ಇದ್ದು, ಕೆಲಸ ಕಳೆದುಕೊಂಡದ್ದರ ಪರಿಣಾಮ ಕುರಿತು ಗಮನಸೆಳೆದು 60 ದಿನದ ಗಡುವು ವಿಸ್ತರಿಸಲು ಕೋರಿ ಫೌಂಡೇಷನ್ ಫಾರ್ ಇಂಡಿಯಾ ಅಂಡ್ ಇಂಡಿಯಾ ಡಯ ಸ್ಪೊರಾ ಸ್ಟಡೀಸ್ (ಎಫ್‌ಐ ಐಡಿಎಸ್) ಪತ್ರ ಬರೆದಿತ್ತು. ಇದಕ್ಕೆ ಜದ್ದೌ ಪ್ರತಿಕ್ರಿಯಿಸಿದ್ದಾರೆ.

‘ಮುಖ್ಯವಾಗಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಸಿಬ್ಬಂದಿಯ ಈಗಿನ ವಾಸ್ತವ ಸ್ಥಿತಿಯ ಅರಿವು ನಮಗಿದೆ. ವಲಸಿಗಯೇತರ ಸಿಬ್ಬಂದಿ ಕೆಲಸ ಕಳೆದುಕೊಂಡಾಗ ಸ್ವಯಂಪ್ರೇರಿತವಾಗಿ ಸಹಜವಾಗಿ ಇರುವ ನಾಲ್ಕು ಆಯ್ಕೆಗಳಲ್ಲಿ ಒಂದನ್ನು ಪರಿಗಣಿಸಬೇಕು. ಅರ್ಹರಾಗಿದ್ದಲ್ಲಿ ನಿಗದಿತ ಅವಧಿಯವರೆಗೆ ಅವರು ಅಮೆರಿಕದಲ್ಲಿಯೇ ವಾಸ್ತವ್ಯವನ್ನು ಮುಂದುವರಿಸಬಹುದು’ ಎಂದರು.

ಈ ಆಯ್ಕೆಗಳಲ್ಲಿ ವಲಸಿಗಯೇತರ ಸ್ಥಾನಮಾನವನ್ನು ಹೊಂದಾಣಿಕೆ ಸ್ಥಾನ ಮಾನಕ್ಕೆ ಬದಲಿಸಲು ಕೋರಿ ಅರ್ಜಿ ಸಲ್ಲಿಸುವುದು. ಉದ್ಯೋಗದಾತರ ದೃಢೀಕರಣ ದಾಖಲೆಗೆ ಪೂರಕವಾಗಿ ಪ್ರತ್ಯೇಕ ಅರ್ಜಿ ಸಲ್ಲಿಸುವುದು ಅಥವಾ ಉದ್ಯೋಗದಾತ ಸಂಸ್ಥೆಯ ಬದಲಾವಣೆಗೆ ಸಂಬಂಧಿಸಿದಂತೆ ಇರುವ ಅರ್ಜಿ ಸಲ್ಲಿಸುವುದು ಸೇರಿದೆ ಯುಎಸ್‌ಸಿಐಎಸ್ ವಿವರಿಸಿದೆ.

‘ಈ ಪೈಕಿ ಒಂದು ಆಯ್ಕೆಯು ಊರ್ಜಿತವಾದರೂ ಗರಿಷ್ಠ 60 ದಿನ ಹೆಚ್ಚುವರಿ ಕಾಲಾವಕಾಶ ಸಿಗಲಿದೆ. ಇಂಥ ಸಂದರ್ಭದಲ್ಲಿ ಹಿಂದಿನ ವಲಸಿಗಯೇತರರ ಸ್ಥಾನಮಾನ ಅವಧಿ ಮುಗಿದಿದ್ದರೂ ಹೆಚ್ಚುವರಿ 60 ದಿನ ಉಳಿಯುವ ಕಾಲಾವಕಾಶ ಸಿಗಲಿದೆ’ ಎಂದು ವಿವರಿಸಿದೆ.

‘ಹೆಚ್ಚುವರಿ ಅವಧಿಯಲ್ಲಿಯೂ ನಿರ್ದಿಷ್ಟ ಸಿಬ್ಬಂದಿಗೆ ಯಾವುದೇ ಪರ್ಯಾಯ ಸಿಗದಿದ್ದರೆ, ಆತ ಮತ್ತು ಆತನ ಕುಟುಂಬವು 60 ದಿನ ಅಥವಾ ಅನುಮತಿ ನೀಡಲಾದ ಹೆಚ್ಚುವರಿ ಸಮಯ, ಯಾವುದು ಮೊದಲೊ ಆ ಅವಧಿಯಲ್ಲಿ ದೇಶವನ್ನು ತೊರೆಯಬೇಕು’ ಎಂದು ಹೇಳಿದೆ.

ಮತದಾರರ ಜಾಗೃತಿಗಾಗಿ ‘ನಮ್ಮ ಬೆಂಗಳೂರು ಐಕಾನ್ಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಮತದಾರರಲ್ಲಿ ಜಾಗೃತಿ ಮೂಡಿಸಲು ಐವರು ಪ್ರಮುಖ ವ್ಯಕ್ತಿಗಳನ್ನು ‘ನಮ್ಮ ಬೆಂಗಳೂರು ಐಕಾನ್ಸ್’ಗಳಾಗಿ ನೇಮಕ ಮಾಡಿಕೊಳ್ಳಲಾಗಿದೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ನಮ್ಮ ಬೆಂಗಳೂರು ಐಕಾನ್ಸ್’ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ವ್ಯವಸ್ಥಿತವಾಗಿ ಮತದಾನ ಮಾಡುವ ಸಲುವಾಗಿ 10 ದಿನಗಳ ಮುಂಚಿತವಾಗಿಯೇ ಮತದಾನದ ಚೀಟಿ ಹಾಗೂ ಮತಗಟ್ಟೆಯ ಮಾಹಿತಿ ನೀಡಲಾಗುವುದು. ಇಲ್ಲವೇ ವಿ.ಎಚ್.ಎ ತಂತ್ರಾಂಶದಲ್ಲಿ ಮತದಾರರ ಗುರುತಿನ ಚೀಟಿ ಸಂಖ್ಯೆ ನಮೂದಿಸಿದರೆ ಸಾಕು ಎಲ್ಲಾ ಮಾಹಿತಿ ಲಭ್ಯವಾಗಲಿದೆ ಎಂದರು.

ಮತ ಚಲಾಯಿಸುವುದು ಎಲ್ಲರ ಆದ್ಯ ಕರ್ತವ್ಯ. ಹಿಂದಿನ ದಿನಗಳಲ್ಲಿ



‘ನಮ್ಮ ಬೆಂಗಳೂರು ಐಕಾನ್ಸ್’ ಅನಾವರಣ ಕಾರ್ಯಕ್ರಮದಲ್ಲಿ ಐಕಾನ್‌ಗಳನ್ನು ಬಿಬಿಎಂಪಿ ವತಿಯಿಂದ ಸನ್ಮಾನಿಸಲಾಯಿತು.

ಮತದಾನ ಮಾಡುವ ದಿನ ಮತಗಟ್ಟೆಗಳ ಬಳಿ ಯಾವುದೇ ರೀತಿಯ ಸೌಲಭ್ಯಗಳು ಇರುತ್ತಿರಲಿಲ್ಲ. ಆದರೀಗ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿದ್ದರೂ ಮತ ಚಲಾಯಿಸುವವರು ಕಡಿಮೆ. ನಿಮಗೆ ಮತ ಚಲಾಯಿಸಲು ಇಷ್ಟವಿಲ್ಲದಿದ್ದರೆ ನೋಟ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಎಲ್ಲರೂ ಮತ ಚಲಾಯಿಸಲು ಮನವಿ ಮಾಡಿದರು.

ಬೆಂಗಳೂರು ನಗರದ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಮಾತನಾಡಿ, ‘ಮುಂಬರುವ ಚುನಾವಣೆಯಲ್ಲಿ ಮತದಾರರು ಉತ್ತಮ ರೀತಿಯಲ್ಲಿ ಭಾಗವಹಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಬೇಕು’ ಎಂದು ತಿಳಿಸಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಉಜ್ವಲ್ ಕುಮಾರ್ ಘೋಷ್, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಸಂಗಪ್ಪ, ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳಾದ ಡಾ. ಹರೀಶ್ ಕುಮಾರ್, ಡಾ. ಜಗದೀಶ್ ನಾಯ್ಕ್, ಸ್ವೀಪ್ ನೋಡಲ್ ಅಧಿಕಾರಿ ಸಿದ್ದೇಶ್ವರ್, ಚುನಾವಣಾ ವಿಭಾಗದ ಉಪ ಆಯುಕ್ತ ಉಮೇಶ್ ಇದ್ದರು.

ಐಕಾನ್‌ಗಳು

- ಅನೂಪ್ ಶ್ರೀಧರ್, ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್, ಅರ್ಜುನ ಪ್ರಶಸ್ತಿ ವಿಜೇತರು
- ಶರತ್ ಎಂ. ಗಾಯಕವಾಡ್, ಅಂತರರಾಷ್ಟ್ರೀಯ ಪ್ಯಾರಾ ಈಜುಗಾರ
- ಮೋಹನ್ ಕುಮಾರ್ ಎನ್., ಬುಡಕಟ್ಟು ಜನಾಂಗದ ಗಾಯಕ
- ಆನಂದ್ ಎಚ್. (ಮಾಸ್ಟರ್ ಆನಂದ್), ನಟ, ನಿರೂಪಕ
- ತೇಜಸ್ವಿನಿ ಬಾಯಿ ವಿ., ಅಂತರರಾಷ್ಟ್ರೀಯ ಕಬ್ಬಡಿ ಆಟಗಾರ್ತಿ, ಅರ್ಜುನ ಪ್ರಶಸ್ತಿ ವಿಜೇತರು

ನಗರದಲ್ಲಿ ಇಂದು

ಬ್ರಹ್ಮರಥೋತ್ಸವ: ಬೆಳಿಗ್ಗೆ 10ಕ್ಕೆ ವೇಣುಗೋಪಾಲಸ್ವಾಮಿಗೆ ನವನೀತ (ಬೆಣ್ಣೆ) ಅಲಂಕಾರ, ಸಂಜೆ 6ಕ್ಕೆ ಸಿಂಹ ವಾಹನೋತ್ಸವ, ಆಯೋಜನೆ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ

ನೃಪತುಂಗ ಸಾಹಿತ್ಯ ಪ್ರಶಸ್ತಿ ಹಾಗೂ ಮಯೂರವರ್ಮ ಸಾಹಿತ್ಯ ಪ್ರಶಸ್ತಿ ಪ್ರದಾನ: ಚಂದ್ರಶೇಖರ ಕಂಬಾರ, ಉದ್ಘಾಟನೆ: ಎನ್.ಎಸ್. ನಂದೀಶರೆಡ್ಡಿ, ಅಧ್ಯಕ್ಷತೆ: ಮಹೇಶ ಜೋಶಿ, ನೃಪತುಂಗ ಸಾಹಿತ್ಯ ಪುರಸ್ಕೃತರು: ವೈದೇಹಿ, ಅತಿಥಿಗಳು: ಸತ್ಯವತಿ, ವಿಶ್ವನಾಥ ಪಿ. ಹಿರೇಮಠ, ಉಪಸ್ಥಿತಿ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ 11

‘ರೈತ ಪ್ರಣಾಳಿಕೆ’ ಕುರಿತು ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಚರ್ಚೆ: ಪ್ರಾಸ್ತಾವಿಕ ನುಡಿ: ಕುರುಬೂರು ಶಾಂತಕುಮಾರ್, ಅಧ್ಯಕ್ಷತೆ: ಶ್ರೀಧರ್, ಅತಿಥಿ: ಮಲ್ಲಪ್ಪ, ಆಯೋಜನೆ: ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ವೈದೇಹಿ ಅವರಿಗೆ ಅಭಿನಂದನೆ, ಲಲಿತಮ್ಮ ಚಂದ್ರಶೇಖರ್ ಅವರ ‘ನೆನಪಿನ ಉಗ್ರಾಣ’ ಪುಸ್ತಕ ಬಿಡುಗಡೆ: ಪ್ರಾಸ್ತಾವಿಕ ನುಡಿ: ಎಂ.ಎಸ್. ಆಶಾದೇವಿ, ಪುಸ್ತಕ ಬಿಡುಗಡೆ: ಸಿ.ಎನ್. ರಾಮಚಂದ್ರನ್, ಪುಸ್ತಕದ ಕುರಿತು: ಚ.ಹ. ರಘುನಾಥ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಉಪಸ್ಥಿತಿ: ಲಲಿತಮ್ಮ ಚಂದ್ರಶೇಖರ್, ವೈದೇಹಿ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ವಸಂತ ಪ್ರಕಾಶನ, ಸ್ಥಳ: ಚಿತ್ರಕಲಾ ಪರಿಷತ್ತಿನ ಆವರಣ, ಮಧ್ಯಾಹ್ನ 3.30ರಿಂದ

ಮುತ್ಯಾಲಮ್ಮ ದೇವಿಯ ರಥೋತ್ಸವ: ಹೂವಿನ ಪಲ್ಲಕ್ಕಿ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ಶ್ರೀರಾಮೋತ್ಸವ ವಿಶೇಷ

‘ಶ್ರೀರಾಮೋತ್ಸವ’ ಸಂಗೀತ ಕಾರ್ಯಕ್ರಮ: ಪ್ರವಚನ: ಕಲ್ಲಾಪುರ ಪವಮಾನಾಚಾರ್ಯ, ಹರಿದಾಸ ಗಾನಾಮೃತ: ಕೀರ್ತನ ಸಾಮ್ರಾಟ್, ಮೈಸೂರು ರಾಮಚಂದ್ರಾಚಾರ್ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 5.30ರಿಂದ

ಶ್ರೀರಾಮೋತ್ಸವ: ಗಣಪತಿ ಪೂಜೆ, ಭರತನಾಟ್ಯ ಪ್ರದರ್ಶನ: ಕಲಾಕಲ್ಪ ಕ್ಷೇತ್ರ ಮತ್ತು ಲಕ್ಷ್ಮೀ ಕಲಾಲಯಂ ವಿದ್ಯಾರ್ಥಿಗಳಿಂದ, ನಿರ್ದೇಶನ: ಅರುಣಾ, ರಮಾ ವೇಣುಗೋಪಾಲ್, ಆಯೋಜನೆ: ಶ್ರೀರಾಮ ಸೇವಾ ಮಂಡಳಿ, ಸ್ಥಳ: ರಾಜಾಜಿನಗರ, ಸಂಜೆ 6ರಿಂದ

ಪ್ರವಚನ ವಾಹಿನಿ: ‘ಆಳ್ವಾರ್–ಆಚಾರ್ಯರು ಒಂದು ಅವಲೋಕನ’ ಕುರಿತು ಪ್ರವಚನ: ಎನ್.ಕೆ. ರಾಮಶೇಷನ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ:ಎಚ್. ಎನ್. ಕಾರ್ತಿಕೇಯ ಶರ್ಮ, ಪಿಟೀಲು: ಕಾರ್ತಿಕೇಯ ಎಚ್., ಮೃದಂಗ: ಬಿ.ಎಸ್. ಪ್ರಶಾಂತ್, ಮೋರ್ಚಿಂಗ್: ಲಕ್ಷ್ಮೀನಾರಾಯಣ, ಸ್ಥಳ: ಶ್ರೀ ರಾಘವೇಂದ್ರ ಮತ್ತು ಆಂಜನೇಯ ಸ್ವಾಮಿಗಳ ದೇವಾಲಯದ ಆವರಣ, 8ನೇ ಕ್ರಾಸ್, ಮಲ್ಲೇಶ್ವರ, 6.30

ರಾಮನವಮಿ: ಸಂಗೀತ ಕಾರ್ಯಕ್ರಮ: ಎಂ.ವಿ. ಶ್ರೀನಿವಾಸ ಮೂರ್ತಿ, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮ ನವಮಿ ಉತ್ಸವ: ಗಾಯನ: ಮಾನಸಿ ಪ್ರಸಾದ್, ಪಿಟೀಲು: ಅನಿರುದ್ಧ ಭಾರದ್ವಾಜ್, ಮೃದಂಗ: ಸುನೀಲ್ ಸುಬ್ರಹ್ಮಣ್ಯ, ಘಟ: ಶ್ರೀಶೈಲನ್ ಎಸ್., ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ಮತ್ತೆ ‘ಕೈ’ ಹಿಡಿದ ಮಂಜುನಾಥ್ ಕುನ್ನೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕ್ಷೇತ್ರ ಶಿಗ್ಗಾವಿಯ ಬಿಜೆಪಿ ನಾಯಕ, ಮಾಜಿ ಸಂಸದ ಮಂಜುನಾಥ್ ಕುನ್ನೂರ, ಪುತ್ರ ರಾಜು ಕುನ್ನೂರ, ಅವರ ಬೆಂಬಲಿಗರು ಮತ್ತು ಚಿಂತಾಮಣಿ, ಕೆ.ಆರ್. ಪೇಟೆ, ಶಿವಮೊಗ್ಗ ಕ್ಷೇತ್ರದ ವಿವಿಧ ಪಕ್ಷಗಳ ಮುಖಂಡರು, ಹಲವು ಕಾರ್ಯಕರ್ತರು ಸೋಮವಾರ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ರೆಹಮಾನ್ ಖಾನ್ ಅವರ ಸಮ್ಮುಖದಲ್ಲಿ ಎಲ್ಲರೂ ಕಾಂಗ್ರೆಸ್ ಸೇರ್ಪಡೆಯಾದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಮುಖಂಡರಾದ ಪ್ರಿಯಾಂಕ್ ಖರ್ಗೆ, ಚಲುವರಾಯಸ್ವಾಮಿ, ನರೇಂದ್ರಸ್ವಾಮಿ ಇದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್ ಅವರು, ‘ಮುಖ್ಯಮಂತ್ರಿ ತನ್ನ ಆಪ್ತರನ್ನೇ ವಿಶ್ವಾಸಕ್ಕೆ ತೆಗೆದುಕೊಳ್ಳದಿರುವಾಗ ರಾಜ್ಯದ ಜನರ ವಿಶ್ವಾಸ ಗಳಿಸಲು ಸಾಧ್ಯವೇ? ಮಂಜುನಾಥ್ ಕುನ್ನೂರ ಅವರು ಲೋಕಸಭೆ ಮಾಜಿ ಸದಸ್ಯರು, ಮೂರು ಬಾರಿ ಶಾಸಕರಾಗಿದ್ದರು. ಅವರು ಬಿಜೆಪಿ ತೊರೆದು ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಬೇಷರತ್ ಸೇರುತ್ತಿದ್ದಾರೆ. ಬಿಜೆಪಿ ನಾಯಕರೇ ಮುಖ್ಯಮಂತ್ರಿ ಕ್ಷೇತ್ರದಲ್ಲಿ ಬದಲಾವಣೆ ಬಯಸಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ’ ಎಂದು ಹೇಳಿದರು.

‘ಜೆಡಿಎಸ್ ತ್ಯಜಿಸಿ ಚಿಂತಾಮಣಿ ಕ್ಷೇತ್ರದ ಮೂವರು ಪ್ರಮುಖ ನಾಯಕರು ಪಕ್ಷ ಸೇರುತ್ತಿದ್ದಾರೆ. ಯುವ ಮಿತ್ರ ಸುಧಾಕರ್ ಅವರು ಸಾಕಷ್ಟು ಬಾರಿ ನನ್ನನ್ನು ಭೇಟಿ ಮಾಡಿ ಪಕ್ಷ ಸೇರ್ಪಡೆ ಬಗ್ಗೆ ತಿಳಿಸಿದ್ದರು. ಅವರನ್ನು ನಾವು ಪಕ್ಷದ ಅಭ್ಯರ್ಥಿ ಎಂದು ತೀರ್ಮಾನಿಸಿದ್ದೇವೆ’ ಎಂದರು.

ಕೆ.ಆರ್. ಪೇಟೆಯ ಜೆಡಿಎಸ್ ನಾಯಕ ದೇವರಾಜ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿದ ಶಿವಕುಮಾರ್, ‘ಮಂಡ್ಯ ಜಿಲ್ಲೆಯ ಬಹಳಷ್ಟು ಜೆಡಿಸ್ ನಾಯಕರು ಕಾಂಗ್ರೆಸ್ ಸೇರುತ್ತಿದ್ದಾರೆ. ಕೆ.ಆರ್. ಪೇಟೆಯ ಉಪ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ 57 ಸಾವಿರ ಮತ ಪಡೆದಿದ್ದ ದೇವರಾಜ್ ಎರಡನೇ ಸ್ಥಾನ ಪಡೆದಿದ್ದರು. ಶಿವಮೊಗ್ಗದ ಜೆಡಿಎಸ್ ಕಾರ್ಯದರ್ಶಿ ಅರುಣ್ ಕುಮಾರ್ ಕೂಡ ಪಕ್ಷಕ್ಕೆ ಬಂದಿದ್ದಾರೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಗುಬ್ಬಿ ಶ್ರೀನಿವಾಸ್ ಅವರು ಪಕ್ಷ ಸೇರಲು ಅರ್ಜಿ ಹಾಕಿದ್ದಾರೆ. ಅವರನ್ನು ಮತ್ತೊಂದು ದಿನ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ’ ಎಂದು ಹೇಳಿದರು.

ನೂಕುನುಗ್ಗಲು: ಕೆ.ಆರ್. ಪೇಟೆ, ಶಿಗ್ಗಾವಿ ಹಾಗೂ ಚಿಂತಾಮಣಿ ಕ್ಷೇತ್ರಗಳಿಂದ ಬಂದ ವಿವಿಧ ಪಕ್ಷಗಳ ಬೆಂಬಲಿಗರು, ಕಾರ್ಯಕರ್ತರು ಕೆಪಿಸಿಸಿ ಕಚೇರಿ ಸಭಾಂಗಣ ಒಳಗೆ ಪ್ರವೇಶಿಸುವ ವೇಳೆಯಲ್ಲಿ ಭಾರಿ ನೂಕುನುಗ್ಗಲು ಉಂಟಾಯಿತು.

ದರ್ಶನ್ ಪುಟ್ಟಣ್ಣಯ್ಯ ಜೊತೆ ‘ಕೈ’ ನಾಯಕರ ಚರ್ಚೆ

ಬೆಂಗಳೂರು: ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ರೈತ ಸಂಘಕ್ಕೆ ಬೆಂಬಲ ನೀಡಲು ಮುಂದಾಗಿರುವ ಕಾಂಗ್ರೆಸ್ ನಾಯಕರು, ರೈತ ಸಂಘದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಜೊತೆ ಸೋಮವಾರ ಚರ್ಚೆ ನಡೆಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಂಡ್ಯ ಜಿಲ್ಲೆಯ ನಾಯಕರಾದ ಎನ್. ಚಲುವರಾಯಸ್ವಾಮಿ, ಪಿ.ಎಂ. ನರೇಂದ್ರ ಸ್ವಾಮಿ ಸೇರಿದಂತೆ ಹಲವು ನಾಯಕರು ಭಾಗವಹಿಸಿದರು. ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿಯೂ ರೈತ ಸಂಘಕ್ಕೆ ಕಾಂಗ್ರೆಸ್ ಬೆಂಬಲ ನೀಡಿತ್ತು.

ಬೆಂಗಳೂರು ವಿ.ವಿಗೆ ಐಎಸ್‌ಒ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯಕ್ಕೆ ‘ಐಎಸ್‌ಒ-9001-2015’ ಪ್ರಮಾಣಪತ್ರ ಲಭಿಸಿದೆ.

ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಈ ಪ್ರಮಾಣಪತ್ರ ಪಡೆದಿರುವ ಮೊದಲ ವಿಶ್ವವಿದ್ಯಾಲಯ ಇದಾಗಿದೆ.

‘ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತ್ (ನ್ಯಾಕ್) ಮಾನ್ಯತೆಗೆ ಐಎಸ್‌ಒ ಪ್ರಮಾಣಪತ್ರ ಪೂರಕವಾಗಲಿದೆ. ಗ್ರೇಡ್ ಸುಧಾರಣೆಗೆ ಇದು ಮಹತ್ವದ್ದಾಗಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎಂ. ಜಯಕರ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಬೆಂಗಳೂರು ವಿ.ವಿ ಕುಲಪತಿ ಡಾ.ಎಸ್. ಎಂ. ಜಯಕರ್ ಅವರು ಐಎಸ್‌ಒ ಪ್ರಮಾಣಪತ್ರವನ್ನು ಪರಿಶೋಧಕರಾದ ಡಾ. ಲಕ್ಷ್ಮಿಶ್ರೀನಿವಾಸನ್ ಅವರಿಂದ ಸ್ವೀಕರಿಸಿದರು. ಕುಲಸಚಿವ ಎನ್. ಮಹೇಶಬಾಬು ಇದ್ದರು.

‘ಶಿಕ್ಷಣದ ಗುಣಮಟ್ಟ, ಬೋಧನೆ, ಬೋಧಕೇತರ ಸಿಬ್ಬಂದಿ, ಮೂಲಸೌಕರ್ಯ ಮುಂತಾದ ಅಂಶಗಳನ್ನು ಪರಿಗಣಿಸಿ ಐಎಸ್‌ಒ ಪ್ರಮಾಣಪತ್ರ ನೀಡಲಾಗಿದೆ. ಮುಂದಿನ ಮೂರು ವರ್ಷಗಳ ಅವಧಿಗೆ ಈ ಪ್ರಮಾಣಪತ್ರ ನೀಡಲಾಗಿದೆ’ ಎಂದರು.

ಸಲಹೆಗಳು: ಐಎಸ್‌ಒ ಪ್ರಮಾಣಪತ್ರಕ್ಕಾಗಿ ಆಡಿಟ್ ಪ್ರಕ್ರಿಯೆಯನ್ನು ಕೈಗೊಂಡಿರುವ ‘ಬ್ರಿಡ್ಜಮಾನ್ ನೋಬಲ್ ಎಲ್ ಎಲ್‌ಪಿ’ ಸಂಸ್ಥೆಯು ವಿ.ವಿಯ ಅಭಿವೃದ್ಧಿಗೆ ಕೆಲವು ಸಲಹೆಗಳನ್ನು ನೀಡಿದೆ.

ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಕೌಶಲ ಹೆಚ್ಚಿಸಲು ಆದ್ಯತೆ ನೀಡಬೇಕು. ನಾಯಕತ್ವ ಗುಣಗಳನ್ನು ಬೆಳೆಸಬೇಕು, ಉದ್ಯೋಗಾವಕಾಶಗಳನ್ನು ಕಲ್ಪಿಸಲು ಕ್ರಮಕೈಗೊಳ್ಳಬೇಕು ಹಾಗೂ ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡಿಂಗ್ ಮಾಡುವ ಯೋಜನೆಗಳನ್ನು ರೂಪಿಸಬೇಕು ಎಂದು ತಿಳಿಸಿದೆ.

ಮೂವರು ಶುಶ್ರೂಷಕಿಯರ ಸೇರಿ 6 ಮಂದಿ ವಿರುದ್ಧ ಪ್ರಕರಣ

ನಿರ್ಲಕ್ಷ್ಯದಿಂದ ಬಾಣಂತಿ ಸಾವು: ಆರೋಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಜಿಮ್ಸ್ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಬಾಣಂತಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಆಕೆಯ ಪತಿ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ದೂರು ನೀಡಿದ್ದಾರೆ.

ಮೂವರು ಶುಶ್ರೂಷಕಿಯರು, ಜಿಲ್ಲಾ ಶಸ್ತ್ರಚಿಕಿತ್ಸಕ ಅಧಿಕಾರಿ, ವೈದ್ಯಕೀಯ ಅಧೀಕ್ಷಕ ಹಾಗೂ ಜಿಲ್ಲಾ ಆರೋಗ್ಯ ಅಧಿಕಾರಿ ವಿರುದ್ಧ ಪ್ರಕರಣ ದಾಖಲಾಗಿದೆ.

‘ಚಂದಾ ನಗರದ ನಿವಾಸಿ ಅನಿತಾ ಲಕ್ಷ್ಮಣ ಲಸ್ಕರ (22) ಮೃತರು. ಹೆರಿಗೆ ನೋವಿನ ಕಾರಣ ಮಾರ್ಚ್ 18ರಂದು ಆಸ್ಪತ್ರೆಗೆ ದಾಖಲಿಸಲಾಯಿತು.



ಅನಿತಾ

ತಪಾಸಣೆ ಬಳಿಕ ಸಾಮಾನ್ಯ ಹೆರಿಗೆ ಮಾಡುವುದಾಗಿ ಆಸ್ಪತ್ರೆ ಶುಶ್ರೂಷಕಿ ಹೇಳಿದರು. ಸಿಸೇರಿಯನ್ ಹೆರಿಗೆ ಮಾಡಲು ಕೋರಿದರೂ ಸಾಮಾನ್ಯ ಹೆರಿಗೆ ಮಾಡುವುದಾಗಿ ಹೇಳಿ, ಗುಪ್ತಾಂಗದಲ್ಲಿ 20 ಹೊಲಿಗೆ ಹಾಕಿದ್ದಾರೆ. ಹಿರಿಯ ವೈದ್ಯರಿಲ್ಲದೆ ಮೂವರು ಶುಶ್ರೂಷಕಿಯರು ಹೆರಿಗೆ ಮಾಡಿದರು’ ಎಂದು ಅನಿತಾ ಪತಿ ಲಕ್ಷ್ಮಣ ಆರೋಪಿಸಿದರು.

‘ಹೊಲಿಗೆ ಹಾಕಿದ್ದ ಅಂಗದಲ್ಲಿ ನೋವಿದ್ದು, ಜ್ವರ ಬರುತ್ತಿದೆ. ಮನೆಗೆ ಹೋಗುವುದಿಲ್ಲ ಎಂದು ಅನಿತಾ ಹೇಳಿದರೂ ಶುಶ್ರೂಷಕಿಯರು ಮಾತ್ರೆಗಳನ್ನು ನೀಡಿ ಮನೆಗೆ ಕಳುಹಿಸಿದರು. ಮೂರು ದಿನಗಳಾದರೂ ನೋವು ಕಡಿಮೆ ಆಗಲಿಲ್ಲ. ಜ್ವರ, ನೋವಿನ ಕಾರಣಕ್ಕೆ ಮಾರ್ಚ್ 26ರಂದು ಆಸ್ಪತ್ರೆಗೆ ದಾಖಲಿಸಿದೆವು. ಬೇಗ ಗುಣಮುಖರಾಗುತ್ತಾರೆ ಎಂಬ ಭರವಸೆ ಸಿಕ್ಕಿತು. ಆದರೆ, ಆಕೆ ಮಾರ್ಚ್ 28ರಂದು ಮಧ್ಯಾಹ್ನ ಮೃತಪಟ್ಟರೆಂದು ಘೋಷಿಸಲಾಯಿತು’ ಎಂದು ಅವರು ತಿಳಿಸಿದರು.

‘ಶುಚಿತ್ವ ಕಾಪಾಡಿಕೊಂಡಿಲ್ಲ’


‘ಸಾಮಾನ್ಯ ಹೆರಿಗೆಯಾಗಿದ್ದು, ತಾಯಿ ಮತ್ತು ಮಗುವಿಗೆ ತೊಂದರೆ ಆಗದಿರಲಿ ಎಂದು ಹೊಲಿಗೆ ಹಾಕಿದ್ದೇವೆ. ಪರಿಣಿತ ವೈದ್ಯರು ಹೆರಿಗೆ ಮಾಡಿದ್ದು, ಮನೆಗೆ ಮರಳುವಾಗ ವೇಳೆ ಆರೋಗ್ಯವಾಗಿದ್ದರು. ಮನೆಗೆ ಹೋದ ಮೂರು ದಿನಗಳ ಬಳಿಕ ಅವರನ್ನು ಆಸ್ಪತ್ರೆಗೆ ಕರೆತಂದರು. ವಿಪರೀತ ಜ್ವರದ ಜೊತೆಗೆ ಹೊಲಿಗೆಯಿಂದ ದೇಹದಲ್ಲಿ ನಂಜು ಹರಡಿದೆ. ಶುಚಿತ್ವ ಕಾಪಾಡಿಕೊಳ್ಳದೇ ಇರುವುದು ಕೂಡ ಇದಕ್ಕೆ ಕಾರಣ’ ಎಂದು ಜಿಮ್ಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಡಾ. ಉಷಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಾಣಂತಿಗೆ ಅಗತ್ಯ ಚಿಕಿತ್ಸೆ ನೀಡಲಾಗಿದ್ದು, ವೈದ್ಯಕೀಯ ನಿರ್ಲಕ್ಷ್ಯದಿಂದ ಮೃತಪಟ್ಟಿರುವ ಸಾಧ್ಯತೆ ಇಲ್ಲ. ಮರಣೋತ್ತರ ಪರೀಕ್ಷೆ ಬಳಿಕ ನಿಖರ ಕಾರಣ ತಿಳಿದು ಬರಲಿದೆ’ ಎಂದು ಜಿಮ್ಸ್ ನಿರ್ದೇಶಕಿ ಡಾ.ಕವಿತಾ ಪಾಟೀಲ ಹೇಳಿದರು.

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮೊನ್ನೆಯಷ್ಟೆ ಎಲ್.ವಿ.ಎಂ.3 ಯಶಸ್ವಿ ಉಡಾವಣೆ ಮೂಲಕ ಇಸ್ರೊ ಮತ್ತೊಂದು ಮೈಲುಗಲ್ಲನ್ನು ಸಾಧಿಸಿದೆ



ಹೊರ ರಾಜ್ಯ
ಅಸ್ಸಾಂ: ಕ್ಷೇತ್ರ ಮರುವಿಂಗಡಣೆ ಸುತ್ತ ಹಲವು ಪ್ರಶ್ನೆ

ಕೋವಿಡ್: 1,573 ಮಂದಿಗೆ ಸೋಂಕು 7

ಬ್ಯಾಂಕ್ ಹಗರಣ: ₹ 114 ಕೋಟಿ ಮೌಲ್ಯದ ಆಸ್ತಿ ಜಪ್ತಿ 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,613 ▼	16,951 ▼	₹60,860 (ಬೆಂಗಳೂರು) ▼	₹71,500 (ಬೆಂಗಳೂರು) ▼	82.16 ▲

ಪಕ್ಷದ ಮುಂದೆ ಪ್ರಸ್ತಾವವಿಟ್ಟ ಯುವ ಎಂ.ಪಿಗಳು: ಪಕ್ಷದ ನಾಯಕತ್ವದ ಬೆಂಬಲ ಇಲ್ಲ

‘ಕೈ’ ಸಂಸದರೆಲ್ಲರ ರಾಜೀನಾಮೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿದ ಬಳಿಕ ಸುದೀರ್ಘ ರಾಜಕೀಯ ಹೋರಾಟಕ್ಕೆ ಪಕ್ಷವು ಸಜ್ಜಾಗಿದೆ. ರಾಹುಲ್ ಅವರ ಸದಸ್ಯತ್ವವನ್ನು ಅನರ್ಹಗೊಳಿಸಿದ್ದನ್ನು ಖಂಡಿಸಿ ಪಕ್ಷದ ಎಲ್ಲ ಸಂಸದರೂ ರಾಜೀನಾಮೆ ನೀಡಬೇಕು ಎಂಬ ಸಲಹೆಯನ್ನು ಕೆಲವು ಯುವ ಸಂಸದರು ಮುಂದಿಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ರವನೀತ್ ಬಿಟ್ಟು ಅವರು, ಪಕ್ಷದ ಮುಖಂಡರು ಕಳೆದ ಶುಕ್ರವಾರ ನಡೆಸಿದ ಸಭೆಯಲ್ಲಿ ಮೊದಲ ಬಾರಿಗೆ ಈ ವಿಚಾರವನ್ನು ಮುಂದಿಟ್ಟಿದ್ದಾರೆ. ಅನರ್ಹತೆಯ ಅಧಿಸೂಚನೆ ಪ್ರಕಟವಾದ ಕೆಲವೇ ತಾಸುಗಳಲ್ಲಿ ಈ ಸಭೆ ನಡೆದಿತ್ತು. ಬಿಟ್ಟು ಅವರು ಮುಂದಿಟ್ಟ ಪ್ರಸ್ತಾವವನ್ನು ಪಕ್ಷದ ಸಂಸದ ಮಾಣಿಕಂ ಟ್ಯಾಗೋರ್ ಬೆಂಬಲಿಸಿದರು.

9ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 9



ಅನರ್ಹತೆಯನ್ನು ಖಂಡಿಸಿ ನವದೆಹಲಿಯ ಕೆಂಪುಕೋಟೆಯ ಬಳಿ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಶ್ರೀನಿವಾಸ ಬಿ.ವಿ. ಮತ್ತಿತರರನ್ನು ಪೊಲೀಸರು ವಶಕ್ಕೆ ಪಡೆದರು –ಪಿಟಿಐ ಚಿತ್ರ

ಬಂಗಲೆ ತೆರವು: ನೋಟಿಸ್ ಪಾಲಿಸುವುದಾಗಿ ರಾಹುಲ್ ಹೇಳಿಕೆ

ಅಧಿಕೃತ ನಿವಾಸ ತೆರವುಗೊಳಿಸಲು ಲೋಕಸಭಾ ಕಾರ್ಯಾಲಯವು ನೀಡಿದ ನೋಟಿಸ್ ಅನ್ನು ಪಾಲಿಸಲಾಗುವುದು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಆದರೆ, ರಾಹುಲ್ ಅವರನ್ನು ಅವಮಾನಿಸುವ ಉದ್ದೇಶದಿಂದ ಸರ್ಕಾರ ಕೈಗೊಂಡ ಕ್ರಮ ಇದು ಎಂದು ಕಾಂಗ್ರೆಸ್ ಟೀಕಿಸಿದೆ. ರಾಹುಲ್ ಅವರು ಬಂಗಲೆಯನ್ನು ಏಪ್ರಿಲ್ 22ಕ್ಕೆ ಮೊದಲು ತೆರವು ಮಾಡಬೇಕಾಗಿದೆ.

ಲೋಕಸಭೆಯ ವಸತಿ ಸಮಿತಿಯು ಈ ನಿರ್ಧಾರ ಕೈಗೊಂಡಿದೆ. ರಾಹುಲ್ ಅವರು ತುಘಲಕ್ ಲೇನ್‌ನ 12ನೇ ಸಂಖ್ಯೆಯ ಬಂಗಲೆಯಲ್ಲಿ 2005ರಿಂದ ವಾಸವಿದ್ದಾರೆ. ಝಡ್ + ಭದ್ರತೆ ಹೊಂದಿರುವ ರಾಹುಲ್ ಅವರ ಭದ್ರತೆಯ ಮೇಲೆಯೂ ಬಂಗಲೆ ತೆರವು ಪರಿಣಾಮ ಬೀರಬಹುದು ಎಂದು ಕೂಡ ಕೆಲವರು ಕಳವಳ ವ್ಯಕ್ತಪಡಿಸಿದ್ದಾರೆ.

ವಿವಿಧ ಬೆಳವಣಿಗೆಗಳು

- ಅನರ್ಹತೆಯನ್ನು ಖಂಡಿಸಿ ಕಾಂಗ್ರೆಸ್ ಸಂಸದರು ಮತ್ತು ಕಾರ್ಯಕರ್ತರು ದೆಹಲಿಯ ಕೆಂಪುಕೋಟೆಯ ಬಳಿ ಮಂಗಳವಾರ ಸಂಜೆ ಪಂಜಿನ ಮೆರವಣಿಗೆ ನಡೆಸಿದರು. ಆದರೆ, ಹಲವು ಸಂಸದರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು
- ಸರ್ಕಾರ ನಿವಾಸವನ್ನು ತೆರವು ಮಾಡುವಂತೆ ರಾಹುಲ್ ಅವರಿಗೆ ನೋಟಿಸ್ ನೀಡಿದ್ದನ್ನು ಖಂಡಿಸಿ, ಉತ್ತರ ಪ್ರದೇಶ ಕಾಂಗ್ರೆಸ್ ವಿನೂತನ ಪ್ರತಿಭಟನೆ ನಡೆಸಿದೆ. ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ತಮ್ಮ ಮನೆಯ ಮುಂದೆ, ‘ನಮ್ಮ ಮನೆ, ರಾಹುಲ್ ಗಾಂಧಿಯ ಮನೆ’ ಎಂಬ ಪೋಸ್ಟರ್ ಅಂಟಿಸುವ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಿಂದಲೇ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ
- ಸಂಸದ ಸ್ಥಾನದಿಂದ ರಾಹುಲ್ ಅವರನ್ನು ಅನರ್ಹಗೊಳಿಸುವಲ್ಲಿ ಪಕ್ಷಪಾತ ತೋರಿದ್ದಾರೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ ಎಂದು ಮೂಲಗಳು ಹೇಳಿವೆ
- ಏಪ್ರಿಲ್‌ನಲ್ಲಿ ವಿರೋಧ ಪಕ್ಷಗಳ ನಾಯಕರ ಸಭೆ ಕರೆಯಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ ಎಂದು ಮೂಲಗಳು ಹೇಳಿವೆ

ಪಿ.ಎಫ್. ಬಡ್ಡಿ ಶೇ 8.15

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) 2022–23ನೇ ಹಣಕಾಸು ವರ್ಷಕ್ಕೆ ನೌಕರರ ಪಿ.ಎಫ್. ಠೇವಣಿಗಳಿಗೆ ಬಡ್ಡಿಯನ್ನು ಶೇಕಡ 8.15ಕ್ಕೆ ಹೆಚ್ಚಿಸಿದೆ.

ಹಿಂದಿನ ಹಣಕಾಸು ವರ್ಷದಲ್ಲಿ (2021–22) ಬಡ್ಡಿಯನ್ನು ಶೇ 8.1ಕ್ಕೆ ನಿಗದಿ ಮಾಡಲಾಗಿತ್ತು. ಇದು ನಾಲ್ಕು ದಶಕಗಳ ಕನಿಷ್ಠ ಪ್ರಮಾಣವಾಗಿತ್ತು. 2020–21ರಲ್ಲಿ ಶೇ 8.5ರಷ್ಟು ಬಡ್ಡಿ ನೀಡಲಾಗಿತ್ತು.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ನೇತೃತ್ವದ ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿಯು 2022–23ನೇ ಸಾಲಿಗೆ ಶೇ 8.15ರಷ್ಟು ಬಡ್ಡಿ ನೀಡುವಂತೆ ಶಿಫಾರಸು ಮಾಡಿದೆ ಎಂದು ಕಾರ್ಮಿಕ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಈ ದರಕ್ಕೆ ಕೇಂದ್ರ ಹಣಕಾಸು ಸಚಿವಾಲಯದ ಒಪ್ಪಿಗೆ ದೊರೆತ ನಂತರದಲ್ಲಿ, ಇದನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ.

ಪ್ಯಾನ್–ಆಧಾರ್ ಜೋಡಣೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಪ್ಯಾನ್ ಮತ್ತು ಆಧಾರ್ ಸಂಖ್ಯೆಗಳನ್ನು ಜೋಡಿಸುವುದಕ್ಕೆ ಇದ್ದ ಗಡುವನ್ನು ಕೇಂದ್ರ ಸರ್ಕಾರವು ಜೂನ್ 30ರವರೆಗೆ ವಿಸ್ತರಿಸಿದೆ. ಈ ಮೊದಲಿನ ಆದೇಶದ ಅನ್ವಯ ಗಡುವು ಮಾರ್ಚ್ 31ಕ್ಕೆ ಕೊನೆಗೊಳ್ಳಬೇಕಿತ್ತು.

ಆಧಾರ್ ಜೊತೆ ಜೋಡಣೆ ಆಗಿರದ ಪ್ಯಾನ್ ಸಂಖ್ಯೆಗಳು ಗಡುವಿನ ನಂತರ ನಿಷ್ಕ್ರಿಯವಾಗಲಿವೆ ಎಂದು ಆದಾಯ ತೆರಿಗೆ ಇಲಾಖೆ ಹೇಳಿದೆ. ಆಧಾರ್–ಪ್ಯಾನ್ ಜೋಡಣೆ ಗಡುವು ವಿಸ್ತರಿಸಬೇಕು ಎಂದು ರಾಜಕೀಯ ಪಕ್ಷಗಳು ಒತ್ತಾಯಿಸಿದ್ದವು. ಕೇಂದ್ರವು ಈ ಮೊದಲು ಕೂಡ ಆಧಾರ್–ಪ್ಯಾನ್ ಜೋಡಣೆ ಗಡುವನ್ನು ವಿಸ್ತರಿಸಿದೆ. ಇದುವರೆಗೆ ಒಟ್ಟು 51 ಕೋಟಿ ಪ್ಯಾನ್ ಸಂಖ್ಯೆಗಳು ಆಧಾರ್ ಜೊತೆ ಜೋಡಣೆ ಆಗಿವೆ.

ಪ್ಯಾನ್ ಸಂಖ್ಯೆ ನಿಷ್ಕ್ರಿಯವಾದ ನಂತರದಲ್ಲಿ ತೆರಿಗೆ ಪಾವತಿದಾರರಿಗೆ ತೆರಿಗೆ ರೀಫಂಡ್ ಪಡೆಯಲು ಅವಕಾಶ ಇರುವುದಿಲ್ಲ. ಅಲ್ಲದೆ ಅವರಿಗೆ ಟಿಡಿಎಸ್ ಹಾಗೂ ಟಿಸಿಎಸ್ ಹೆಚ್ಚಿನ ಪ್ರಮಾಣದಲ್ಲಿ ಕಡಿತವಾಗುತ್ತದೆ. ‘ನಿಷ್ಕ್ರಿಯವಾದ ಪ್ಯಾನ್ ಸಂಖ್ಯೆಗಳನ್ನು, ಆಧಾರ್ ಸಂಖ್ಯೆ ನೀಡಿ, ₹ 1,000 ಪಾವತಿಸಿ ಮೂವತ್ತು ದಿನಗಳಲ್ಲಿ ಮತ್ತೆ ಸಕ್ರಿಯ ಆಗಿಸಿಕೊಳ್ಳಬಹುದು’ ಎಂದು ಕೇಂದ್ರ ಸರ್ಕಾರ ಹೇಳಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಟೊ ಚಾಲಕರಿಗೆ ಪ್ರತೀ ತಿಂಗಳು ₹ 2,000 ಸಹಾಯಧನ

ಐದು ಸಿಲಿಂಡರ್ ಉಚಿತ: ಎಚ್‌ಡಿಕೆ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ಅಧಿಕಾರಕ್ಕೆ ಬಂದರೆ ವರ್ಷಕ್ಕೆ ಐದು ಸಿಲಿಂಡರ್ ಉಚಿತವಾಗಿ ನೀಡಲಿದ್ದು, ಹತ್ತು ಸಿಲಿಂಡರ್‌ಗಳನ್ನು ಅರ್ಧ ಬೆಲೆಗೆ ನೀಡುವ ಯೋಜನೆ ಜಾರಿಗೊಳಿಸಲಾಗುವುದು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಘೋಷಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಗಳವಾರ ಪಂಚರತ್ನ ರಥಯಾತ್ರೆಯಲ್ಲಿ ಪಾಲ್ಗೊಂಡಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿ, ‘ಎಲ್‌ಪಿಜಿ ಸಿಲಿಂಡರ್ ಖರೀದಿಗೆ ಸಬ್ಸಿಡಿ ನೀಡುವುದಾಗಿ ಹೇಳಿ ಉಜ್ವಲ ಯೋಜನೆ ಜಾರಿಗೊಳಿಸಿದ್ದ ಕೇಂದ್ರ ಸರ್ಕಾರ ಈಗ ಮಹಿಳೆಯರಿಗೆ ಆಘಾತ ನೀಡಿದೆ. ಸಿಲಿಂಡರ್ ಬೆಲೆ ಸಾವಿರ ರೂಪಾಯಿ ದಾಟಿದೆ. ಬಡವರು ಜೀವನ ಸಾಗಿಸುವುದೇ ದುಸ್ತರವಾಗಿದೆ’ ಎಂದರು.




ಆಟೊ ಚಾಲಕರಿಗೆ ಮಾಸಿಕ ₹ 2,000 ಸಹಾಯಧನ ನೀಡುವ ಯೋಜನೆಯನ್ನೂ ಜಾರಿಗೆ ತರಲಾಗುವುದು. ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನೂ ಶಾಶ್ವತವಾಗಿ ಈಡೇರಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಜೆಡಿಎಸ್ ಈ ಹಿಂದೆ ಪಂಚರತ್ನ ಯೋಜನೆಗಳನ್ನು ಪ್ರಕಟಿಸಿತ್ತು. ಎಲ್ಲ ರೋಗಗಳಿಗೂ ಉಚಿತ ಚಿಕಿತ್ಸೆ, ದ್ವಿತೀಯ ಪಿಯುಸಿವರೆಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಉಚಿತ ಶಿಕ್ಷಣ, ರೈತರಿಗೆ ದಿನದ 24 ಗಂಟೆಗಳ ಕಾಲ ನಿರಂತರ ಉಚಿತ ವಿದ್ಯುತ್ ಪೂರೈಕೆ, ರೈತರಿಗೆ ಪ್ರತೀ ಎಕರೆಗೆ ₹ 10,000 ಸಹಾಯಧನ ನೀಡುವುದು, ಎಲ್ಲರಿಗೂ ವಸತಿ ಸೌಲಭ್ಯ ಹಾಗೂ ಮಹಿಳೆಯರು ಮತ್ತು ಯುವಜನ ಸಬಲೀಕರಣಕ್ಕೆ ವಿಶೇಷ ಯೋಜನೆಗಳನ್ನು ಜಾರಿಗೊಳಿಸುವ ಭರವಸೆಗಳನ್ನು ‘ಪಂಚರತ್ನ’ದಲ್ಲಿ ಪ್ರಕಟಿಸಲಾಗಿತ್ತು.

ಕೊಬ್ಬರಿ ಮತ್ತು ಅಡಿಕೆ ಬೆಳೆಗಳ ದರ ಕುಸಿತ ತಡೆಯಲು ವಿಶೇಷ ಯೋಜನೆ ಅನುಷ್ಠಾನಕ್ಕೆ ತರುವುದಾಗಿಯೂ ಕುಮಾರಸ್ವಾಮಿ ಪ್ರಕಟಿಸಿದ್ದರು.

‘ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವುದು ಮೂಲಭೂತ ಅಗತ್ಯ’



ನವದೆಹಲಿ (ಪಿಟಿಐ): ‘ದೇಶದಲ್ಲಿ ಕೋಮು ಸಾಮರಸ್ಯ ಕಾಪಾಡುವ ದಿಸೆಯಲ್ಲಿ ದ್ವೇಷ ಭಾಷಣಕ್ಕೆ ಕಡಿ ವಾಣ ಹಾಕುವುದು ಮೂಲಭೂತ ಅಗತ್ಯ ವಾಗಿದೆ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ. 7

ಬೆಂಗಳೂರು ಟೆಕಿ ಮೇಲೆ ಅತ್ಯಾಚಾರ: ಅಪರಾಧಿಗೆ 30 ವರ್ಷ ಜೈಲು ಕಾಯಂ

ನವದೆಹಲಿ: ಬೆಂಗಳೂರಿನ ಐಟಿ ಕಂಪನಿಯೊಂದರ ಉದ್ಯೋಗಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಪ್ರಕರಣದ ಅಪರಾಧಿಗೆ ಸುಪ್ರೀಂ ಕೋರ್ಟ್ ಮಂಗಳವಾರ 30 ವರ್ಷಗಳವರೆಗೆ ಜೈಲು ಶಿಕ್ಷೆ ಕಾಯಂಗೊಳಿಸಿದೆ. ‘ನಿಗದಿತ ಅವಧಿಯ ಸೆರೆವಾಸ ಪೂರ್ಣಗೊಳಿಸಿದ ಬಳಿಕ ಅಪರಾಧಿಯನ್ನು ಜೈಲಿನಿಂದ ಬಿಡುಗಡೆ ಮಾಡಬಹುದು’ ಎಂದೂ ಹೇಳಿದೆ. 9

18 ಔಷಧ ಕಂಪನಿಗಳ ಪರವಾನಗಿ ರದ್ದು

ನವದೆಹಲಿ (ಪಿಟಿಐ): ಕಳಪೆ ಗುಣಮಟ್ಟದ ಔಷಧಗಳನ್ನು ತಯಾರಿಸುವ ಕಂಪನಿಗಳ ಮೇಲೆ ಕಠಿಣ ಕ್ರಮಕ್ಕೆ ಮುಂದಾಗಿರುವ ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರಗಳು, 76 ಕಂಪನಿಗಳಿಗೆ ಸೇರಿದ ಸ್ಥಳಗಳಲ್ಲಿ ಜಂಟಿ ತಪಾಸಣೆ ನಡೆಸಿವೆ. ನಕಲಿ ಮತ್ತು ಕಳಪೆ ಗುಣಮಟ್ಟದ ಔಷಧ ತಯಾರಿಸುತ್ತಿದ್ದ ಆರೋಪದ ಅಡಿ 18 ಕಂಪನಿಗಳ ಪರವಾನಗಿಯನ್ನು ರದ್ದುಮಾಡಿವೆ. 12

ತಂತ್ರಜ್ಞಾನ ಓದಿರಿ

ಶ್ರೀರಾಮ ನವಮಿ: ನಾಳೆ ಮಾಂಸ ಮಾರಾಟ ನಿಷೇಧ

ಬೆಂಗಳೂರು: ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾರ್ಚ್ 30ರಂದು ಗುರುವಾರ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ಮಾಹಿತಿ ನೀಡಿದ್ದಾರೆ.

ಸಸಿ ನೆಡಲು ಎಸ್‌ಬಿಐ ದೇಣಿಗೆ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಅಡಿಯಲ್ಲಿ ಬೆಂಗಳೂರಿನ ಗಾರ್ಡನ್ ಸಿಟಿ ವಿಶ್ವವಿದ್ಯಾಲಯಕ್ಕೆ 32 ಸಾವಿರ ಸಸಿಗಳನ್ನು ನೆಡಲು ₹ 48 ಲಕ್ಷ ದೇಣಿಗೆ ನೀಡಿದೆ. ಸರ್ಕಾರೇತರ ಸಂಸ್ಥೆ 'ದಟ್ಸ್ ಎಕೊ ಫೌಂಡೇಷನ್' ಸಹಯೋಗದಲ್ಲಿ ಸಸಿಗಳನ್ನು ನೆಡಲಾಗುತ್ತದೆ.

ಈ ಯೋಜನೆಯ ಅಡಿಯಲ್ಲಿ ಸಸಿಗಳನ್ನು ಮಿಯಾವಾಕಿ ವಿಧಾನದಲ್ಲಿ ಬೆಳೆಸಲಾಗುತ್ತದೆ. ಈ ವಿಧಾನದಲ್ಲಿ ಬೆಳೆಸಿದ ಗಿಡಗಳ ಬೆಳವಣಿಗೆಯು 10 ಪಟ್ಟು ಹೆಚ್ಚು ವೇಗವಾಗಿ ಇರುತ್ತದೆ. ಸಸಿಗಳು ಬೆಳೆದು ಮರವಾದ ನಂತರದಲ್ಲಿ ಅಲ್ಲಿ ರೂಪುಗೊಳ್ಳುವ ಅರಣ್ಯವು ಇತರ ನೆಡುತೋಪುಗಳಿಗಿಂತ ಮೂವತ್ತು ಪಟ್ಟು ಹೆಚ್ಚು ದಟ್ಟವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಬೇಡಿಕೆಗಳ ಈಡೇರಿಕೆಗೆ ಬ್ಯಾಂಕ್ ಪಿಂಚಣಿದಾರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ವಿಮಾ ಯೋಜನೆಯಲ್ಲಿ ದೊರೆಯುವ ಆರು ಬಗೆಯ ಗಂಭೀರ ಕಾಯಿಲೆಗಳಿಗೆ ವಿಮಾ ರಕ್ಷೆಯನ್ನು ತಮಗೂ ನೀಡಬೇಕು ಎನ್ನುವುದೂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾರ್ಚ್ 31ರಂದು ಎಸ್‌ಬಿಐನ ಸ್ಥಳೀಯ ಪ್ರಧಾನ ಕಚೇರಿಗಳ ಮುಂಭಾಗದಲ್ಲಿ ಸೇರಲಾಗುವುದು ಎಂದು 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನ್' ತಿಳಿಸಿದೆ.

ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ, ಸ್ಟೇಟ್ ಬ್ಯಾಂಕ್ ಆಫ್ ಇಂದೋರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರು, ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಆ್ಯಂಡ್ ಜಯಪುರ, ಸ್ಟೇಟ್ ಬ್ಯಾಂಕ್ ಆಫ್ ಪಟಿಯಾಲ ಬ್ಯಾಂಕುಗಳನ್ನು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ವಿಲೀನಗೊಳಿಸಲಾಗಿದೆ. ನಿವೃತ್ತಿಯ ನಂತರ ಭಾರತೀಯ ಸ್ಟೇಟ್ ಬ್ಯಾಂಕಿನ ಉದ್ಯೋಗಿಗಳಿಗೆ ದೊರೆಯುವ ಸೌಲಭ್ಯಗಳನ್ನು ಈ ಎಲ್ಲ ಬ್ಯಾಂಕಿನ ಉದ್ಯೋಗಿಗಳಿಗೆ ವಿಸ್ತರಿಸಲಾಗುವುದು ಎಂಬ ಭರವಸೆ ನೀಡಲಾಗಿತ್ತು. ಆದರೆ, ವಿಲೀನದ ನಂತರ ಎಸ್‌ಬಿಐ ತನ್ನ ಮಲತಾಯಿ ಧೋರಣೆಯಿಂದ ಸಹವರ್ತಿ ಬ್ಯಾಂಕ್‌ಗಳ ನಿವೃತ್ತರಿಗೆ ಯಾವುದೇ ಸೌಲಭ್ಯಗಳನ್ನು ವಿಸ್ತರಿಸಿಲ್ಲ ಎಂದು ಆರೋಪಿಸಿದೆ.

ಎಸ್‌ಬಿಐನಲ್ಲಿ ವಿಲೀನಗೊಂಡ ಎಲ್ಲ ಸಹವರ್ತಿ ಬ್ಯಾಂಕುಗಳನ್ನು ಸೇರಿಸಿ 2019ರಲ್ಲಿ 'ಸ್ಟೇಟ್ ಬ್ಯಾಂಕ್ ಆಫ್ ನಿವೃತ್ತರ ಸಂಘ'ವನ್ನು ಸ್ಥಾಪಿಸಲಾಯಿತು. ಆದರೂ ಈ ಬ್ಯಾಂಕುಗಳ ನಿವೃತ್ತರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಎಸ್‌ಬಿಐ ಬ್ಯಾಂಕಿನ ಆಡಳಿತ ವರ್ಗ ವಿಫಲವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಏ. 1ರಂದು 'ಚೈತ್ರ ಸಂಗೀತೋತ್ಸವ'


ಅನಿಂದೊ ಚಟರ್ಜಿ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್‌ನಿಂದ ಏಪ್ರಿಲ್ 1 ರಂದು 'ಚೈತ್ರ ಸಂಗೀತೋತ್ಸವ' ಕಾರ್ಯಕ್ರಮವನ್ನು ಜಯನಗರದ ಶಿವರಾತ್ರೀಶ್ವರ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

'ಇದೇ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ತಬಲಾ ವಾದಕ ಅನಿಂದೊ ಚಟರ್ಜಿ ಅವರಿಗೆ 'ಗುರು ಗೌರವ' ಪ್ರಶಸ್ತಿಯನ್ನು ಮಾಜಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಉದ್ಘಾಟನೆ ಮಾಡಲಿದ್ದು, ಎಚ್.ಎಸ್. ವೆಂಕಟೇಶಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ.

ವಿವಿಧ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ' ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಸತೀಶ್ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಂತ್ರ ಸ್ಥಿತಿಯಲ್ಲಿ ಯುವಿಸಿಇ ಸಂಸ್ಥೆ: ವೇತನಕ್ಕೆ ಸಿಬ್ಬಂದಿ ಪರದಾಟ

ಸ್ವಾಯತ್ತತೆ ದೊರೆತರೂ ಆರ್ಥಿಕ ಸಂಕಷ್ಟ

• ಸಚ್ಚಿದಾನಂದ ಕುರಗುಂದ



ಯುವಿಸಿಇ

ಬೆಂಗಳೂರು: ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಆಶಯ ಹೊಂದಿದ್ದ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿಗೆ (ಯುವಿಸಿಇ) ಈಗ ಆರ್ಥಿಕ ಸಂಕಷ್ಟ ಎದುರಾಗಿದೆ.

1964ರಿಂದ ಬೆಂಗಳೂರು ವಿಶ್ವ-ವಿದ್ಯಾಲಯದ ವ್ಯಾಪ್ತಿಯಲ್ಲಿದ್ದ ಈ ಕಾಲೇಜಿಗೆ 2022ರ ಮಾರ್ಚ್ 25ರಿಂದ ಸ್ವಾಯತ್ತತೆ ನೀಡಿದ್ದರೂ, ರಾಜ್ಯ ಸರ್ಕಾರ ಅನುದಾನ ನೀಡಲು ಹಿಂದೇಟು ಹಾಕುತ್ತಿದೆ. ಇದರಿಂದ, ಕಾಲೇಜು ಅತಂತ್ರ ಸ್ಥಿತಿಗೆ ಸಿಲುಕಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದ ಬಡವರ್ಗದ ವಿದ್ಯಾರ್ಥಿಗಳೇ ಪ್ರವೇಶ ಪಡೆಯುವ ಈ ಕಾಲೇಜಿಗೆ ಅನುದಾನ ಒದಗಿಸದೆ ಸ್ವಯಂ ಹಣಕಾಸು ನಿರ್ವಹಣೆಯ ಸಂಸ್ಥೆಯನ್ನಾಗಿ ಮಾಡುವ ಯೋಜನೆ ಇದಾಗಿದೆ ಎಂದು ದೂರಲಾಗಿದೆ. ಸದ್ಯದ ಗೊಂದಲಗಳಿಂದಾಗಿ ಮಾರ್ಚ್ ತಿಂಗಳ ವೇತನವೂ ಪ್ರಾಧ್ಯಾಪಕರಿಗೆ ಮತ್ತು ಬೋಧಕೇತರ ಸಿಬ್ಬಂದಿಗೆ ದೊರೆಯುವುದು ಕಷ್ಟಸಾಧ್ಯವಾಗಿದೆ.

ಇದೇ ಮಾರ್ಚ್ 31ರ ನಂತರ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಿಂದ ಬೇರ್ಪಟ್ಟು ಯುವಿಸಿಇ ಸಂಪೂರ್ಣ ಪ್ರತ್ಯೇಕ ಸಂಸ್ಥೆಯಾಗಲಿದೆ. ಇದರಿಂದ, ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ ಸಿಬ್ಬಂದಿಯ ವೇತನ ಮತ್ತು ದಿನನಿತ್ಯದ ವೆಚ್ಚಗಳನ್ನು ಭರಿಸುವುದು ಕಷ್ಟವಾಗಲಿದೆ. ಹೀಗಾಗಿ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಹಿತದೃಷ್ಟಿಯಿಂದ 2024ರ ಮಾರ್ಚ್ 31ರವರೆಗೂ ಬೆಂಗಳೂರು ವಿಶ್ವ ವಿದ್ಯಾಲಯದ ವ್ಯಾಪ್ತಿಯಲ್ಲೇ ಉಳಿಸಿ-ಕೊಳ್ಳುವಂತೆ ಯುವಿಸಿಇ ಪ್ರಾಧ್ಯಾಪಕರ ಸಂಘವು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಕುಲಪತಿ ಅವರಿಗೆ ಪತ್ರ ಬರೆದು ಮನವಿ ಮಾಡಿತ್ತು.

ಸಂಸ್ಥೆಯಲ್ಲಿ 78 ಪ್ರಾಧ್ಯಾಪಕರು ಮತ್ತು 35 ಬೋಧಕೇತರ ಸಿಬ್ಬಂದಿ ಇದ್ದಾರೆ. ಇವರಲ್ಲಿ ಬಹುತೇಕ ಮಂದಿ ಸರಾಸರಿ 55 ವರ್ಷದವರಾಗಿದ್ದು, ನಿವೃತ್ತಿಯ ಸನಿಹದಲ್ಲಿದ್ದಾರೆ. ಇವರಿಗೆ ನಿವೃತ್ತಿ ನಂತರ ಸೌಲಭ್ಯಗಳನ್ನು ಒದಗಿ-ಸಬೇಕಾಗುತ್ತದೆ. ಸರ್ಕಾರದ ಅನುದಾನ, ಹಳೆ ವಿದ್ಯಾರ್ಥಿಗಳ ಸಂಘ ಮತ್ತು ಉದ್ಯಮ ವಲಯದ ಕೊಡುಗೆಯಿಂದ ಹಣಕಾಸಿನ ಸ್ಥಿರತೆ ಸಾಧಿಸಲು ಯುವಿಸಿಇಗೆ ಕನಿಷ್ಠ ಇನ್ನೂ ಒಂದು ವರ್ಷ ಬೇಕಾಗುತ್ತದೆ ಎಂದು ಸಂಘವು ಪ್ರತಿಪಾದಿಸಿತ್ತು.

ಆದರೆ, ಬೆಂಗಳೂರು ವಿಶ್ವವಿದ್ಯಾ-ಲಯವು ಹಣಕಾಸಿನ ಕೊರತೆ ಮತ್ತು ಸರ್ಕಾರದ ನೀತಿಗಳ ಕಾರಣ ನೀಡಿ, ಪ್ರಾಧ್ಯಾಪಕರ ಸಂಘದ ಕೋರಿಕೆಯನ್ನು ತಿರಸ್ಕರಿಸಿದೆ.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರು, 'ಯುವಿಸಿಇ ಅನ್ನು ಸ್ವಾಯತ್ತ ಸಂಸ್ಥೆಯಾಗಿ ಘೋಷಿಸಿರುವುದರಿಂದ ಇದೇ ಮಾರ್ಚ್ 31ರಿಂದಲೇ ವಿಶ್ವವಿದ್ಯಾಲಯದ ನಿಯಂತ್ರಣದಿಂದ ಮುಕ್ತವಾಗಲಿದೆ. ಹೀಗಾಗಿ, ಯುವಿಸಿಇ ಬೋಧಕ, ಬೋಧಕೇತರ ಸಿಬ್ಬಂದಿಗೆ ಮಾರ್ಚ್ ತಿಂಗಳ ವೇತನ ಪಾವತಿಸಲು ಅಗತ್ಯ-ವಿರುವಷ್ಟು ಅನುದಾನವನ್ನು ಸರ್ಕಾರ ನೀಡಿಲ್ಲ. ಹೀಗಾಗಿ, ಮಾರ್ಚ್ ತಿಂಗಳ ವೇತನವನ್ನು ಬೆಂಗಳೂರು ವಿಶ್ವವಿ-ದ್ಯಾಲಯದ ವತಿಯಿಂದ ಭರಿಸಲು ಸಾಧ್ಯವಿಲ್ಲ' ಎಂದು ವಿವರಿಸಿದ್ದರು.

ಧಾರವಾಡದಲ್ಲಿ ಐಐಟಿ ಸ್ಥಾಪಿಸಲು ಸುಮಾರು ₹834 ಕೋಟಿ ಅನುದಾನ ಒದಗಿಸಲಾಗಿದೆ. ಜತೆಗೆ ಪ್ರತಿ ವರ್ಷ ₹200 ಕೋಟಿ ಅನುದಾನ ದೊರೆಯಲಿದೆ. ಆದರೆ, ಇಲ್ಲಿ ಅನುದಾನವನ್ನೇ ನೀಡುತ್ತಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿದ್ದರೆ ಉತ್ತಮವಾಗಿತ್ತು. 105 ವರ್ಷಗಳ ಸಂಸ್ಥೆಗೆ ಇಂತಹ ಸ್ಥಿತಿ ಬರಬಾರದಿತ್ತು ಎಂದು ಸಂಸ್ಥೆಯ ಹಳೆಯ ವಿದ್ಯಾರ್ಥಿಯೊಬ್ಬರು ಕಳವಳ ವ್ಯಕ್ತಪಡಿಸುತ್ತಾರೆ.

ರಚನೆಯಾಗದ ಪೂರ್ಣ ಆಡಳಿತ ಮಂಡಳಿ

ಹಲವು ಕೊರತೆಗಳನ್ನು ಎದುರಿಸುತ್ತಿರುವ ಸಂಸ್ಥೆಯಲ್ಲಿ ಇದುವರೆಗೆ ಆಡಳಿತ ಮಂಡಳಿಯನ್ನು (ಬಿಒಜಿ) ಸಂಪೂರ್ಣವಾಗಿ ರಚಿಸಿಲ್ಲ. ಶಾಸನಬದ್ಧ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸಿಲ್ಲ ಮತ್ತು ಹಣಕಾಸು ಸಮಿತಿಯನ್ನೂ ರಚಿಸಿಲ್ಲ. ಜತೆಗೆ ಅಕಾಡೆಮಿಕ್ ಸೆನೆಟ್ ಅಥವಾ ಕಾರ್ಯಕಾರಿಣಿ ಮಂಡಳಿಯೂ ಇದುವರೆಗೆ ರಚನೆಯಾಗಿಲ್ಲ.

'ಅನುದಾನ ನೀಡುವಂತೆ ಮನವಿ'

'ಯುವಿಸಿಇಗೆ ಅನುದಾನ ನೀಡುವಂತೆ ರಾಜ್ಯ ಸರ್ಕಾರಕ್ಕೆ ಕೋರಿದ್ದೇವೆ. ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾಗುತ್ತೇವೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಅವರನ್ನು ಸಹ ಭೇಟಿಯಾಗಿ ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದೇವೆ. ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದ ಈ ಪರಿಸ್ಥಿತಿ ಸೃಷ್ಟಿಯಾಗಿದೆ' ಎಂದು ಯುವಿಸಿಇ ಪ್ರಾಧ್ಯಾಪಕರ ಸಂಘದ ಅಧ್ಯಕ್ಷ ಡಾ.ಎಚ್.ಸಿ. ಚಿತ್ತಪ್ಪ ಹೇಳುತ್ತಾರೆ.

ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಹಗರಣ • ₹800 ಕೋಟಿಗೂ ಹೆಚ್ಚು ವಂಚನೆ ಆರೋಪ

₹ 114 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಿ, ₹ 800 ಕೋಟಿಗೂ ಹೆಚ್ಚು ವಂಚಿಸಿರುವ ಆರೋಪ ಎದುರಿಸುತ್ತಿರುವ ನಗರದ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿ ಸದಸ್ಯರು ಮತ್ತು ಸುಸ್ತಿದಾರರಿಗೆ ಸೇರಿದ ₹ 114.19 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಗ್ರಾಹಕರಿಗೆ ವಂಚಿಸಿರುವ ಆರೋಪದ ಮೇಲೆ ಬ್ಯಾಂಕ್‌ನ ಆಡಳಿತ ಮಂಡಳಿ ಸದಸ್ಯರು ಹಾಗೂ ಸುಸ್ತಿದಾರರ ವಿರುದ್ಧ ನಗರ ಪೊಲೀಸರು ತನಿಖೆ ನಡೆಸಿದ್ದರು. ಪೊಲೀಸರು ಸಲ್ಲಿಸಿದ್ದ ಆರೋಪಪಟ್ಟಿ ಆಧಾರದಲ್ಲಿ ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು.

ಈ ಪ್ರಕರಣದ ತನಿಖೆಯ ವೇಳೆ ಲಭಿಸಿರುವ ಸಾಕ್ಷ್ಯಗಳನ್ನು ಆಧರಿಸಿ ಬ್ಯಾಂಕ್ ಆಡಳಿತ ಮಂಡಳಿ ಸದಸ್ಯರು ಹಾಗೂ ಸುಸ್ತಿದಾರರಿಗೆ ಸೇರಿದ 21 ಸ್ಥಿರಾಸ್ತಿಗಳು ಮತ್ತು ₹ 3.15 ಕೋಟಿ ಮೊತ್ತದ ಬ್ಯಾಂಕ್ ಠೇವಣಿಗಳನ್ನು ಮುಟ್ಟುಗೋಲು ಹಾಕಿ-ಕೊಳ್ಳಲಾಗಿದೆ ಎಂದು ಇ.ಡಿ ತಿಳಿಸಿದೆ.

ಈ ಪ್ರಕರಣದ ಆರೋಪಿಗಳಿಗೆ ಸೇರಿದ ₹ 45.33 ಕೋಟಿ ಮೌಲ್ಯದ ಆಸ್ತಿಗಳನ್ನು ಇ.ಡಿ ಹಿಂದೆ ಮುಟ್ಟುಗೋಲು ಹಾಕಿಕೊಂಡಿತ್ತು. ಈಗ ಖಾಲಿ ನಿವೇಶನ, ಮನೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಕಟ್ಟಡಗಳು ಹಾಗೂ ಬ್ಯಾಂಕ್ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳ-ಲಾಗಿದೆ. ಈ ಪ್ರಕರಣದಲ್ಲಿ ಒಟ್ಟು ₹ 159.52 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಂತಾಗಿದೆ.

ಸುಸ್ತಿದಾರರು, ಬ್ಯಾಂಕ್ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ಶಾಮೀಲಾಗಿ ಸಂಚು ರೂಪಿಸಿ ಹಣವನ್ನು ಲಪಟಾಯಿಸಿದ್ದರು. ಸರಿಯಾದ ಆಧಾರಗಳಿಲ್ಲದೇ ಬೃಹತ್ ಮೊತ್ತದ ಸಾಲಗಳನ್ನು ಮಂಜೂರು ಮಾಡಿ, ಬಿಡುಗಡೆ ಮಾಡಲಾಗಿತ್ತು. ನಕಲಿ ಠೇವಣಿ ದಾಖಲೆಗಳನ್ನು ಸೃಷ್ಟಿಸಿ ಬೃಹತ್ ಮೊತ್ತದ ಹಣ ವರ್ಗಾವಣೆ ಮಾಡಲಾಗಿತ್ತು. ಬೃಹತ್ ಮೊತ್ತದ ಸಾಲ ಪಡೆದವರು ಅದನ್ನು ಮರುಪಾವತಿ ಮಾಡದೇ ವಂಚಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ. ನಕಲಿ ದಾಖಲೆ ಬಳಸಿ ಕೆಲವು ಸಾಲದ ಖಾತೆಗಳನ್ನು ಸೃಷ್ಟಿಸಿ, ಮಂಜೂರಾತಿ ನೀಡಲಾಗಿತ್ತು. ಅದನ್ನು ಬೇರೆ ಖಾತೆಗಳಿಗೆ ವರ್ಗಾಯಿಸಿ, ಪುನಃ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗಿತ್ತು. ಬ್ಯಾಂಕ್ ಆರ್ಥಿಕವಾಗಿ ಸುಸ್ಥಿತಿಯಲ್ಲಿದೆ ಎಂಬುದನ್ನು ಬಿಂಬಿಸಲು ಈ ರೀತಿ ಮಾಡಲಾಗಿತ್ತು ಎಂದಿದ್ದಾರೆ.

ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ

ಬೆಂಗಳೂರು: ರಾಜ್ಯದ 42 ಮಂದಿ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ 2022ನೇ ಸಾಲಿನ ಮುಖ್ಯಮಂತ್ರಿ ಪದಕ ಘೋಷಿಸಲಾಗಿದೆ. ಬೆಂಗಳೂರಿನ ಹಲವರು ಪದಕಕ್ಕೆ ಭಾಜನರಾಗಿದ್ದಾರೆ.

ಆರ್.ಶ್ರೀನಿವಾಸ್‌ಗೌಡ (ಡಿಸಿಪಿ, ಕೇಂದ್ರ ವಿಭಾಗ), ನಂಜುಂಡೇಗೌಡ (ಹೆಡ್ ಕಾನ್‌ಸ್ಟೆಬಲ್, ಪೂರ್ವ ಸಂಚಾರ ವಿಭಾಗ), ರೇವಣ್ಣ (ಎಎಸ್‌ಐ, ಕಾಮಾಕ್ಷಿಪಾಳ್ಯ ಸಂಚಾರ ಠಾಣೆ), ಮಾರುತಿ ಜಿ. ನಾಯಕ್ (ಇನ್‌ಸ್ಪೆಕ್ಟರ್, ಸುದ್ದುಗುಂಟೆಪಾಳ್ಯ), ಬಿ.ಮಹೇಶ್ (ಪಿಎಸ್‌ಐ, ಎನ್‌ಐಎ), ಎಂ.ಮೋಹನ್ ಕುಮಾರ್ (ಹೆಡ್‌ಕಾನ್‌ಸ್ಟೆಬಲ್, ವಿಕಾಸಸೌಧ ಭದ್ರತಾ ವಿಭಾಗ), ಚೈತನ್ಯ (ಇನ್‌ಸ್ಪೆಕ್ಟರ್, ಕಬ್ಬನ್‌ಪಾರ್ಕ್ ಠಾಣೆ), ಬಿ.ಮಹೇಶ್ (ಹೆಡ್ ಕಾನ್‌ಸ್ಟೆಬಲ್, ಬ್ಯಾಟರಾಯನಪುರ ಸಂಚಾರ ಠಾಣೆ), ಧರಣೇಶ್ (ಡಿವೈಎಸ್‌ಪಿ, ಸಂಚಾರ ಕೇಂದ್ರ ವಿಭಾಗ), ಅರವಿಂದಕುಮಾರ್ (ಹೆಡ್ ಕಾನ್‌ಸ್ಟೆಬಲ್, ಸಿಎಆರ್), ಅನಂತಕೃಷ್ಣ (ಎಎಸ್‌ಐ, ಸಿಸಿಬಿ), ಪ್ರಕಾಶ್ (ಎಎಸ್‌ಐ, ಕೆ.ಜಿ.ಹಳ್ಳಿ ಪೊಲೀಸ್ ಠಾಣೆ), ಬಿ.ಕೆ.ಲಕ್ಷ್ಮಣ್ (ಹೆಡ್‌ಕಾನ್‌ಸ್ಟೆಬಲ್, ಶಾಸಕರ ಭವನ ಭದ್ರತಾ ವಿಭಾಗ), ಎನ್.ಸುರೇಶ್ (ಪಿಐ, ಸಿಐಡಿ), ಬಿ.ಮಂಜುನಾಥ್ (ಹೆಡ್ ಕಾನ್‌ಸ್ಟೆಬಲ್, ವಿಕಾಸಸೌಧ ಭದ್ರತೆ), ಎಂ.ಅನಿತಾ ಕುಮಾರಿ (ಪಿಐ, ಎಸ್‌ಐಟಿ, ಲೋಕಾಯುಕ್ತ), ಎಂ.ಎಸ್. ರಮೇಶ್ (ಪಿಎಸ್‌ಐ, ಅಶೋಕನಗರ ಠಾಣೆ), ಬಿ.ಸುರೇಶ್ (ಹೆಡ್‌ಕಾನ್‌ಸ್ಟೆಬಲ್, ಸಿಎಆರ್), ಎಚ್.ಮುತ್ತುರಾಜ್ (ಪಿಐ, ವಿಧಾನಸೌಧ ಭದ್ರತಾ ವಿಭಾಗ), ಕೆ.ಪಿ.ಆನಂದ್ ಆರಾಧ್ಯ (ಹೆಡ್ ಕಾನ್‌ಸ್ಟೆಬಲ್, ಸಿಎಆರ್, ಕೇಂದ್ರ ವಿಭಾಗ), ಸುನಿಲ್ ಕುಮಾರ್ ತುಂಬದ (ಹೆಡ್‌ಕಾನ್‌ಸ್ಟೆಬಲ್, ಸಿಎಆರ್, ಸೆಂಟ್ರಲ್), ಎಸ್.ರೇಣುಕಯ್ಯ (ಹೆಡ್‌ಕಾನ್‌ಸ್ಟೆಬಲ್, ಸಿಎಆರ್), ಆನಂದಕುಮಾರ್ ಮೊಪಗಾರ (ಪಿಎಸ್‌ಐ, ಗೋವಿಂದಪುರ ಠಾಣೆ), ಎಂ.ಆರ್.ಮುದವಿ (ಡಿವೈಎಸ್‌ಪಿ, ಸಿಐಡಿ), ಎನ್.ಶ್ರೀಹರ್ಷ (ಡಿವೈಎಸ್‌ಪಿ, ಸಿಐಡಿ) ಅವರಿಗೆ ಮುಖ್ಯಮಂತ್ರಿ ಪದಕ ಘೋಷಣೆ ಮಾಡಲಾಗಿದೆ.

ಈಜಿಪುರ ಮೇಲ್ಸೇತುವೆ ಮತ್ತೆ ವಿಳಂಬ

ಎಕ್ಸ್‌ಪ್ರೆಸ್ ವೇ ಪೂರ್ಣಗೊಳಿಸಿದವರು 2.5 ಕಿ.ಮೀ ಮೇಲ್ಸೇತುವೆ ನಿರ್ಮಿಸಿಲ್ಲ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಬಾಕಿ ಉಳಿದಿರುವ ಕಾಮಗಾರಿಗೆ ನಾಲ್ಕನೇ ಬಾರಿಗೆ ಕರೆಯಲಾಗಿರುವ ಟೆಂಡರ್‌ಪ್ರಕ್ರಿಯೆಯೂ ವಿಳಂಬವಾಗಿದೆ.

ಬಿಬಿಎಂಪಿ ಮಾರ್ಚ್ 1ರಂದು ನಾಲ್ಕನೇ ಬಾರಿಗೆ ಟೆಂಡರ್ ಆಹ್ವಾನಿಸಿತ್ತು. 17ರಂದು ತಾಂತ್ರಿಕ ಬಿಡ್ ತೆರೆದು ಈ ವೇಳೆಗಾಗಲೇ ಎಲ್ಲ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಬೇಕಿತ್ತು. ಆದರೆ, ಮೊತ್ತ ಕಡಿಮೆ ಮಾಡಲು ಈವರೆಗೆ ಏಕೈಕ ಬಿಡ್‌ದಾರರೊಂದಿಗೆ ಮಾತುಕತೆಯನ್ನು ಎಂಜಿನಿಯರ್‌ಗಳು ಪೂರ್ಣಗೊಳಿಸಿಲ್ಲ.

2017ರಲ್ಲಿ ಈಜಿಪುರ ಮೇಲ್ಸೇತುವೆ ಕಾಮಗಾರಿ ಆರಂಭವಾಗಿದ್ದು, ಗುತ್ತಿಗೆದಾರರ ವಿಳಂಬದಿಂದ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತು. ಬಿಬಿಎಂಪಿ ಗುತ್ತಿಗೆಯನ್ನು 2022ರ ಮಾರ್ಚ್ 9ರಂದು ರದ್ದುಪಡಿಸಿತು. ಹೈಕೋರ್ಟ್ ಮೂರು ತಿಂಗಳಲ್ಲಿ ಮರು ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕು ಎಂದು ತಾಕೀತು ಮಾಡಿತು. ಇದಾಗಿ ಒಂದು ವರ್ಷವಾದರೂ ಟೆಂಡರ್ ಪ್ರಕ್ರಿಯೆಯನ್ನೇ ಬಿಬಿಎಂಪಿ ಇನ್ನೂ ಪೂರ್ಣಗೊಳಿಸಿಲ್ಲ.

'ಬಾಕಿ ಉಳಿದಿರುವ ಮೇಲ್ಸೇತು-ವೆಯನ್ನು ಕೂಡಲೇ ನಿರ್ಮಿಸಬೇಕು' ಎಂದು ಸ್ಥಳೀಯರು ಮೂರ್ನಾಲ್ಕು ಬಾರಿ ಹೋರಾಟವನ್ನೂ ಮಾಡಿದ್ದಾರೆ. 'ಮಾರ್ಚ್ 20ರಂದು ತೆರೆದ ಬೃಹತ್ ಟೆಂಡರ್‌ಗಳೆಲ್ಲವೂ ಅನುಮೋದನೆಯಾಗಿ, ಕಾರ್ಯಾದೇಶ ನೀಡಲಾಗಿದೆ. ಆದರೆ, ಅದಕ್ಕಿಂತ ಮುನ್ನ ತೆರೆದ ಈಜಿಪುರ ಮೇಲ್ಸೇತುವೆಯ ಟೆಂಡರ್ ಪ್ರಕ್ರಿಯೆಯ-ನ್ನು ಎಂಜಿನಿಯರ್‌ಗಳೂ ಪೂರ್ಣಗೊಳಿಸುತ್ತಿಲ್ಲ' ಎಂದು ನಾಗರಿಕರು ದೂರಿದರು.

'ನಾಲ್ಕು ವರ್ಷಗಳಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ನಿರ್ಮಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ, ಏಳು ವರ್ಷದಿಂದ 2.5 ಕಿ.ಮೀ ಮೇಲ್ಸೇತುವೆಯನ್ನು ನಿರ್ಮಿಸಲಾಗಿಲ್ಲ. ಯಾರು ಯಾವ ರೀತಿಯ ಕ್ರೆಡಿಟ್ ಅನ್ನಾದರೂ ತೆಗೆದುಕೊಳ್ಳಲಿ. ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಮುಗಿಸಿ ಸ್ಥಳೀಯ ಜನರ ಸಂಕಷ್ಟವನ್ನು ಪರಿಹರಿಸಲಿ' ಎಂದು ಕೋರಮಂಗಲ ಎಸ್‌ಟಿ ಬೆಡ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜೇಂದ್ರ ಬಾಬು ಅವರು ಹೇಳಿದರು.

'ಚುನಾವಣೆ ನೀತಿ ಸಂಹಿತೆ ಇದಕ್ಕೆ ಅಡ್ಡಿ ಬರುವುದಿಲ್ಲ, ಈ ಬಾರಿ ಟೆಂಡರ್ ಅಂತಿಮಗೊಳಿಸಿ ಕಾಮಗಾರಿ ಆರಂಭಿಸುತ್ತೇವೆ ಎಂದು ಮುಖ್ಯ ಆಯುಕ್ತರು, ಎಂಜಿನಿಯರ್‌ಗಳು ಭರವಸೆ ನೀಡಿದ್ದಾರೆ. ಇನ್ನೊಂದೆರಡು ದಿನ ಕಾದುನೋಡಿ ನಂತರ ನಿವಾಸಿಗಳು ಮುಂದಿನ ಹೋರಾಟದ ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.



ಕಾಮಗಾರಿ ಸ್ಥಗಿತಗೊಂಡಿರುವ ಈಜಿಪುರ ಮೇಲ್ಸೇತುವೆಯ ದುಃಸ್ಥಿತಿ

ಮಾತುಕತೆ ನಡೆದಿದೆ: ಮುಖ್ಯ ಎಂಜಿನಿಯರ್

'ಕಳೆದ ಬಾರಿ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡಿದ್ದರಿಂದ ಟೆಂಡರ್ ಪ್ರಕ್ರಿಯೆಯನ್ನು ಸರ್ಕಾರ ರದ್ದುಪಡಿಸಲು ಸೂಚಿಸಿತ್ತು. ಅದರಂತೆ ರದ್ದು ಮಾಡಿ, ಹೊಸದಾಗಿ ಟೆಂಡರ್ ಕರೆಯಲಾಗಿತ್ತು. ಇಬ್ಬರು ಗುತ್ತಿಗೆದಾರರು ಬಿಡ್ ಮಾಡಿದ್ದರು. ಅದರಲ್ಲಿ ಒಬ್ಬರಿಗೆ ಅರ್ಹತೆ ಇರಲಿಲ್ಲ. ಹೀಗಾಗಿ, ಒಬ್ಬರೇ ಗುತ್ತಿಗೆದಾರರು ಪ್ರಕ್ರಿಯೆಯಲ್ಲಿದ್ದು, ಅವರು ಹೆಚ್ಚಿನ ಮೊತ್ತ ದಾಖಲಿಸಿದ್ದಾರೆ. ಅವರು ದಾಖಲಿಸಿರುವ ಮೊತ್ತವನ್ನು ಕಡಿಮೆ ಮಾಡಲು ಮನವಿ ಮಾಡಲಾಗಿದೆ. ಅವರು ಅದಕ್ಕೆ ಸಮ್ಮತಿಸಿದ ಮೇಲೆ ಸರ್ಕಾರಕ್ಕೆ ಕಳುಹಿಸಲಾಗು-ತ್ತದೆ. ಅಲ್ಲಿಂದ ಒಪ್ಪಿಗೆ ಬಂದ ಮೇಲೆ ಕಾಮಗಾರಿ ಆರಂಭಿಸಲಾಗುತ್ತದೆ. ಇದು ಮುಂದುವರಿದ ಕಾಮಗಾರಿಯಾಗಿರುವುದರಿಂದ ಚುನಾವಣೆ ನೀತಿ ಸಂಹಿತೆ ಅಡ್ಡಿಯಾಗುವುದಿಲ್ಲ' ಎಂದು ಬಿಬಿಎಂಪಿ ಯೋಜನೆ ಇಲಾಖೆಯ ಮುಖ್ಯ ಎಂಜಿನಿಯರ್ ವಿನಾಯಕ ಸೂಗೂರು ಹೇಳಿದರು.



ರೇವಾ ವಿಶ್ವವಿದ್ಯಾಯದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಸ್ಮೃತಿ ಇರಾನಿ ಅವರನ್ನು ಕುಲಪತಿ ಡಾ. ಪಿ.ಶ್ಯಾಮರಾಜು ಅಭಿನಂದಿಸಿದರು. ಸಂಸದ ತೇಜಸ್ವಿ ಸೂರ್ಯ ಇದ್ದರು

ರೇವಾ ಬಿಜಿನೆಸ್ ಸ್ಕೂಲ್‌ನ ಹೊಸ ಬ್ಲಾಕ್‌ಗೆ ಚಾಲನೆ

ಬೆಂಗಳೂರು: 'ಪ್ರತಿಯೊಬ್ಬರ ಸಂಯೋಜಿತ ಕೊಡುಗೆ ದೇಶದ ಒಳಿತಿಗೆ ಶಕ್ತ-ವಾಗುತ್ತದೆ. ಭಾರತದ ಸಂಸ್ಕೃತಿಯ ರಾಯಭಾರಿ ಆಗಲು ಸಾಧ್ಯವಾಗುತ್ತ-ದೆ' ಎಂದು ಕೇಂದ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಸ್ಮೃತಿ ಇರಾನಿ ಹೇಳಿದರು.

ರೇವಾ ವಿಶ್ವವಿದ್ಯಾಲಯದಲ್ಲಿ ಬಿಜಿನೆಸ್ ಸ್ಕೂಲ್‌ನ ಹೊಸ ಬ್ಲಾಕ್ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಸ್ಮೃತಿ ಇರಾನಿ, ಯುವ ಪ್ರತಿಭೆಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳು, ಮಹಿಳಾ ಕಲ್ಯಾಣದ ಯೋಜನೆಗಳು, ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳು, ಡಿಜಿಟಲ್ ಸಾಕ್ಷರತೆಗೆ ಉತ್ತೇಜನ, ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ನಾಯಕತ್ವವನ್ನು ನಿರ್ಧರಿಸುವಲ್ಲಿ ನೀವೆಲ್ಲರೂ ಸಕ್ರಿಯ ಪಾಲುದಾರರು. ಹೀಗಾಗಿ, ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ಮುಖ್ಯ' ಎಂದರು.

ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ. ಪಿ.ಶ್ಯಾಮರಾಜು, ಸಮಕುಲಾಧಿಪತಿ ಉಮೇಶ್ ರಾಜು, ಉಪಕುಲಪತಿ ಡಾ. ಎಂ. ಧನಂಜಯ ಇದ್ದರು.

ರೇವಾ ವಿಶ್ವವಿದ್ಯಾಯದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಸ್ಮೃತಿ ಇರಾನಿ ಅವರನ್ನು ಕುಲಪತಿ ಡಾ. ಪಿ.ಶ್ಯಾಮರಾಜು ಅಭಿನಂದಿಸಿದರು. ಸಂಸದ ತೇಜಸ್ವಿ ಸೂರ್ಯ ಇದ್ದರು.

ಅಪ್ಪನನ್ನು ಮರೆತ ಪಕ್ಷ: ವಿಜೇತಾ ಅನಂತಕುಮಾರ್

ಬೆಂಗಳೂರು: 'ರಾಜ್ಯದಲ್ಲಿ ಬಿಜೆಪಿ ಸಂಘಟನೆಗೆ ಶ್ರಮಿಸಿದ ನನ್ನ ಅಪ್ಪನನ್ನು ಪಕ್ಷ ಮರೆತಿದೆ' ಎಂದು ದಿವಂಗತ ಅನಂತಕುಮಾರ್ ಅವರ ಪುತ್ರಿ ವಿಜೇತಾ ಟ್ವೀಟ್‌ಮಾಡಿ ಅಸಮಾಧಾನ ತೋಡಿಕೊಂಡಿದ್ದಾರೆ.

'ಅಪ್ಪ 1987ರಲ್ಲಿ ಬಿಜೆಪಿ ಸೇರಿದರು. ತಮ್ಮ ಕೊನೆಯುಸಿರು ಇರುವವರೆಗೂ ಪಕ್ಷಕ್ಕಾಗಿ ಕೆಲಸ ಮಾಡಿದರು. ರಾಜ್ಯದಲ್ಲಿ ಇತ್ತೀಚೆಗೆ ನಡೆದ ಯಾವುದೇ ಕಾರ್ಯಕ್ರಮದ ಉದ್ಘಾಟನೆ ವೇಳೆ ಅವರ ಕೊಡುಗೆ ನೆನಪಿಸಿಕೊಂಡಿಲ್ಲ. ಈ ನಾಡಿನ ಜನರ ಮನಸ್ಸಿನಲ್ಲಿ ಅವರು ಜೀವಂತ ಇದ್ದಾರೆ. ಅವರನ್ನು ಮರೆತಿರುವ ಪಕ್ಷ ಆತ್ಮಾವಲೋಕ ಮಾಡಿಕೊಳ್ಳಲಿ' ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ವಿಮುಕ್ತಿ ಜಯಸುಂದರ ಅಭಿಮತ

'ಅತೀಂದ್ರಿಯ ಸಿನಿಮಾ: ಅಭಿವ್ಯಕ್ತಿಯ ಹುಡುಕಾಟ'

• ನವೀನ್ ಕುಮಾರ್ ಜಿ.

ಬೆಂಗಳೂರು: ಅತೀಂದ್ರಿಯ (ಟ್ರಾನ್ಸೆಂಡೆಂಟಲ್) ಕಥನಗಳ ಸಿನಿಮಾಗಳಲ್ಲಿ ಆಳವಾದ ಅಭಿವ್ಯಕ್ತಿಯ ಹುಡುಕಾಟವಿರುತ್ತದೆ ಮತ್ತು ಅದು ಪ್ರೇಕ್ಷಕನನ್ನು ತಾತ್ವಿಕವಾದ ಚಿಂತನೆಗೆ ಒಡ್ಡುತ್ತದೆ ಎಂದು ಶ್ರೀಲಂಕಾದ ಚಿತ್ರ ನಿರ್ದೇಶಕ ವಿಮುಕ್ತಿ ಜಯಸುಂದರ ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ಅಂತರರಾ-ಷ್ಟ್ರೀಯ ಚಲನಚಿತ್ರೋತ್ಸವದ ಐದನೇ ದಿನವಾದ ಮಂಗಳವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯ-ಕ್ರಮದಲ್ಲಿ ಮಾತನಾಡಿದ ಅವರು, 'ಇಂತಹ ಸಿನಿಮಾಗಳು ಅಭಿವ್ಯಕ್ತಿ ಸಾತಂ-ತ್ರ್ಯವನ್ನು ಎತ್ತಿಹಿಡಿಯುವ ಮೂಲಕ ಪ್ರೇಕ್ಷಕನಿಗೆ ಮಿತಿ ಇಲ್ಲದ ಅನುಭವ ನೀಡುತ್ತವೆ ಎಂದು ಹೇಳಿದರು.

ಪ್ರೇಕ್ಷಕ ಮತ್ತು ಪರದೆಯ ನಡುವೆ ತನ್ಮಯತೆ ಮೂಡಿದಾಗ ಮಾತ್ರ ಆತ ಸಿನಿಮಾದೊಳಗಿನ ಜಗತ್ತಿಗೆ ತೆರೆದುಕೊ-ಳ್ಳುತ್ತಾನೆ ಎಂದರು.


'ನಾನು ಚಿಕ್ಕವನಾಗಿದ್ದಾಗ ಅಮ್ಮ ನನ್ನನ್ನು ಸಿನಿಮಾಗೆ ಕರೆದುಕೊಂಡು ಹೋಗುತ್ತಿದ್ದರು. ಚಿತ್ರಮಂದಿರದಲ್ಲಿ ಸಿನಿಮಾ ಆರಂಭವಾಗುವುದಕ್ಕೂ ಮುನ್ನ ಪ್ರೇಕ್ಷಕರು ಬಿಳಿಯ ಪರದೆಯನ್ನೇ ನೋಡಿ ಕಾತರದಿಂದ ಕಾಯುತ್ತಿರುವು-ದನ್ನು ಕಂಡಾಗ ನನಗೆ ಅಚ್ಚರಿಯಾಗು-ತ್ತಿತ್ತು. ಆ ಪರದೆಯಲ್ಲಿ ಸಿನಿಮಾ ಎಂಬ ಮಾಂತ್ರಿಕ ಜಗತ್ತು ಮೂಡಿ ಬಂದಾಗ ನಾನೂ ತನ್ಮಯನಾಗುತ್ತಿದ್ದೆ. ಈ ಅಚ್ಚರಿಯೇ ಮುಂದೆ ಸಿನಿಮಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಯಿತು' ಎಂದು ಅವರು ತಮ್ಮ ಸಿನಿ ಪಯಣದ ಹಾದಿಯನ್ನು ಮೆಲುಕು ಹಾಕಿದರು.

'ಸಿನಿಮಾಗೆ ಯಾವುದೇ ಭಾಷೆಯ ಅಗತ್ಯವಿಲ್ಲ, ಏಕೆಂದರೆ ಅದುವೇ ಒಂದು ಭಾಷೆಯಾಗಿದೆ. ಸಿನಿಮಾ ನಿಮ್ಮನ್ನು ತಲುಪುವುದಿಲ್ಲ. ನೀವೇ ಅದನ್ನು ತಲುಪಬೇಕು. ಹಾಗಿದ್ದರೆ ಮಾತ್ರ ಒಳ್ಳೆಯ ಪ್ರೇಕ್ಷಕರಾಗಲು ಸಾಧ್ಯ' ಎಂದು ಹೇಳಿದರು.

ಮೌಖಿಕವಾಗಿ ಕಥೆ ಹೇಳುವಾಗ ಅದು ಬೇರೆ ಬೇರೆ ಕೇಳುಗರಲ್ಲಿ ವಿಭಿನ್ನ ಕಲ್ಪನಾಲೋಕವನ್ನು ಸೃಷ್ಟಿಸಿದಂತೆ, ಸಿನಿಮಾ ಕೂಡ ಪ್ರತಿಯೊಬ್ಬ ಪ್ರೇಕ್ಷಕನಿಗೂ ವಿಭಿನ್ನ ಅನುಭವ ನೀಡಬೇಕು. ಚಿತ್ರದಲ್ಲಿ ಪ್ರೇಕ್ಷಕರ ಕಲ್ಪನೆಗೂ ಜಾಗವಿರಬೇಕು ಎಂದು ಸಲಹೆ ನೀಡಿದರು.

ಶ್ರೀಲಂಕಾ ಸಣ್ಣ ದ್ವೀಪ ರಾಷ್ಟ್ರವೆಂಬುದು ಮುಖ್ಯವಲ್ಲ. ಜನರ ಅನುಭವಗಳೇ ಮುಖ್ಯ. ಈ ಕಾರಣಕ್ಕೆ ಅತ್ಯುತ್ತಮ ಚಿತ್ರಗಳು ಅಲ್ಲಿಯೂ ಮೂಡಿಬರುತ್ತಿವೆ ಎಂದು ಹೇಳಿದರು.

'ಕಮರ್ಷಿಯಲ್ ಮತ್ತು ಕಲಾತ್ಮಕ ಚಿತ್ರಗಳು ನನ್ನ ದೃಷ್ಟಿಯಲ್ಲಿ ಒಂದೇ. ಕಮರ್ಷಿಯಲ್ ಚಿತ್ರಗಳಿಂದ ಹೆಚ್ಚಿನ ಲಾಭ ಸಿಗಬಹುದು ಮತ್ತು ಶೀಘ್ರ ಪ್ರಸಿದ್ಧಿಯೂ ಲಭಿಸಬಹುದು. ಆದರೆ ಕಲಾತ್ಮಕ ಚಿತ್ರಗಳಿಂದ ಇವುಗಳನ್ನು ನಿರೀಕ್ಷಿಸದಿದ್ದರೂ ಅವು ತಮ್ಮದೇ ಆದ ಛಾಪನ್ನು ಮೂಡಿಸುತ್ತವೆ' ಎಂದು ತಿಳಿಸಿದರು.



ಸಂವಾದ ಕಾರ್ಯಕ್ರಮದಲ್ಲಿ ವಿಮುಕ್ತಿ ಜಯಸುಂದರ ಮಾತನಾಡಿದರು

'ಅಜೂಮ್ಮ' ಎಂಬ ಬದುಕು ಅರಿಯುವ ಪಯಣ

ಪ್ರವಾಸವೊಂದು ಬದುಕಿನ ಬಹುಮಜಲುಗಳನ್ನು ಮೆಲುಕು ಹಾಕುವಂತೆ ಮಾಡಿ, ಸಂಬಂಧಗಳ ಮಹತ್ವದ ಬಗ್ಗೆ ಅರಿವು ಮೂಡಿಸುವ ಕಥಾಹಂದರವನ್ನು ಹೊಂದಿರುವ ಸಿಂಗಪುರ ಚಿತ್ರ 'ಅಜೂಮ್ಮ' ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಂಗಳವಾರ ಪ್ರದರ್ಶನಗೊಂಡು ಪ್ರೇಕ್ಷಕರನ್ನು ಮೋಡಿ ಮಾಡಿತು.

ಶುಮಿಂಗ್ ಹೆ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಪ್ರವಾಸವು ಬದುಕಿನ ವಾಸ್ತವಗಳನ್ನು ತೆರೆದಿಡುವ ಮೂಲಕ ಭಾವನಾತ್ಮಕ ಸನ್ನಿವೇಶಗಳಿಗೂ ಸಾಕ್ಷಿಯಾಗುತ್ತದೆ.ಸಿಂಗಪುರದಲ್ಲಿ ನೆಲೆಸಿರುವ ಮಹಿಳೆಯೊ-ಬ್ಬರಿಗೆ ದಕ್ಷಿಣ ಕೊರಿಯಾ ದೇಶದ ಬಗ್ಗೆ ಅತಿಯಾದ ಮೋಹ. ಅವರು ತಮ್ಮ ಮಗನೊಂದಿಗೆ ಅಲ್ಲಿನ ಸೋಲ್‌ಗೆ ಪ್ರವಾಸ ತೆರಳಲು ಸಿದ್ಧತೆ ನಡೆಸಿರುತ್ತಾರೆ. ಆದರೆ ಕೊನೆ ಕ್ಷಣದಲ್ಲಿ ಮಗನಿಗೆ ಪ್ರವಾಸಕ್ಕೆ ಬರಲು ಸಾಧ್ಯವಾಗುವುದಿಲ್ಲ. ಅನಿವಾರ್ಯವಾಗಿ ಒಬ್ಬಂಟಿಯಾಗಿ ಪ್ರವಾಸ ತೆರಳುವ ಮಹಿಳೆ ಪ್ರವಾಸದುದ್ದ-ಕ್ಕೂ ಅನುಭವಿಸುವ ಜಂಜಾಟಗಳೇ ಈ ಚಿತ್ರದ ಪ್ರಮುಖ ಕಥಾವಸ್ತು.

ವೃದ್ಧಾಪ್ಯದಲ್ಲಿ ಕಾಡುವ ಒಂಟಿತನ, ಹಳಸುತ್ತಿರುವ ಸಂಬಂಧಗಳು, ಮಂಕಾಗದ ಜೀವನೋತ್ಸಾಹ ಇವೆಲ್ಲವೂ ಈ ಚಿತ್ರದ ಚೌಕಟ್ಟಿನಲ್ಲಿ ಮೂಡಿ ಬಂದು ಪ್ರೇಕ್ಷಕನ ಮನಕ್ಕೆ ಮುದ ನೀಡುತ್ತವೆ.

ಬಿಡಿಎ ಭೂ ವ್ಯಾಜ್ಯಗಳ ಇತ್ಯರ್ಥಕ್ಕೆ ಅದಾಲತ್

ಬೆಂಗಳೂರು: ಸುಮಾರು 11 ಸಾವಿರ ಎಕರೆ ಜಾಗದ ವ್ಯಾಜ್ಯಗಳ ಇತ್ಯರ್ಥಕ್ಕೆ ನ್ಯಾಯಾಲಯದಿಂದಲೇ ಅದಾಲತ್ ನಡೆಸುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪ್ರಸ್ತಾವ ಸಲ್ಲಿಸಿದೆ.

ವಿವಿಧ ಬಡಾವಣೆಗಳ ನಿರ್ಮಾಣಕ್ಕಾಗಿ ಬಿಡಿಎ ಆಯಾ ಕಾಲಘಟ್ಟದಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿತ್ತು. ಆದರೆ, ಭೂ ಪರಿಹಾರ ಕಡಿಮೆಯಾಗಿದೆ ಎಂಬುದೂ ಸೇರಿದಂತೆ ಹಲವು ಕಾರಣಗಳಿಂದ ಭೂಮಾಲೀಕರು ಬಿಡಿಎ ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ವಿವಿಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಕೆಲ ಪ್ರಕರಣಗಳು ಮೂರ್ನಾಲ್ಕು ದಶಕಗಳಾದರೂ ಇತ್ಯ-ರ್ಥವಾಗಿಲ್ಲ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪ್ರಕರಣಗಳಿಂದಾಗಿ ಭೂಸ್ವಾಧೀನ ಪ್ರಕ್ರಿಯೆಗೆ ಹಿನ್ನಡೆ, ಭೂಮಾಲೀಕರಿಗೆ ಪರಿಹಾರ ದೊರಕಿಸಲು ವಿಳಂಬ-ವಾಗುತ್ತಿದೆ. ಪ್ರಕರಣಗಳ ಇತ್ಯರ್ಥಕ್ಕೆ ನ್ಯಾಯಾಲಯದಿಂದಲೇ ಕ್ರಮ ಕೈಗೊಳ್ಳಬೇಕು ಎಂದರು.

ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಭೂಮಿ ನೀಡುವ ರೈತರಿಗೆ ಅವರದೇ ಜಮೀನಿನಲ್ಲಿ ಶೇ 40ರಂತೆ ಪರಿಹಾರಾರ್ಥ ನಿವೇಶನದ ಜಾಗ ಮೀಸಲಿಡಲಾಗುವುದು. ಒಂದು ವರ್ಷ ಕಾಲಾವಕಾಶ ನೀಡಲಾಗುವುದು. ಈ ಸಂಬಂಧ ಹಂಚಿಕೆಗೆ ಹೊಸ ಮಾರ್ಗಸೂಚಿ ಹೊರಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಕೆಲ ವರ್ಷಗಳಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಬಿಡಿಎ ಕಟ್ಟುನಿಟ್ಟಿನ ಕ್ರಮಕೈಗೊಂಡ ಪರಿಣಾಮ ಆರ್ಥಿಕ ಸ್ವಾವಲಂಬನೆ ಸಾಧ್ಯವಾಗಿದೆ. ಆರ್ಥಿಕ ಸಂಪನ್ಮೂಲ ಕ್ರೋಡೀಕರಣದಿಂದ ಪ್ರಾಧಿಕಾರ ಖಾತೆಯಲ್ಲಿ ₹ 1,012 ಕೋಟಿ ಸಂಗ್ರಹವಾಗಿದೆ. 2020ರಿಂದ ಇಲ್ಲಿಯವರೆಗೂ ₹ 2 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಬಿಡಿಎ ಆಸ್ತಿ ಭೂಕಬಳಿಕೆದಾರರಿಂದ ವಶಪಡಿಸಿಕೊಳ್ಳಲಾಗಿದೆ. ಎರಡು ವರ್ಷಗಳಲ್ಲಿ ಬಿಡಿಎಯಿಂದ ವಿವಿಧ ಬಡಾವಣೆಗಳಲ್ಲಿ 3,735 ನಿವೇಶನಗಳ ಹರಾಜಿನಿಂದ ಪ್ರಾಧಿಕಾರಕ್ಕೆ ₹ 3,553 ಕೋಟಿ ಆದಾಯ ಬಂದಿದೆ. ಬಿಡಿಎನಲ್ಲಿ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಲಾಗಿದೆ. ಮಧ್ಯವರ್ತಿಗಳ ಜತೆಗೆ ಕೈಜೋಡಿಸಿ ಸಂಸ್ಥೆಗೆ ನಷ್ಟ ಮಾಡಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಡಿಎ ಸದಸ್ಯ ಶಾಂತರಾಜಣ್ಣ ಉಪಸ್ಥಿತರಿದ್ದರು.

ಹನಿಟ್ರ್ಯಾಪ್: ಐವರ ಬಂಧನ

ಆನೇಕಲ್: ಮಹಿಳೆಯನ್ನು ಬಳಸಿಕೊಂಡು ಹನಿಟ್ರ್ಯಾಪ್ ಮೂಲಕ ಸುಲಿಗೆ ಮಾಡುತ್ತಿದ್ದ ಐವರು ಆರೋಪಿಗಳನ್ನು ಬನ್ನೇರುಘಟ್ಟದ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಂಧಿತ ಆರೋಪಿಗಳಿಂದ ಒಂದು ಐಫೋನ್, ಒಂದು ಜೊತೆ ಓಲೆ, ಸರ, ಉಂಗುರ ಸೇರಿದಂತೆ 68 ಗ್ರಾಂ ಚಿನ್ನದ ಒಡವೆ ಮತ್ತು ಎರಡು ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬೆಂಗಳೂರಿನ ಎಸ್.ವಿ.ರಿತಿಕ್ (23), ಮಹಮದ್ ಆಸೀಫ್ (22), ಯಾಸೀಫ್ ಪಾಷಾ (20), ಶಾಹೀದ್ ಅಲಿ (23), ಸಮೀರ್ (21) ಬಂಧಿತ ಆರೋಪಿಗಳು.

ಪ್ರಕರಣದ ಹಿನ್ನೆಲೆ: ಬೆಂಗಳೂರಿನ ಜೆ.ಪಿ ನಗರದ ಶಶಾಂಕ್ ಎಂಬುವರನ್ನು ಮಹಿಳೆಯೊಬ್ಬಳು ಇನ್‌ಸ್ಟಾಗ್ರಾಂ ಮೂಲಕ ಪರಿಚಯಿಸಿಕೊಂಡಿದ್ದಳು. ಆ ಬಳಿಕ ಜನವರಿ 12ರಂದು ಬನ್ನೇರುಘಟ್ಟ ಸಮೀಪದ ಹಕ್ಕಿಪಿಕ್ಕಿ ಕಾಲೊನಿಯ ಬಂಡೆಗೆ ಕರೆಸಿಕೊಂಡಿದ್ದಳು. ಆಗ ಆರೋಪಿಗಳು ಸ್ಥಳಕ್ಕೆ ಬಂದು ಶಶಾಂಕ್ ಅವರನ್ನು ಬೆದರಿಸಿ ಅವರ ಬಳಿ ಇದ್ದ ಒಡವೆಗಳನ್ನು ದೋಚಿ ಪರಾರಿಯಾಗಿದ್ದರು.

ಪಕ್ಷದ ಬೆಳವಣಿಗೆಯಿಂದ ಉಭಯ ಪಕ್ಷಗಳ ವರಿಷ್ಠರು ಕಂಗೆಟ್ಟಿದ್ದಾರೆ –ಎಚ್‌.ಡಿ.ಕುಮಾರಸ್ವಾಮಿ

‘ಬಿಜೆಪಿ, ಕಾಂಗ್ರೆಸ್ ದೂತರು ಸಂಪರ್ಕದಲ್ಲಿ..’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಮತ್ತು ಕಾಂಗ್ರೆಸ್ ಹೈಕಮಾಂಡ್‌ನ ದೂತರು ಈಗಾಗಲೇ ತಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಎರಡೂ ಪಕ್ಷಗಳ ಸ್ಥಳೀಯ ನಾಯಕರು ಜೆಡಿಎಸ್ ಕುರಿತು ಲಘುವಾಗಿ ಮಾತನಾಡುತ್ತಿದ್ದಾರೆ. ಜೆಡಿಎಸ್ ಪಕ್ಷವನ್ನು ಮುಗಿಸಿಬಿಟ್ಟಿದ್ದೇವೆ ಎನ್ನುವವರೂ ಇದ್ದಾರೆ. ಕೆಲವರು 140–150 ಸ್ಥಾನ ಗೆಲ್ಲುವ ಮಾತನಾಡುತ್ತಿದ್ದಾರೆ. ಆದರೆ, ಜೆಡಿಎಸ್ ಬೆಳವಣಿಗೆಯಿಂದ ಎರಡೂ ಪಕ್ಷದ ವರಿಷ್ಠರು ಕಂಗೆಟ್ಟಿದ್ದಾರೆ. ಅವರ ದೂತರು ಚರ್ಚೆಗೆ ಬಂದಿದ್ದಾರೆ. ಸಹಜವಾಗಿ ಅವರೊಂದಿಗೆ ಚರ್ಚಿಸಿದ್ದೇನೆ’ ಎಂದು ಹೇಳಿದರು.

‘ಹೊರಗೆ ಅವರು ಏನನ್ನಾದರೂ ಮಾತನಾಡಲಿ. ಒಳಗಡೆ ಬೇರೆಯೇ ಪರಿಸ್ಥಿತಿ ಇದೆ. ಬಿಜೆಪಿ ಮತ್ತು ಕಾಂಗ್ರೆಸ್ 75 ಸ್ಥಾನಗಳನ್ನು ದಾಟುವುದಿಲ್ಲ ಎಂದು ಕೆಲವು ಅಧಿಕಾರಿಗಳೇ ಚರ್ಚೆ ನಡೆಸಿದ್ದಾರೆ. ನಮ್ಮ ಶಕ್ತಿ ಏನು ಎಂಬುದು ನನಗೆ ಗೊತ್ತಿದೆ. 123 ಸ್ಥಾನ ಗೆಲ್ಲುವುದೇ ನನ್ನ ಗುರಿ. ಅದಕ್ಕಾಗಿ ಏಪ್ರಿಲ್ 10ರವರೆಗೂ ಪಂಚರತ್ನ ರಥಯಾತ್ರೆ ಮುಂದುವರಿಸುತ್ತೇನೆ’ ಎಂದು ಹೇಳಿದರು.

ಮೀಸಲಾತಿ ಪರಿಷ್ಕರಣೆಗೆ ಬೆಂಬಲವಿಲ್ಲ: ‘ಮೀಸಲಾತಿ ಹಂಚಿಕೆಯನ್ನು ಪರಿಷ್ಕರಿಸಲು ಬಿಜೆಪಿ ಸರ್ಕಾರ ಕೈಗೊಂಡಿರುವ ತೀರ್ಮಾನಕ್ಕೆ ನನ್ನ ಬೆಂಬಲವಿಲ್ಲ. ಸಂವಿಧಾನದ ಆಶಯದಂತೆ ಮೀಸಲಾತಿ ಹಂಚಿಕೆಗೆ ನಮ್ಮ ಬೆಂಬಲ. ಮೀಸಲಾತಿ ಹೆಸರಿನಲ್ಲಿ ಜಾತಿ- ಜಾತಿಗಳ ನಡುವೆ ವೈಷಮ್ಯ ಸೃಷ್ಟಿಸುವ ತೀರ್ಮಾನಕ್ಕೆ ಬೆಂಬಲ ನೀಡುವುದಿಲ್ಲ’ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ಯಶವಂತಪುರ ಕ್ಷೇತ್ರದ ತಿಪ್ಪೇನಹಳ್ಳಿಯಲ್ಲಿ ನಡೆದ ಪಂಚರತ್ನ ರಥಯಾತ್ರೆಯ ವೇಳೆ ‘ನಂದಿನಿ’ ಹಾಲು, ಮೊಸರಿನ ಪ್ಯಾಕೆಟ್‌ಗಳನ್ನು ಬಳಸಿ ಸಜ್ಜುಗೊಳಿಸಿದ ‘ಕೆಎಂಎಫ್ ಉಳಿಸಿ’ ಬೃಹತ್ ಹಾರವನ್ನು ಹಾಕಿ ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಬರಮಾಡಿಕೊಂಡರು

‘ಕಾಂಗ್ರೆಸ್ ಯಾರನ್ನೂ ಸಂಪರ್ಕಿಸಿಲ್ಲ’

‘ಮೈತ್ರಿ ಪ್ರಯತ್ನದ ಕುರಿತು ಎಚ್‌.ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆ ಸಂಪೂರ್ಣ ಸುಳ್ಳು. ಕಾಂಗ್ರೆಸ್ ಪಕ್ಷ ಅಂತಹ ಪ್ರಯತ್ನ ಮಾಡಿಲ್ಲ. ನಾವು ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರುತ್ತೇವೆ. ಯಾರ ಬೆಂಬಲವೂ ಅಗತ್ಯವಿಲ್ಲ. ನಮ್ಮ ಪಕ್ಷದ ಯಾರೂ ಅವರನ್ನು ಸಂಪರ್ಕಿಸಿಲ್ಲ. ಅವರನ್ನು ಸಂಪರ್ಕಿಸಿದವರ ಹೆಸರು ಬಹಿರಂಗಪಡಿಸಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಬಿಜೆಪಿ- ಜೆಡಿಎಸ್ ಹೊಂದಾಣಿಕೆ-ಡಿಕೆಶಿ (ಮಂಡ್ಯ ವರದಿ): ‘ಬಿಜೆಪಿ- ಜೆಡಿಎಸ್ ಹೊಂದಾಣಿಕೆ ಬಗ್ಗೆ ಬಿಜೆಪಿಯ ಸಿ.ಪಿ.ಯೋಗೇಶ್ವರ್ ಅವರೇ ಮಾತನಾಡಿದ್ದಾರೆ. ಈ ಬಗ್ಗೆ ಮತ್ತೊಮ್ಮೆ ನಾನು ಮಾತನಾಡಬೇಕಾಗಿಲ್ಲ. ಮಾಧ್ಯಮಗಳೇ ವ್ಯಾಖ್ಯಾನ ಮಾಡಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಸೇರ್ಪಡೆ ಬಗ್ಗೆ ಸಚಿವ ಕೆ.ಸಿ.ನಾರಾಯಣಗೌಡ ಮತ್ತು ಸಿ.ಪಿ.ಯೋಗೇಶ್ವರ್ ನನ್ನೊಂದಿಗೆ ಮಾತನಾಡಿಲ್ಲ. ಯಾರೇ ಪಕ್ಷಕ್ಕೆ ಬಂದರೂ ಸ್ವಾಗತಿಸುವೆ’ ಎಂದರು.

‘ಈ ಬಾರಿ ಜೆಡಿಎಸ್ ಅಧಿಕಾರಕ್ಕೆ ಬರುವುದಿಲ್ಲ. ಬಿಜೆಪಿಗೆ ವೋಟು ಹಾಕುವುದು ವ್ಯರ್ಥ. ರಾಜ್ಯದ ಚುಕ್ಕಾಣಿ ಹಿಡಿಯಲು ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಅವಕಾಶವಿದೆ. ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಈಗಾಗಲೇ ಅವಕಾಶ ಕೊಟ್ಟಿದ್ದೀರಿ, ನನಗೂ ಒಮ್ಮೆ ಅವಕಾಶ ಕೊಡಿ’ ಎಂದು ಕೋರಿದರು.

‘ಶ್ರೀರಂಗಪಟ್ಟಣಕ್ಕೆ ಬಹಳ ದೊಡ್ಡ ಇತಿಹಾಸವಿದೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮುಂತಾದವರು ಇತಿಹಾಸಕ್ಕೆ ಅಪಚಾರ ಮಾಡುವ ಕೆಲಸ ಮಾಡಿದ್ದಾರೆ. ಒಕ್ಕಲಿಗ ಸಮುದಾಯಕ್ಕೆ ಕೆಟ್ಟ ಹೆಸರು ತರಲು ಮುಂದಾಗಿದ್ದರು. ಅವರ ಪ್ರಯತ್ನ ಸಫಲವಾಗಲಿಲ್ಲ’ ಎಂದರು.

ಜೆಡಿಎಸ್, ಕಾಂಗ್ರೆಸ್ ನಮ್ಮ ಪ್ರತಿಸ್ಪರ್ಧಿ: ಸಚಿವ ಅಶ್ವತ್ಥನಾರಾಯಣ

ಬೆಂಗಳೂರು: ‘ಜೆಡಿಎಸ್ ಮತ್ತು ಕಾಂಗ್ರೆಸ್ ನಮ್ಮ ಪ್ರತಿಸ್ಪರ್ಧಿಗಳು. ಯಾರ ಜೊತೆಗೂ ನಾವು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ’ ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಪಕ್ಷದ ಹಿರಿಯ ಮುಖಂಡರು ಮತ್ತು ರಾಜ್ಯ ನಾಯಕರು ಈಗಾಗಲೇ ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಜೆಡಿಎಸ್ ಮತ್ತು ಕಾಂಗ್ರೆಸ್‌ನ್ನು ಚುನಾವಣೆಯಲ್ಲಿ ಎದುರಿಸುತ್ತೇವೆ. ಎರಡು ಚುನಾವಣೆಗಳಲ್ಲಿ ಸರ್ಕಾರ ರಚನೆ ಮಾಡಿದ ಸಂದರ್ಭದಲ್ಲಿ ಬಹುಮತ ಇರಲಿಲ್ಲ. ಈ ಬಾರಿ ಸಂಪೂರ್ಣ ಬಹುಮತ ಪಡೆಯುತ್ತೇವೆ’ ಎಂದರು.

ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಬಂಧನ ಕುರಿತು, ‘ಮಾಡಾಳ್ ಬಂಧನದಿಂದ ಬಿಜೆಪಿ ಮುಜುಗರವಾಗಿಲ್ಲ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ನೀಡುವ ಕೆಲಸ ಆಗುತ್ತದೆ’ ಎಂದರು. ಯಡಿಯೂರಪ್ಪ ಮನೆಗೆ ಕಲ್ಲು ತೂರಾಟ ವಿಚಾರವಾಗಿ ಮಾತನಾಡಿದ ಅವರು, ‘ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಹಾಗೂ ಒಳ ಮೀಸಲಾತಿ ಯಶಸ್ವಿಯಾಗಿ ಜಾರಿಗೊಳಿಸಿದ್ದನ್ನು ಸಹಿಸದೆ ಕಲ್ಲುತೂರಾಟ, ಹತ್ತಿಕ್ಕುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ’ ಎಂದು ಆರೋಪಿಸಿದರು.

‘ಜೆಡಿಎಸ್ ಜತೆ ಹೊಂದಾಣಿಕೆ ಇಲ್ಲ: ಅದು ನಂಬಿಕೆಗೆ ಅರ್ಹವಲ್ಲ’

ರಾಮನಗರ: ‘ಈ ಬಾರಿ ರಾಜ್ಯದಲ್ಲಿ ಬಿಜೆಪಿ ಯಾವ ಪಕ್ಷದ ಜೊತೆಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಜೆಡಿಎಸ್‌ನವರು ನಂಬಿಕೆಗೆ ಅರ್ಹರಲ್ಲ ಎಂಬುದು ನಮ್ಮ ಪಕ್ಷದ ವರಿಷ್ಠರಿಗೆ ಗೊತ್ತಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ.

ಕಳೆದ ವಿಧಾನಸಭೆ ಚುನಾವಣೆ ವೇಳೆ ಹಳೆ ಮೈಸೂರು ಭಾಗದಲ್ಲಿ ಬಿಜೆಪಿ–ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡಿದೆ ಎಂಬ ತಮ್ಮ ಹಳೆಯ ಆಡಿಯೊ ಮತ್ತೆ ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡುತ್ತಿರುವ ಕುರಿತು ಅವರು ಮಾಧ್ಯಮದವರಿಗೆ ಮಂಗಳವಾರ ಪ್ರತಿಕ್ರಿಯೆ ನೀಡಿದರು.

> **ಹಳೆಯ ಮೈಸೂರು ಭಾಗದಲ್ಲಿ ಜೆಡಿಎಸ್ ಜೊತೆ ಬಿಜೆಪಿ ಹೊಂದಾಣಿಕೆ ಇಲ್ಲ. ಯಾವುದೇ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟವಾಗಿ ಸೂಚಿಸಿದ್ದಾರೆ.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಬಲವರ್ಧನೆ ಮಾಡಿ, ಹಲವು ಮುಖಂಡರನ್ನು ಬೆಳೆಸಿದ್ದೆವು. ಆದರೆ ಅವರಿಗೆ ಟಿಕೆಟ್ ಸಿಗಲಿಲ್ಲ. ನಮ್ಮ ಪಕ್ಷದ ಬೆಳವಣಿಗೆಯಲ್ಲಿ ನಾವೇ ಮೊಟಕುಗೊಳಿಸಿಕೊಂಡಿದ್ದೆವು ಎಂದು ಸಾಂದರ್ಭಿಕವಾಗಿ ಆ ರೀತಿ ಮಾತನಾಡಿದ್ದೆ ಅಷ್ಟೇ’ ಎಂದು ಅವರು ಸ್ಪಷ್ಟನೆ ನೀಡಿದರು.

ಕಳೆದ ಬಾರಿ ಚುನಾವಣಾ ಪೂರ್ವದಲ್ಲಿ ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಬೆಂಬಲ ಪಡೆದಿದ್ದ ಕುಮಾರಸ್ವಾಮಿ ಚುನಾವಣೆಯಲ್ಲಿ ಗೆಲ್ಲುತ್ತಿದ್ದಂತೆ ಕಾಂಗ್ರೆಸ್ ಜೊತೆ ಹೋಗಿ ಮುಖ್ಯಮಂತ್ರಿ ಆದರು. ಜೆಡಿಎಸ್‌ನವರು ಎರಡೂ ಪಕ್ಷದ ಜೊತೆ ‘ಬ್ಯಾಲೆನ್ಸ್’ ಮಾಡುತ್ತಾರೆ. ಇದು ಬಿಜೆಪಿ ವರಿಷ್ಠರ ಗಮನಕ್ಕೆ ಬಂದಿದೆ. ಹಾಗಾಗಿ ಈ ಬಾರಿ ಯಾವುದೇ ಹೊಂದಾಣಿಕೆ ಇಲ್ಲ ಎಂದು ಅವರು ಸ್ಪಷ್ಟನೆ ನೀಡಿದರು.

ಬಿಜೆಪಿಯಿಂದಲೇ ಸ್ಪರ್ಧೆ: ಕಾಂಗ್ರೆಸ್ ಸೇರುವ ವದಂತಿಗಳ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ ಸಿ.ಪಿ. ಯೋಗೇಶ್ವರ್, ‘ ಅದೆಲ್ಲ ಬರೀ ಸುಳ್ಳು ಸುದ್ದಿ. ಚನ್ನಪಟ್ಟಣದಲ್ಲಿ ಈಗಾಗಲೇ ಬಿಜೆಪಿ ಅಭ್ಯರ್ಥಿಯಾಗಿ ಪ್ರಚಾರ ಮಾಡುತ್ತಿದ್ದೇನೆ’ ಎಂದರು.

‘ಬಿಜೆಪಿಯ ಆಂತರಿಕ ಕುತಂತ್ರ’

ಬೆಂಗಳೂರು: ‘ಯಡಿಯೂರಪ್ಪರನ್ನು ರಾಜಕೀಯವಾಗಿ ಮುಗಿಸುವ ಬಿಜೆಪಿಯ ಆಂತರಿಕ ಕುತಂತ್ರದ ಭಾಗವಾಗಿ ಅವರ ಮನೆ ಮೇಲೆ ದಾಳಿ ನಡೆಸಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಬಿಎಸ್‌ವೈ ಮನೆ ಮೇಲೆ ನಡೆದ ದಾಳಿಯ ಹಿಂದೆ ಕಾಂಗ್ರೆಸ್ ಕೈವಾಡವಿದೆ’ ಎಂಬ ಆರೋಪಕ್ಕೆ ತಿರುಗೇಟು ನೀಡಿ, ‘ಮೀಸಲಾತಿ ವಿಚಾರದಲ್ಲಿ ಬೊಮ್ಮಾಯಿ ಗೊಂದಲ ಮೂಡಿಸಿದ್ದಾರೆ. ಜನ ತಮಗೆ ಅನ್ಯಾಯ ಆದಾಗ ಆಕ್ರೋಶ ವ್ಯಕ್ತಪಡಿಸುವುದು ಸಹಜ. ಮುಖ್ಯಮಂತ್ರಿ, ಸಚಿವರ ಮನೆ ಮೇಲೆ ದಾಳಿ ಆಗದೆ ಯಾವುದೇ ಅಧಿಕಾರ ಇಲ್ಲದ ಬಿಎಸ್‌ವೈ ಮನೆ ಮೇಲೆ ದಾಳಿ ಆಗಿದೆ ಎಂದರೆ, ಇದು ಬಿಜೆಪಿಯ ಕುತಂತ್ರಕ್ಕೆ ಸಾಕ್ಷಿಯಲ್ಲದೆ ಮತ್ತೇನು’ ಎಂದು ಪ್ರಶ್ನಿಸಿದರು.

ಮತದಾರನ ಮನ ಅರಿಯಲು ‘ಬೂತ್ ಪಡೆ’

145 ಕ್ಷೇತ್ರ ಅನುಕೂಲಕರ ಎಂದು ಬಿಜೆಪಿ ಲೆಕ್ಕಾಚಾರ • ಕಡೇ ಹಂತದ ಬೂತ್ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 145 ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಅನುಕೂಲಕರ ಪರಿಸ್ಥಿತಿ ಇದೆಯೆಂದು ಲೆಕ್ಕಾಚಾರ ಹಾಕಿರುವ ಬಿಜೆಪಿ, ಈ ಕ್ಷೇತ್ರಗಳಲ್ಲಿನ ಮತದಾರರನ್ನು ಗರಿಷ್ಠ ಸಂಖ್ಯೆಯಲ್ಲಿ ತನ್ನ ತೆಕ್ಕೆಗೆ ಹಾಕಿಕೊಳ್ಳಲು ಬೂತ್ ಮಟ್ಟದಲ್ಲಿ ಕೊನೆ ಹಂತದ ಅಭಿಯಾನ ಆರಂಭಿಸಿದೆ.

ಈ 145 ಕ್ಷೇತ್ರಗಳಲ್ಲಿ ಕನಿಷ್ಠ 95 ಕ್ಷೇತ್ರಗಳನ್ನು ಗೆಲ್ಲಲು ಗುರಿ ನಿಗದಿ ಮಾಡಿಕೊಂಡಿರುವ ಬಿಜೆಪಿಯು ಬೂತ್ ಮಟ್ಟದಲ್ಲಿ ಪೇಜ್ ಪ್ರಮುಖ್‌ಗಳ ಮೂಲಕ ಮತದಾರರನ್ನು ಸಂಪರ್ಕಿಸುವ ಕೆಲಸಕ್ಕೆ ಚಾಲನೆ ನೀಡಿದೆ. ಪ್ರತಿ ಪೇಜ್ ಪ್ರಮುಖ್ 30 ರಿಂದ 50 ಮತದಾರರನ್ನು ಖುದ್ದಾಗಿ ಭೇಟಿ ಮಾಡಿ ಮನವೊಲಿಸುವ ಕಾರ್ಯ ಆರಂಭಿಸಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಪ್ರತಿ ಬೂತ್‌ನಲ್ಲೂ ಮತದಾರರನ್ನು ಎ, ಬಿ, ಸಿ ಮತ್ತು ಡಿ ಎಂದು ವರ್ಗೀಕರಣ ಮಾಡಿಕೊಂಡಿದೆ. ಎ ಎಂದರೆ ಕಟ್ಟಾ ಬಿಜೆಪಿ ಮತದಾರರು. ಇವರು ಕಡ್ಡಾಯವಾಗಿ ಮತ ಚಲಾಯಿಸುವಂತೆ ನೋಡಿಕೊಳ್ಳುವುದು, ಬಿ ಎಂದರೆ ಯಾರಿಗೆ ಮತ ಹಾಕಬೇಕು ಎಂಬ ಗೊಂದಲದಲ್ಲಿ ಇರುವವರು. ಸಿ ಎಂದರೆ ಬಿಜೆಪಿಗೆ ಮತ ಹಾಕದವರು. ಈ ವರ್ಗದವರನ್ನು ಸೆಳೆಯಲು ಗರಿಷ್ಠ ಪ್ರಯತ್ನ ಹಾಕುವುದು. ಡಿ ಎಂದರೆ ಸತ್ತವರು ಮತ್ತು ಊರುಬಿಟ್ಟವರು ಎಷ್ಟಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು. ಅವುಗಳನ್ನು ತೆಗೆಸಲು ಚುನಾವಣಾ ಆಯೋಗಕ್ಕೆ ಮಾಹಿತಿ ನೀಡುವುದು.

ಈಗಾಗಲೇ ಬೂತ್ ಮಟ್ಟದಲ್ಲಿ ಮೂರು ಹಂತಗಳಲ್ಲಿ ಮತದಾರರನ್ನು ಸಂಪರ್ಕಿಸಿ ವರದಿಗಳನ್ನು ರಾಜ್ಯ ಸಮಿತಿಗೆ ಕಳುಹಿಸಲಾಗಿದೆ. ಇದರ ಆಧಾರದಲ್ಲಿ ಪಕ್ಷದ ಕಾರ್ಯತಂತ್ರಗಳನ್ನು ಕಾಲ ಕಾಲಕ್ಕೆ ಬದಲಿಸಿಕೊಳ್ಳಲಾಗುತ್ತಿದೆ. ಬಿಜೆಪಿಯಿಂದ ದೂರ ಇರುವ ಮತದಾರರನ್ನು ಸೆಳೆಯಲು ಅಗತ್ಯವಿರುವ ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗುತ್ತಿದೆ. ಬಿಜೆಪಿ ದುರ್ಬಲವಾಗಿರುವ ಪ್ರದೇಶಗಳಲ್ಲಿ ಮೋದಿ, ಅಮಿತ್ ಶಾ ಅವರ ಕಾರ್ಯಕ್ರಮ ಮತ್ತು ರೋಡ್ ಶೋ ನಡೆಸಿರುವುದು ಈ ಕಾರ್ಯತಂತ್ರದ ಭಾಗವಾಗಿದೆ ಎಂದು ಬಿಜೆಪಿ ಮುಖಂಡರೊಬ್ಬರು ಹೇಳಿದರು.

ಮತದಾರರ ಮನಸ್ಸಿನಲ್ಲಿ ಪರಿ ವರ್ತನೆ ಆಗಿದೆಯೇ? ಯಾವ ಸಮುದಾಯ ಮುನಿಸಿಕೊಂಡಿದೆ. ಕಾಂಗ್ರೆಸ್ ಅಥವಾ ಜೆಡಿಎಸ್ ಬಗ್ಗೆ ಮತದಾರರ ಮನಸ್ಸಿನಲ್ಲಿ ಏನಿದೆ ಎಂದು ಬೂತ್ ಅಭಿಯಾನದ ಕೊನೆ ಘಟ್ಟದಲ್ಲಿ ತಿಳಿದು ರಾಜ್ಯ ಸಮಿತಿಗೆ ವರದಿ ನೀಡಲಾಗುತ್ತದೆ ಎಂದು ಹೇಳಿದರು.

ಪ್ರತಿ ಶಾಸಕರ ಬಗ್ಗೆಯೂ 3 ಬಾರಿ ಸಮೀಕ್ಷೆ ನಡೆಸಿ, ಕ್ಷೇತ್ರದ ಸ್ಥಿತಿ ಗತಿಯ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ಬೂತ್ ಮಟ್ಟದ ಮಾಹಿತಿ ಸಮೀಕ್ಷೆಗೆ ಪೂರಕವಾಗಿದ್ದರೆ, ಗೆಲ್ಲಲು ಸಾಧ್ಯವೇ ಇಲ್ಲದ ಪರಿಸ್ಥಿತಿ ಎದುರಿಸುತ್ತಿರುವ ಶಾಸಕರಿಗೆ ಟಿಕೆಟ್ ನೀಡುವ ಸಾಧ್ಯತೆಯೇ ಇಲ್ಲ. ಅಂತಹ ಕ್ಷೇತ್ರಗಳಲ್ಲಿ ಪರ್ಯಾಯ ಅಭ್ಯರ್ಥಿಗಳ ಹುಡುಕಾಟವೂ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ವಲಸಿಗರ ಮೇಲೆ ಕಾಂಗ್ರೆಸ್ ನಾಯಕರ ಕಣ್ಣು

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಗೆ ಮೊದಲ ಪಟ್ಟಿಯಲ್ಲಿ 124 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಿಸಿರುವ ಕಾಂಗ್ರೆಸ್, ಎರಡನೇ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ಚುರುಕುಗೊಳಿಸಿದೆ. ಸೋಮವಾರ ತಡರಾತ್ರಿಯವರೆಗೆ ಉಳಿದ 100 ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ತಯಾರಿಸಲು ಚುನಾವಣಾ ಸ್ಕ್ರೀನಿಂಗ್ ಸಮಿತಿ ಸಭೆ ನಡೆದಿದೆ.

ಸುಮಾರು ಏಳು ತಾಸು ನಡೆದ ಸಭೆಯಲ್ಲಿ 34 ಕ್ಷೇತ್ರಗಳಿಗೆ ಮಾತ್ರ ಸಂಭವನೀಯ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲಾಗಿದೆ. ಇನ್ನೂ ಕೆಲವು ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಇದೇ 30ರಂದು ಮತ್ತೊಂದು ಸುತ್ತಿನ ಸಭೆ ನಡೆಯಲಿದೆ.

ಏಪ್ರಿಲ್ 3ರಂದು ದೆಹಲಿಯಲ್ಲಿ ಕೇಂದ್ರ ಚುನಾವಣಾ ಸಮಿತಿ ಸಭೆ ನಡೆಯುವ ಸಾಧ್ಯತೆಯಿದೆ. ಈ ಸಭೆಯಲ್ಲಿ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸುವ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಮಾರ್ಚ್ 30ರ ನಂತರ ಎರಡನೇ ಪಟ್ಟಿ ಬಿಡುಗಡೆ ಮಾಡಲಾಗುವುದು. ಮೊದಲ ಪಟ್ಟಿಯಲ್ಲಿ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ’ ಎಂದಿದ್ದಾರೆ.

ಈ ಮಧ್ಯೆ, ‘ಆಪರೇಷನ್ ಕಮಲ’ದ ಪರಿಣಾಮ ಪಕ್ಷ ತ್ಯಜಿಸಿ ಬಿಜೆಪಿ ಸೇರಿದ ಶಾಸಕರಿರುವ ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರು ಅಂತಿಮಗೊಳಿಸದೇ ಇರಲು ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದಾರೆ. ಸ್ಕ್ರೀನಿಂಗ್ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ. ಅಲ್ಲದೆ, ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿ ಕಾದು ನೋಡುವ ತಂತ್ರದ ಅನುಸರಿಸಲು ನಾಯಕರು ಮುಂದಾಗಿದ್ದಾರೆ.

ಯಲ್ಲಾಪುರ ಕ್ಷೇತ್ರದಲ್ಲಿ ಕೆಲವು ತಿಂಗಳ ಹಿಂದೆ ಬಿಜೆಪಿಗೆ ರಾಜೀನಾಮೆ ಕಾಂಗ್ರೆಸ್ ಸೇರಿರುವ ವಿ. ಎಸ್. ಪಾಟೀಲ ಅವರು ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಆದರೆ, ಪಕ್ಷ ತ್ಯಜಿಸಿ ಬಿಜೆಪಿ ತೆಕ್ಕೆಗೆ ಜಾರಿರುವ ಶಿವರಾಮ ಹೆಬ್ಬಾರ್ ಅವರು ಕಾಂಗ್ರೆಸ್‌ಗೆ ಮರಳಬಹುದೇ ಎಂಬ ನಿರೀಕ್ಷೆಯಲ್ಲಿದ್ದಾರೆ ಕಾಂಗ್ರೆಸ್ ನಾಯಕರು. ಸಚಿವರಾದ ಕೆ. ಗೋಪಾಲಯ್ಯ, ಎಸ್.ಟಿ. ಸೋಮಶೇಖರ್, ಬೈರತಿ ಬಸವರಾಜು ಕೂಡಾ ಪಕ್ಷಕ್ಕೆ ಮರಳಬಹುದು ಎನ್ನುವುದು ನಾಯಕರ ನಿರೀಕ್ಷೆ. ಹೀಗಾಗಿ, ಈ ಸಚಿವರು ಪ್ರತಿನಿಧಿಸುವ ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಕೆ.ಆರ್. ಪುರ ಕ್ಷೇತ್ರಗಳಿಗೆ ಯಾವುದೇ ಅಭ್ಯರ್ಥಿಯ ಬಗ್ಗೆ ಚರ್ಚೆ ನಡೆದಿಲ್ಲ. ಅವರು ಪಕ್ಷಕ್ಕೆ ಮರಳದಿದ್ದರೆ ಕೊನೆಯ ಹಂತದಲ್ಲಿ ಈ ಕ್ಷೇತ್ರಗಳಿಗೆ ಟಿಕೆಟ್ ಅಂತಿಮಗೊಳಿಸಲು ಚರ್ಚೆ ನಡೆದಿದೆ ಎಂದೂ ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮುಖಂಡ ಚೆಲುವರಾಯ ಸ್ವಾಮಿ, ‘ವಲಸಿಗ ಸಚಿವರು ಕಾಂಗ್ರೆಸ್ಸಿಗೆ ಬರುವ ಬಗ್ಗೆ ಚರ್ಚೆ ನಡೆದಿದೆ. ಅಂತಿಮವಾಗಿ ಏನೆನ್ನುವುದು ಗೊತ್ತಿಲ್ಲ ಚುನಾವಣೆ ಘೋಷಣೆ ಆದ ಬಳಿಕ ಗೊತ್ತಾಗುತ್ತದೆ. ಸೋಮಶೇಖರ್, ಬೈರತಿ ಸೇರಿದಂತೆ ಹಲವರು ಕಾಂಗ್ರೆಸ್ ಸೇರುವ ಬಗ್ಗೆ ಚರ್ಚೆ ಇದೆ’ ಎಂದಿದ್ದಾರೆ.

ಮೋದಿ, ಶಾ ಯೋಗಿ ರ‍್ಯಾಲಿ

ಈ ಬಾರಿ ಚುನಾವಣಾ ಪ್ರಚಾರಕ್ಕಾಗಿ ಬರುವ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ 6 ರಿಂದ 7 ಬಾರಿ, ಅಮಿತ್ ಶಾ 10 ಬಾರಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ 5 ಕ್ಕೂ ಹೆಚ್ಚು ಬಾರಿ ಬರುವರು.

ಸಾರ್ವಜನಿಕ ಸಭೆಗಳು ಮತ್ತು ರೋಡ್ ಶೋಗಳಿಗೆ ಆದ್ಯತೆ ನೀಡಲಾಗುವುದು. ಈ ಮೂಲಕ ರಾಜ್ಯದಲ್ಲಿ ಬಿಜೆಪಿ ಪರ ಅಲೆ ಸೃಷ್ಟಿಸಲಾಗುವುದು. ಇದಲ್ಲದೇ ರಾಜ್ಯದ ವಿವಿಧ ಪ್ರದೇಶಗಳಿಗೆ ಅನುಗುಣವಾಗಿ ಚಲನಚಿತ್ರ ನಟರನ್ನೂ ಪ್ರಚಾರಕ್ಕೆ ಬಳಸಿಕೊಳ್ಳುವ ಚಿಂತನೆಯೂ ನಡೆದಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

> **ಏಪ್ರಿಲ್ ಮೊದಲ ವಾರ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಹುತೇಕ ಪ್ರಕಟಗೊಳ್ಳಲಿದೆ.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಬಿಎಸ್‌ಪಿ: 53 ಅಭ್ಯರ್ಥಿಗಳ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಗೆ 53 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮಂಗಳವಾರ ಬಿಡುಗಡೆ ಮಾಡಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮೊದಲ ಪಟ್ಟಿ ಬಿಡುಗಡೆ ಮಾಡಿದ ಬಿಎಸ್‌ಪಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಂ. ಕೃಷ್ಣಮೂರ್ತಿ, ಏಪ್ರಿಲ್ 10ರೊಳಗೆ ಉಳಿದ ಎಲ್ಲ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗುವುದು’ ಎಂದು ಹೇಳಿದರು.

ಅಭ್ಯರ್ಥಿಗಳು: ಎಂ. ಕೃಷ್ಣಮೂರ್ತಿ (ಮಳವಳ್ಳಿ), ಕೆ.ಬಿ. ವಾಸು (ಗುರುಮಠಕಲ್), ಎನ್. ಮಧು (ಮಧುಗಿರಿ), ಜಿ. ಅಶ್ವಥ್ ನಾರಾಯಣ (ತಿಪಟೂರು), ಹ.ರಾ. ಮಹೇಶ್ (ಚಾಮರಾಜನಗರ), ಗಂಗಾಧರ್ ಬಹುಜನ್ (ಬೇಲೂರು), ಚಿನ್ನಪ್ಪ ಚಿಕ್ಕಹಾಗಡೆ (ಆನೇಕಲ್), ಡಾ. ದಸ್ತಗಿರಿ ಮುಲ್ಲಾ (ಸಿಂದಗಿ), ಕಲ್ಲಪ್ಪ ಆರ್. ತೊರವಿ (ನಾಗಠಾಣ), ಎಲ್. ಆರ್. ಬೋಸ್ಲೆ (ಕಲಬುರಗಿ ದಕ್ಷಿಣ), ಸುನಂದ್ ಎನ್.ಎಚ್ (ರಾಮದುರ್ಗ), ಸಂದೀಪ್ ಮಾರಸಂದ್ರ ಮುನಿಯಪ್ಪ (ಯಲಹಂಕ), ಹರೀಶ್ ಅತ್ನಿ (ಅರಕಲಗೂಡು), ಅಂಕುಶ್ ಗೋಖಲೆ (ಹುಮನಾಬಾದ್), ಕಮಲ್ ನಾಗರಾಜ್ (ಕೊಳ್ಳೇಗಾಲ), ಕಪಿಲ್ ಗೋಡಬಲೆ (ಬೀದರ್ ದಕ್ಷಿಣ), ದೇವೇಂದ್ರಪ್ಪ ಕಟ್ಟಿಮನಿ (ಶಿರಹಟ್ಟಿ), ಮೈಲಾರಿ ಶಳ್ಳಗಿ (ಕಲಬುರಗಿ ಗ್ರಾಮೀಣ), ಪಿ. ಮಹದೇವ್ (ನೆಲಮಂಗಲ), ಕಾಶೀನಾಥ್ ದೊಡ್ಡಮನಿ (ಮುದ್ದೇಬಿಹಾಳ), ಅನಿಲ್ ಕುಮಾರ್ (ಲಿಂಗಸುಗೂರು), ರಂಗಸ್ವಾಮಿ (ಹಿರಿಯೂರು), ಎಲ್.ಬಿ. ರಮೇಶ್ (ಮೂಡಿಗೆರೆ), ಗುಣವಂತ ಸೂರ್ಯವಂಶಿ (ಔರಾದ್), ಬಿ.ಆರ್. ಪುಟ್ಟಸ್ವಾಮಿ (ಟಿ. ನರಸೀಪುರ), ಡಿ. ಹನುಮಂತಪ್ಪ (ಹರಿಹರ), ಎ.ಡಿ. ಶಿವಪ್ಪ (ಶಿವಮೊಗ್ಗ ಗ್ರಾಮೀಣ), ಎಸ್.ಪಿ. ಶಿವಕುಮಾರ್ (ಮದ್ದೂರು), ತಾರೇಶ್ ಎಚ್.ಎಸ್. (ಹೊಳೇನರಸೀಪುರ), ಗೋವಿಂದರಾಜ್ ಎಲ್.ಜಿ. (ಯಶವಂತಪುರ), ಗೌತಮ್ ಬೊಮ್ಮನಹಳ್ಳಿ (ಚಿಂಚೋಳಿ), ಹುಚ್ಚಪ್ಪ ವಟಾರ್ (ಅಫಜಲಪುರ), ಕಿರಣ್ ವಿ. (ಬೆಂಗಳೂರು ದಕ್ಷಿಣ), ಪ್ರೇಮನಾಥ್ ಚಿಕ್ಕತುಂಬಾಳ್ (ಹುಬ್ಬಳ್ಳಿ- ಧಾರವಾಡ ಪೂರ್ವ), ಎಸ್.ಬಿ. ಸುರೇಶ್ (ಕೋಲಾರ), ಚಿಕ್ಕಣ್ಣ (ದಾಸರಹಳ್ಳಿ), ಹುಲುಗಪ್ಪ (ಸಿಂಧನೂರು), ರೇವಣ್ಣ ಸಿದ್ಧಪ್ಪ ಹೊಸಮನಿ (ಹುಬ್ಬಳ್ಳಿ-ಧಾರವಾಡ ಕೇಂದ್ರ), ರಾಮಣ್ಣ (ಮಾಗಡಿ), ಎನ್. ಎಂ. ಕೃಷ್ಣಪ್ಪ (ಕನಕಪುರ), ಚಂದ್ರಶೇಖರಯ್ಯ (ಚನ್ನಪಟ್ಟಣ), ಜ್ಞಾನೇಶ್ವರ್ ಸಿಂಗಾರೆ (ಬಸವಕಲ್ಯಾಣ), ಸುನೀಲ್ ಶಂಕರ್ ವಾಗ್ಮೋರೆ (ಕಾಗವಾಡ), ಸ್ವಾಮಿ (ರಾಮನಗರ), ಯಮನಪ್ಪ ತಳವಾರ (ಬೆಳಗಾವಿ ಗ್ರಾಮೀಣ), ಎಚ್.ಎಂ. ವೀರೇಶ್ (ಸಿರುಗುಪ್ಪ), ಉತ್ತನೂರ್ ನಾಗರಾಜ್ (ಕಂಪ್ಲಿ), ಶಿವಪುತ್ರಪ್ಪ ಗುಮಗೇರಿ (ಕುಷ್ಟಗಿ), ಕೆ. ಬಾಬು (ಬಳ್ಳಾರಿ ನಗರ), ಡಾ. ನಟರಾಜ್ (ಶಿರಾ), ಭೀಮರಾಯ ನೆಲೋಗಿ (ಜೇವರ್ಗಿ), ಡಿವಿಲ್ ಕುಮಾರ್ (ಮಡಿಕೇರಿ), ಬಿ.ಕೆ. ಹೊನ್ನಯ್ಯ (ಖಾನಾಪುರ).

‘ವರುಣಾದಲ್ಲೇ ಕೊನೆ ಚುನಾವಣೆ’

ಎಚ್‌.ಡಿ.ಕೋಟೆ (ಮೈಸೂರು ಜಿಲ್ಲೆ): ‘ನನ್ನ ಹುಟ್ಟೂರು ವರುಣಾ ಕ್ಷೇತ್ರದ ಸಿದ್ದರಾಮನಹುಂಡಿ. ನನ್ನ ಕೊನೇ ಚುನಾವಣೆಯನ್ನು ಇದೇ ಕ್ಷೇತ್ರದಲ್ಲೇ ಎದುರಿಸುವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವರುಣಾ ಕ್ಷೇತ್ರ 2008ರಲ್ಲಿ ರಚನೆಯಾದ ನಂತರದ ಎರಡು ಚುನಾವಣೆಗಳಲ್ಲಿ ಆಯ್ಕೆಯಾಗಿದ್ದೆ. ಕೋಲಾರ ಜನರಿಂದಲೂ ಹೆಚ್ಚು ಒತ್ತಡ ಬಂದಿರುವುದರಿಂದ ಅಲ್ಲಿಯೂ ಸ್ಪರ್ಧಿಸುವೆ’ ಎಂದರು.

‘ಕಳೆದ ಚುನಾವಣೆಯಲ್ಲಿ ಜೆಡಿಎಸ್– ಬಿಜೆಪಿ ಹೊಂದಾಣಿಕೆ ಮಾಡಿಕೊಂಡಿದ್ದವು. ಈ ಚುನಾವಣೆಯಲ್ಲೂ ಮೈತ್ರಿ ಮಾಡಿಕೊಂಡರೂ ಅಚ್ಚರಿಯೇನಿಲ್ಲ’ ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮನೆ ಮೇಲೆ ಕಲ್ಲು ತೂರಾಟದ ಪ್ರಕರಣದ ಆರೋಪಿ ಜೊತೆಗಿನ ಫೋಟೊ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಯಾರೋ ಬರುತ್ತಾರೆ. ಫೋಟೊ ತೆಗೆದುಕೊಳ್ಳುತ್ತಾರೆ. ಅವರು ಕೆಟ್ಟವರೇ, ಒಳ್ಳೆಯವರೇ ಎಂಬುದು ನನಗೇನು ಗೊತ್ತು’ ಎಂದರು.

‘ಕಲ್ಲುತೂರಾಟಕ್ಕೂ ಕಾಂಗ್ರೆಸ್‌ನವರಿಗೂ ಸಂಬಂಧವಿಲ್ಲವೆಂದು ಯಡಿಯೂರಪ್ಪ ಅವರೇ ಹೇಳಿದ್ದಾರೆ. ಹೀಗಿದ್ದರೂ ರಾಜಕೀಯಕ್ಕಾಗಿ ಹೇಳಿಕೆ ನೀಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆಗೆ ತಿರುಗೇಟು ನೀಡಿದರು. ‘ಸ್ಥಳೀಯ ಕಾಂಗ್ರೆಸ್ ನಾಯಕರ ಪ್ರಚೋದನೆಯಿಂದ ಕಲ್ಲು ತೂರಾಟ ನಡೆದಿದೆ’ ಎಂದು ಬೊಮ್ಮಾಯಿ ಹೇಳಿದ್ದರು.

‘ರಾಮದೇವರ ಬೆಟ್ಟ: ₹100 ಕೋಟಿ ವೆಚ್ಚದಲ್ಲಿ ರಾಮಮಂದಿರ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮನಗರದ ರಾಮದೇವರ ಬೆಟ್ಟದಲ್ಲಿನ ರಾಮಮಂದಿರವನ್ನು ಪರಿಸರ ಸೂಕ್ಷ್ಮತೆ ಗಮನದಲ್ಲಿ ಇರಿಸಿಕೊಂಡು, ಕಾನೂನು ತೊಡಕು ಎದುರಾಗದಂತೆ ಅಭಿವೃದ್ಧಿಗೊಳಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ರಾಮದೇವರ ಬೆಟ್ಟದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕೆ ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ‘19 ಎಕರೆ ವಿಸ್ತೀರ್ಣ ಹೊಂದಿರುವ ರಾಮದೇವರ ಬೆಟ್ಟವನ್ನು ದಕ್ಷಿಣ ಭಾರತದ ಅಯೋಧ್ಯೆಯಾಗಿ ರೂಪಿಸಬೇಕು ಎನ್ನುವುದು ಸ್ಥಳೀಯರ ಬಹುಕಾಲದ ಆಸೆ. ಇದಕ್ಕೆ ಅಂದಾಜು ₹ 100 ಕೋಟಿಯಿಂದ ₹ 120 ಕೋಟಿ ಖರ್ಚಾಗಬಹುದು. ಮುಜರಾಯಿ ಇಲಾಖೆ ಮತ್ತು ಮುಖ್ಯಮಂತ್ರಿ ಅನುಮತಿ ಪಡೆದು ಶಿಲಾನ್ಯಾಸ ಮಾಡಲಾಗುವುದು’ ಎಂದರು.

‘ಪರಿಸರಸ್ನೇಹಿಯಾಗಿ ರಾಮನ ದೇವಸ್ಥಾನದ ಅಭಿವೃದ್ಧಿಗೆ ತೀರ್ಮಾನಿಸಲಾಗಿದೆ. ಬೆಟ್ಟದಲ್ಲಿರುವ ರಣಹದ್ದುಗಳ ಆವಾಸ ಸ್ಥಾನಕ್ಕೂ ಧಕ್ಕೆ ಆಗದಂತೆ ನೋಡಿಕೊಳ್ಳಲಾಗುವುದು. ಮುಜರಾಯಿ ಇಲಾಖೆಯಿಂದ ನಿರ್ಮಿತಿ ಕೇಂದ್ರಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಕಳುಹಿಸಲಾಗುವುದು’ ಎಂದರು.

ಯೋಜನೆಗೂ ಚುನಾವಣೆಗೂ ಸಂಬಂಧವಿಲ್ಲ: ‘ರಾಮಮಂದಿರ ಯೋಜನೆಗೂ ಚುನಾವಣೆಗೂ ಸಂಬಂಧವಿಲ್ಲ. ದೇವರ ಕೆಲಸ ಮಾಡುವುದಕ್ಕೆ ಇದೆಲ್ಲ ಬೇಕಿಲ್ಲ. ಇದೇನಿದ್ದರೂ ಶ್ರೀರಾಮ ದೇವರ ಕೆಲಸವಷ್ಟೆ. ಆರಂಭಿಕವಾಗಿ ಯೋಜನಾ ವರದಿ ಸಿದ್ಧಪಡಿಸಲು ₹ 40 ಲಕ್ಷ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಯಾವ ರೀತಿ ಕೈಗೆತ್ತಿಕೊಳ್ಳಬೇಕು ಎನ್ನುವುದನ್ನು ಮುಖ್ಯಮಂತ್ರಿ ಬಳಿ ಚರ್ಚಿಸಿ ಅಂತಿಮಗೊಳಿಸಲಾಗುವುದು’ ಎಂದೂ ಹೇಳಿದರು.

‘ಈ ವರ್ಷದ ಬಜೆಟ್‌ನಲ್ಲೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಯೋಜನೆಯನ್ನು ಪ್ರಕಟಿಸಿದ್ದಾರೆ. ಅದರಂತೆ ಯೋಜನೆ ಜಾರಿಗೆ ಬರಲಿದೆ. ಎರಡು ತಿಂಗಳ ಹಿಂದೆ ರಾಮನಗರದ ಸ್ಥಳೀಯ ಭಕ್ತಾದಿಗಳ ಜತೆ ಅಯೋಧ್ಯೆಗೆ ಭೇಟಿ ನೀಡಲಾಗಿತ್ತು. ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೊಂದಿಗೂ ಈ ವಿಚಾರವನ್ನು ಚರ್ಚಿಸಲಾಗಿತ್ತು’ ಎಂದು ಅವರು ಹೇಳಿದರು.

ಪ್ರಾತ್ಯಕ್ಷಿಕೆಯನ್ನು ಸಿದ್ಧಪಡಿಸಿರುವ ಅರ್ಬನ್ ಡಿಸೈನರ್ಸ್ ಸಂಸ್ಥೆಯ ಯಶಸ್ವಿನಿ ಶರ್ಮಾ ಇದ್ದರು.

‘ಪರಿಶಿಷ್ಟರೆಲ್ಲ ಒಂದಾದರೆ, ನೀವು ಹೇಳಿದವರದ್ದೇ ಆಡಳಿತ’

ಗೋಕಾಕ (ಬೆಳಗಾವಿ ಜಿಲ್ಲೆ): ‘ರಾಜ್ಯದಲ್ಲಿ ಪರಿಶಿಷ್ಟ ಜನರೆಲ್ಲ ಒಂದಾದರೆ, ನೀವು ಹೇಳಿದವರದ್ದೇ ಆಡಳಿತ ನಡೆಯುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಗೋಕಾಕ, ಅರಭಾವಿ ಹಾಗೂ ಅಥಣಿ ಕ್ಷೇತ್ರಗಳ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

‘ರಾಜ್ಯ ರಾಜಕಾರಣದಲ್ಲಿ ಬೆಳಗಾವಿ ಜಿಲ್ಲೆ ನಿರ್ಧಾರವೇ ರಾಜ್ಯದ ನಿರ್ಧಾರ ಕೂಡ ಆಗುತ್ತದೆ’ ಎಂದು ಅವರು ತಿಳಿಸಿದರು.

ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಮಾತನಾಡಿ, ‘ಕರ್ನಾಟಕದಲ್ಲಿ ಲಿಂಗಾಯತರನ್ನು ಮುಖ್ಯಮಂತ್ರಿ ಮಾಡುವ ಏಕಮಾತ್ರ ಪಕ್ಷ ಬಿಜೆಪಿ. ಲಿಂಗಾಯತ ಎಲ್ಲ ಪಂಗಡದವರೂ ಒಂದಾಗಿರಿ. ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ನಿಮ್ಮ ಮತಗಳು ಒಡೆದುಹೋಗದಂತೆ ಎಚ್ಚರಿಕೆ ವಹಿಸಿ’ ಎಂದರು.

‘ರಾಹುಲ್ ಗಾಂಧಿ ಆದಿಯಾಗಿ ಎಲ್ಲ ಕಾಂಗ್ರೆಸ್ಸಿಗರೂ ಬೋಗಸ್ ಮಾತನಾಡುತ್ತಾರೆ. ಅವರು ನೀಡಿದ ಗ್ಯಾರಂಟಿಗಳನ್ನು ಯಾರೂ ಪೂರೈಸಲು ಸಾಧ್ಯವಿಲ್ಲ. ಈ ಬೋಗಸ್ ಭರವಸೆ ನಂಬಬೇಡಿ’ ಎಂದು ಶಾಸಕ ರಮೇಶ ಜಾರಕಿಹೊಳಿ ಕಿಡಿ ಕಾರಿದರು.

ಶಿಕ್ಷಕರ ವರ್ಗಾವಣೆ: ಚುನಾವಣಾ ಆಯೋಗಕ್ಕೆ ಪತ್ರ

ಬೆಂಗಳೂರು: ಸ್ಥಗಿತಗೊಂಡಿದ್ದ, ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮುಂದುವರಿಕೆಗೆ ಮುಖ್ಯಮಂತ್ರಿ ಸೂಚಿಸಿದ ಬೆನ್ನಲೇ, ಪ್ರಕ್ರಿಯೆಗಳನ್ನು ಆರಂಭಿಸಲು ಅನುಮತಿ ಕೋರಿ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಪತ್ರ ಬರೆದಿದ್ದಾರೆ.

ಒಂದು ಜಿಲ್ಲೆಯಲ್ಲಿ ನೇಮಕವಾದ ಶಿಕ್ಷಕರು ಮತ್ತೊಂದು ಜಿಲ್ಲೆಗೆ, ಜಿಲ್ಲೆಯ ಒಳಗೆ ವಿವಿಧ ತಾಲ್ಲೂಕುಗಳಿಗೆ ವರ್ಗಾವಣೆ ಪಡೆಯಲು, ಮೂರು ವರ್ಷದ ನಂತರ ವರ್ಗಾವಣೆಗೆ ಮತ್ತೆ ಕೋರಿಕೆ ಸಲ್ಲಿಸಲು ಅವಕಾಶವಾಗಿದೆ.

2023–24ನೇ ಸಾಲಿಗೆ ವರ್ಗಾವಣೆ ಕೋರಿ ಪ್ರಾಥಮಿಕ, ಪ್ರೌಢಶಾಲೆಯ 88,324 ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಅರ್ಜಿ ಸಲ್ಲಿಸಿದ್ದರು. ಆದರೆ, ಹೆಚ್ಚುವರಿ ಶಿಕ್ಷಕರ ಕೌನ್ಸೆಲಿಂಗ್ ಹಾಗೂ ಇತರೆ ಪ್ರಕ್ರಿಯೆಗಳಲ್ಲಿ ತಾಂತ್ರಿಕ ಲೋಪದ ಕಾರಣ ನೀಡಿ ವರ್ಗಾವಣೆ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು.

‘ಕೌನ್ಸೆಲಿಂಗ್ ಮೂಲಕ ಸ್ಥಳ ಆಯ್ಕೆಗೆ ಅವಕಾಶ ನೀಡಿದರೂ, ಹೊಸ ಶೈಕ್ಷಣಿಕ ವರ್ಷದ ಆರಂಭದ ಜೂ. 1ರ ನಂತರವೇ ಹೊಸ ಸ್ಥಳಗಳಿಗೆ ತೆರಳುವ ಷರತ್ತಿಗೆ ಒಳಪಟ್ಟು ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ಅನುಮತಿ ನೀಡಬೇಕು’ ಎಂದು ಪತ್ರದಲ್ಲಿ ಕೋರಿದ್ದಾರೆ.

ಇಡೀ ರಾತ್ರಿ ನಡೆದ ಪಂಚನಾಮೆ

ಎಸ್‌.ಆರ್‌.ಪಾಟೀಲ್ ಚಿತ್ರವಿದ್ದ ₹2.65 ಕೋಟಿ ಮೌಲ್ಯದ ವಸ್ತುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಯರಗಲ್ಲ– ಮದರಿಯಲ್ಲಿರುವ ಬಾಲಾಜಿ ಸಕ್ಕರೆ ಕಾರ್ಖಾನೆಯಲ್ಲಿ ಸಿಕ್ಕಿರುವ, ಮಾಜಿ ಸಚಿವ ಎಸ್.ಆರ್. ಪಾಟೀಲ್ ಅವರ ಭಾವಚಿತ್ರವುಳ್ಳ ಗಡಿಯಾರ, ಎಸ್.ಆರ್.ಪಿ ಹೆಸರಿನ ಟಿ- ಶರ್ಟ್‌ಗಳ ಮೌಲ್ಯ ₹2.65 ಕೋಟಿ ಎಂದು ತನಿಖೆಯ ವೇಳೆ ತಿಳಿದುಬಂದಿದೆ.

ಸೋಮವಾರ ಈ ವಸ್ತುಗಳು ಪತ್ತೆಯಾಗುತ್ತಿದ್ದಂತೆ ತಾಳಿಕೋಟೆ, ಮುದ್ದೇಬಿಹಾಳ ಪೊಲೀಸ್ ಠಾಣೆಗಳಿಂದ ಸಿಬ್ಬಂದಿಯನ್ನು ಕರೆಸಿ ರಾತ್ರಿ 9 ಗಂಟೆಯಿಂದ ಪಂಚನಾಮೆ ಕಾರ್ಯ ಶುರು ಮಾಡಿದ ನಂತರ ಅದು ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಪೂರ್ಣಗೊಂಡಿತು ಎಂದು ಮೂಲಗಳು ತಿಳಿಸಿವೆ. ಪತ್ತೆಯಾದ ವಸ್ತುಗಳಲ್ಲಿ ಗೋಡೆ ಗಡಿಯಾರ 36,720, ಟಿ–ಶರ್ಟ್ 55 ಸಾವಿರ ಹಾಗೂ 50,720 ಕ್ಯಾರಿ ಬ್ಯಾಗ್ ಪತ್ತೆಯಾಗಿದ್ದು ಅವುಗಳ ಒಟ್ಟು ಮೌಲ್ಯ ₹2,65,96,400 ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎಚ್. ಡಿ.ಆನಂದಕುಮಾರ್, ಹೆಚ್ಚುವರಿ ಎಸ್ಪಿ ಶಂಕರ ಮಾರಿಹಾಳ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ ನೇತೃತ್ವದ ತಂಡ ರಾತ್ರಿಯೇ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಎಲ್ಲ ಸಾಮಗ್ರಿಗಳನ್ನೂ ಕಾರ್ಖಾನೆಯ ಗೋದಾಮಿನಲ್ಲಿಯೇ ಪಂಚನಾಮೆ ನಡೆಸಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಕುರಿತು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹16 ಲಕ್ಷ ನಗದು, ಮದ್ಯ ವಶ (ಹಾವೇರಿ ವರದಿ): ದಾಖಲೆ ಇಲ್ಲದೆ ಕಾರಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹16 ಲಕ್ಷ ನಗದನ್ನು ಶಿಗ್ಗಾವಿ ತಾಲ್ಲೂಕಿನ ಬಂಕಾಪುರ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದು, ಪ್ರಕರಣ ದಾಖಲಾಗಿದೆ. ಹಾವೇರಿ ನಗರದ ಕೊಂಡವಾಡ ಗಲ್ಲಿ ನಿವಾಸಿ ನಟರಾಜ ಬಾಳಿಮಠ (44) ಮತ್ತು ಶ್ರೀಕಂಠಯ್ಯ ಬಾಳಿಮಠ (40) ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.


ಮುದ್ದೇಬಿಹಾಳ ತಾಲ್ಲೂಕಿನ ಯರಗಲ್ಲಮದರಿ ಬಾಲಾಜಿ ಸಕ್ಕರೆ ಕಾರ್ಖಾನೆಯಲ್ಲಿ ಮಾಜಿ ಸಚಿವ ಎಸ್‌.ಆರ್‌.ಪಾಟೀಲ್ ಭಾವಚಿತ್ರವುಳ್ಳ ಗಡಿಯಾರ, ಟಿ ಶರ್ಟ್ ಪತ್ತೆಯಾದ ಹಿನ್ನೆಲೆಯಲ್ಲಿ ಕಾರ್ಖಾನೆಗೆ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ, ಎಸ್ಪಿ ಡಾ.ಎಚ್‌.ಡಿ.ಆನಂದಕುಮಾರ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದರು

₹ 3.67 ಕೋಟಿ ಮೌಲ್ಯದ ಕುಕ್ಕರ್, ಗ್ರೈಂಡರ್ ವಶ

ಬೆಂಗಳೂರು: ಯಲಹಂಕ ಕ್ಷೇತ್ರದ ಜಕ್ಕೂರು ಪ್ರದೇಶದ ವಿದ್ಯಾಶಿಲ್ಪ ಅಕಾಡೆಮಿಯ ಗೋದಾಮಿನಲ್ಲಿ ಮತದಾರರಿಗೆ ಹಂಚಲು ದಾಸ್ತಾನು ಮಾಡಿದ್ದ ₹ 3.67 ಕೋಟಿ ಸಾಮಗ್ರಿ ಗಳನ್ನು ಕೇಂದ್ರ ತೆರಿಗೆ ಇಲಾಖೆಯ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಗೋದಾಮಿನಲ್ಲಿ ಕುಕ್ಕರ್, ಮಿಕ್ಸರ್, ಗ್ರೈಂಡರ್, ಅಡುಗೆ ಪಾತ್ರೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ಮತದಾರರಿಗೆ ಹಂಚಲು ದಾಸ್ತಾನು ಮಾಡಿರು ವುದು ಮೇಲ್ನೋಟಕ್ಕೆ ಕಂಡು ಬಂದಿದೆ. ನಗರದ ರಿಟೇಲ್ ಸೂಪರ್ ಸ್ಟೋರ್ಸ್‌ನ ಕೃಷ್ಣಾ ಮಾಚಾರಿ ಮಂಜುನಾಥ್ ಮೂರು ಗೋದಾಮುಗಳಲ್ಲಿ ಸಾಮಗ್ರಿ ದಾಸ್ತಾನು ಮಾಡಿದ್ದರು ಎಂದು ಮೂಲಗಳು ತಿಳಿಸಿವೆ. ಎಂಸಿಸಿ ನೋಡಲ್ ಅಧಿಕಾರಿ ಮುನಿಚೆಲುವಯ್ಯ ಅವರು ವಿರುದ್ಧ ದೂರು ನೀಡಿದ್ದು, ಯಲಹಂಕ ಪೊಲೀಸ್ ಠಾಣೆಯಲ್ಲಿ ಕೃಷ್ಣಾಮಾಚಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

₹27.34 ಲಕ್ಷ ಹಣ ಪತ್ತೆ

ಬೆಳಗಾವಿ: ತಾಲ್ಲೂಕಿನ ಬಾಚಿ ಚೆಕ್‌ಪೋಸ್ಟ್‌ನಲ್ಲಿ ಸೋಮವಾರ ಸಂಜೆ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹27.34 ಲಕ್ಷ ಹಣ ಪತ್ತೆಯಾಗಿದೆ.

‘ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಚೆಕ್‌ಪೋಸ್ಟ್ ನಡೆಸಲಾಗುತ್ತಿತ್ತು. ಈ ವೇಳೆ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಎಂಎಸ್‌ಆರ್‌ಟಿಸಿ) ಬಸ್‌ನಲ್ಲಿ ಪತ್ತೆಯಾದ ಹಣ ವಶಕ್ಕೆ ಪಡೆದುಕೊಂಡಿದ್ದೇವೆ. ಮಹಾರಾಷ್ಟ್ರದ ವ್ಯಾಪಾರಿಯೊಬ್ಬರು ಹಣ ತೆಗೆದುಕೊಂಡು ಹೋಗುತ್ತಿದ್ದರು’ ಎಂದು ಬೆಳಗಾವಿ ಗ್ರಾಮೀಣ ಎಸಿಪಿ ಗೋಪಾಲಕೃಷ್ಣ ಗೌಡರ ತಿಳಿಸಿದರು.

ಮುಖ್ಯಮಂತ್ರಿ ಅವರಿಂದ 9 ನೂತನ ವಿಶ್ವವಿದ್ಯಾಲಯಗಳ ಉದ್ಘಾಟನೆ

ಉನ್ನತ ಶಿಕ್ಷಣದ ಬಲವರ್ಧನೆಗೆ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉನ್ನತ ಶಿಕ್ಷಣದ ಬಲವರ್ಧನೆಗೆ ವಿಶ್ವದ ಇತರೆ ವಿಶ್ವವಿದ್ಯಾಲಯಗಳ ಸಹಭಾಗಿತ್ವ ಅನಿವಾರ್ಯ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯದಲ್ಲಿ ಹೊಸದಾಗಿ ಆರಂಭವಾದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಿದೆ. ವಿಶ್ವವಿದ್ಯಾಲಯಗಳ ಸ್ಥಾಪನೆ ದೇಶಕ್ಕೇ ಮಾದರಿಯಾಗಿದೆ.ಎಲ್ಲರೂಕರ್ನಾಟಕದ ಮಾದರಿ ಅಳವಡಿಸಿಕೊಳ್ಳುವಂತೆ ಅವುಗಳ ಪ್ರಗತಿಯಾಗಬೇಕು' ಎಂದರು

'ಕರ್ನಾಟಕದ ಮಕ್ಕಳಿಗೂ ಐಐಟಿ ಶಿಕ್ಷಣ ದೊರಕಿಸಲು ಎಲ್ಲ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನೂ ಐಐಟಿ ಮಾದರಿಯಲ್ಲೇ ಅಭಿವೃದ್ಧಿಪಡಿಸಲಾಗುವುದು. ಅದಕ್ಕಾಗಿ ಜಗತ್ತಿನ ಉನ್ನತ ವಿಶ್ವವಿದ್ಯಾಲಯಗಳ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ' ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ನಾಲ್ಕು ವರ್ಷಗಳಲ್ಲಿ 25 ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. ಡಿಜಿಟಲೀಕರಣದ ಮೂಲಕ ಆಮೂಲಾಗ್ರ ಬದಲಾವಣೆ ಮಾಡಲಾಗುತ್ತಿದೆ. ಇದರ ಫಲವಾಗಿ 310 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮೊದಲ ಬಾರಿಗೆ ನ್ಯಾಕ್ ಮಾನ್ಯತೆ ಪಡೆದುಕೊಂಡಿವೆ' ಎಂದರು.

ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ವೈ.ಎಸ್. ಸಿದ್ದೇಗೌಡ, ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಇದ್ದರು.



ರಾಜ್ಯದ 9 ಹೊಸ ವಿಶ್ವವಿದ್ಯಾಲಯಗಳನ್ನು ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಉದ್ಘಾಟಿಸಿದರು. ಸಚಿವರಾದ ಮುರುಗೇಶ ನಿರಾಣಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಸಿದ್ದೇಗೌಡ, ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಇದ್ದರು —ಪ್ರಜಾವಾಣಿ ಚಿತ್ರ

ಇಬ್ಬರು ಶಿಕ್ಷಕರ ಅಮಾನತು

ಮಧುಗಿರಿ: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಹಾಗೂ ಕರ್ತವ್ಯ ಲೋಪ ಆರೋಪದ ಮೇಲೆ ಅದೇ ಶಾಲೆಯ ಮುಖ್ಯಶಿಕ್ಷಕನನ್ನು ಸೇವೆಯಿಂದ ಅಮಾನತುಗೊಳಿಸಿ ಬಿಇಒ ತಿಮ್ಮರಾಜು ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಸಹ ಶಿಕ್ಷಕ ಮಂಜುನಾಥ ಹಾಗೂ ಮುಖ್ಯಶಿಕ್ಷಕ ನಟರಾಜ್ ಅಮಾನತುಗೊಂಡವರು. ಸಹ ಶಿಕ್ಷಕ ಮಂಜುನಾಥ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದರು. ಇದರಿಂದ ಆಕ್ರೋಶಗೊಂಡ ಪೋಷಕರು ಸೋಮವಾರ ಶಾಲೆಯ ಬಳಿ ಬಂದ ಶಿಕ್ಷಕನಿಗೆ ಥಳಿಸಿ ಪ್ರತಿಭಟನೆ ನಡೆಸಿದ್ದರು. ಬಿಇಒ ತಿಮ್ಮರಾಜು ಹಾಗೂ ಸಿಡಿಪಿಒ ಎಸ್. ಅನಿತಾ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ಹೇಳಿಕೆ ಪಡೆದಿದ್ದರು.

ಬಳಿಕ ಶಿಕ್ಷಕನನ್ನು ಬಡವನಹಳ್ಳಿ ಠಾಣೆಯ ಪೊಲೀಸರಿಗೆ ಒಪ್ಪಿಸಿದ್ದರು. ಶಿಕ್ಷಕನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.



ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು

ಪ್ರತ್ಯೇಕ ಘಟನೆ: ಕೆರೆಯಲ್ಲಿ ಮುಳುಗಿ ನಾಲ್ವರು ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ



ಟಿ.ಎಸ್. ಮನೋಜ್



ಬಿ.ಎನ್. ಶಶಾಂಕ್



ಎಂ. ಸಂಜಯ್



ಟಿ. ಗಿರೀಶ್

ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ): ಕೆರೆಯಲ್ಲಿ ಈಜಲು ತೆರಳಿದ್ದ ನಾಲ್ವರು ವಿದ್ಯಾರ್ಥಿಗಳು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಎರಡು ಪ್ರತ್ಯೇಕ ಘಟನೆಗಳು ಹೊಳಲ್ಕೆರೆಯಲ್ಲಿ ಮಂಗಳವಾರ ನಡೆದಿವೆ.

ತಾಲ್ಲೂಕಿನ ನಂದನಹೊಸೂರಿನ ಗುಂಡಿ ಕೆರೆಯಲ್ಲಿ ಈಜಲು ಹೋಗಿದ್ದ ಹೊರಕೆರೆ ದೇವರಪುರದ ಎಂ. ಸಂಜಯ್ (18), ನಂದನಹೊಸೂರು ಗೊಲ್ಲರಹಟ್ಟಿಯ ಟಿ. ಗಿರೀಶ್ (18) ಹಾಗೂ ಕಣಿವೆ ಜೋಗಿಹಳ್ಳಿಯ ಟಿ.ಎಸ್. ಮನೋಜ್ (19) ಮೃತ ವಿದ್ಯಾರ್ಥಿಗಳು.

ಈ ಮೂವರೂ ವಿದ್ಯಾರ್ಥಿಗಳು ಹೊರಕೆರೆ ದೇವರಪುರ ಗ್ರಾಮದಲ್ಲಿರುವ ಲಕ್ಷ್ಮೀ ನರಸಿಂಹ ಸ್ವಾಮಿ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯ ಕಲಾ ವಿಭಾಗದಲ್ಲಿ ಅಭ್ಯಾಸ ಮಾಡುತ್ತಿದ್ದರು.

ಐದು ವಿಷಯಗಳ ಪರೀಕ್ಷೆ ಬರೆದಿದ್ದ ಇವರು, ಮಾರ್ಚ್ 29ರಂದು ಸಮಾಜಶಾಸ್ತ್ರ ವಿಷಯದ ಪರೀಕ್ಷೆ ಬರೆಯಬೇಕಿತ್ತು. ಮಧ್ಯಾಹ್ನ ಗುಂಡಿಕೆರೆಗೆ ಈಜಲು ಹೋಗಿದ್ದ ಮೂವರೂ ಸ್ನೇಹಿತರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇಬ್ಬರ ಶವಗಳನ್ನು ಸ್ಥಳೀಯರೇ ಹೊರತೆಗೆದಿದ್ದು, ಮತ್ತೊಬ್ಬ ಯುವಕನ ಶವವನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹೊರತೆಗೆದರು. ಚಿತ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕ ಸಾವು: ಹೊಳಲ್ಕೆರೆಯ ಹೊನ್ನೆಕೆರೆಯಲ್ಲಿ ಈಜಲು ತೆರಳಿದ್ದ ಪಟ್ಟಣದ ಖಾಸಗಿ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಬಿ.ಎನ್. ಶಶಾಂಕ್ (15) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಶಾಲೆಯಲ್ಲಿ ಮಂಗಳವಾರ ವಾರ್ಷಿಕ ಪರೀಕ್ಷೆ ಬರೆದು ಮಧ್ಯಾಹ್ನ ಮನೆಗೆ ಮರಳಿದ್ದ ಈ ಬಾಲಕ, ಈಜಲು ನಾಲ್ವರು ಸ್ನೇಹಿತರೊಂದಿಗೆ ಕೆರೆಗೆ ತೆರಳಿದ್ದ. ಈಜುವುದನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸುವಂತೆ ಗೆಳೆಯರಿಗೆ ತಿಳಿಸಿ ಮೇಲಿಂದ ಜಿಗಿದಿದ್ದ ಈತ ನಂತರ ಮೇಲೆ ಬರಲಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ. ಈ ಕುರಿತು ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಜಿನಿಯರ್‌ಗೆ ಲಂಚದ ರೂಪದಲ್ಲಿ ಎತ್ತು ನೀಡಲು ಮುಂದಾದ ರೈತ



ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು ಪಂಚಾಯಿತಿ ಕಚೇರಿಗೆ ಎತ್ತುಗಳೊಂದಿಗೆ ಬಂದ ರೈತ ಪ್ರಶಾಂತ ಬಿರಾದಾರ


ಬಸವಕಲ್ಯಾಣ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಯ ಬಿಲ್ ಪಾವತಿಗಾಗಿ ಕಿರಿಯ ಎಂಜಿನಿಯರ್ ಕೇಳಿದ ಲಂಚವನ್ನು ಕೊಡಲು ಸೋಮವಾರ ತಾಲ್ಲೂಕು ಪಂಚಾಯಿತಿ ಕಚೇರಿಗೆ ತಾಲ್ಲೂಕಿನ ಬಗದೂರಿ ಗ್ರಾಮದ ರೈತ ಪ್ರಶಾಂತ ಬಿರಾದಾರ ಎರಡು ಎತ್ತುಗಳನ್ನು ತಂದರು.

'ಉದ್ಯೋಗ ಖಾತ್ರಿ ಯೋಜನೆಯಡಿ ಕಳೆದ ಸಾಲಿನಲ್ಲಿ ನನ್ನ ಹೊಲದಲ್ಲಿ ನಾಲೆಗೆ ತಡೆಗೋಡೆ ನಿರ್ಮಿಸಲಾಗಿದೆ. ಇದಕ್ಕಾಗಿ ₹ 1 ಲಕ್ಷ ಮಂಜೂರು ಆಗಿತ್ತು. ಕೂಲಿ ಹಣದ ರೂಪದಲ್ಲಿ ₹ 55 ಸಾವಿರ ಪಾವತಿಯಾಗಿದ್ದು, ಇನ್ನುಳಿದ ₹ 45 ಸಾವಿರ ಸಾಮಗ್ರಿ ಖರೀದಿ ಹಣ ನೀಡಿರಲಿಲ್ಲ. ಅದರ ಪಾವತಿಗೆ ₹ 5 ಸಾವಿರ ಲಂಚದ ಕೇಳಲಾಗಿತ್ತು. ಹಣವಿಲ್ಲದ ಕಾರಣ ಎತ್ತುಗಳನ್ನು ತಂದೆ' ಎಂದು ರೈತ ಪ್ರಶಾಂತ ಬಿರಾದಾರ ತಿಳಿಸಿದರು. 'ರೈತನಿಗೆ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು. ಆದರೆ, ಕಿರಿಯ ಎಂಜಿನಿಯರ್ ಯಾರು ಎಂಬುದನ್ನು ರೈತ ಸ್ಪಷ್ಟವಾಗಿ ಹೇಳುತ್ತಿಲ್ಲ. 2019ರಲ್ಲಿ ಕಾಮಗಾರಿ ಆರಂಭವಾದಾಗ, ಆ ಹುದ್ದೆಯಲ್ಲಿ ಬೇರೆಯವರು ಇದ್ದರು.ಈಗ ಸೂರ್ಯಕಾಂತ ಎಂಬುವರು ಇದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ವರದಿ ಸಲ್ಲಿಸಿದ್ದೇನೆ' ಎಂದು ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಸಂತೋಷ ಚವಾಣ್ ತಿಳಿಸಿದ್ದಾರೆ.

'ಲಂಚಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ಬಸವಕಲ್ಯಾಣ ತಾಲ್ಲೂಕು ಪಂಚಾಯಿತಿ ತಾಂತ್ರಿಕ ಸಹಾಯಕ ಸೂರ್ಯಕಾಂತ ಪಾಟೀಲಗೆ ಸೇವೆಯಿಂದ ವಜಾಗೊಳಿಸಿ. ಹೊರ ಗುತ್ತಿಗೆ ಸೇವೆ ರದ್ದುಪಡಿಸಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ' ಎಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶಿಲ್ಪಾ ತಿಳಿಸಿದ್ದಾರೆ.

ನಿಧನ ವಾರ್ತೆ

ಮಾಲಿನಿ ಮಲ್ಯ



ಮಾಲಿನಿ ಮಲ್ಯ

ಬ್ರಹ್ಮಾವರ(ಉಡುಪಿ): ಕಡಲತೀರದ ಭಾರ್ಗವ ಡಾ.ಶಿವರಾಮ ಕಾರಂತರ ಆಪ್ತ ಸಹಾಯಕಿ ಸಾಹಿತಿ, ಮಾಲಿನಿ ಮಲ್ಯ (72) ಅಸೌಖ್ಯದಿಂದ ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರು ಅವಿವಾಹಿತೆಯಾಗಿದ್ದರು.

ಮಾಲಿನಿ ಅವರು ದೀರ್ಘ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ವರ್ಷದಿಂದ ಸಮಸ್ಯೆ ಹೆಚ್ಚಿದ ಕಾರಣ ಬೆಂಗಳೂರಿನಲ್ಲಿರುವ ಸಂಬಂಧಿಯೊಬ್ಬರ ಮನೆಯಲ್ಲಿದ್ದು ಚಿಕಿತ್ಸೆ ಪಡೆಯುತ್ತಿದ್ದರು.

ಆರಂಭದಲ್ಲಿ ಶಿಕ್ಷಣ ಸಂಸ್ಥೆಯಲ್ಲಿ ಬೆರಳಚ್ಚುಗಾರರಾಗಿ, ಅನಂತರ ಜೀವ ವಿಮಾ ನಿಗಮದಲ್ಲಿ ಉದ್ಯೋಗಿಯಾಗಿ ಸೇವೆ ಸಲ್ಲಿಸಿದ್ದರು. ಕಾರಂತರ ಆಪ್ತ ಸಹಾಯಕಿಯಾಗಿ ಕಾರ್ಯ ನಿರ್ವಹಿಸಿದ್ದರು.

ಅವರು 'ನಾನು ಕಂಡ ಕಾರಂತರು ಕೃತಿ' ಸೇರಿದಂತೆ 30ಕ್ಕೂ ಹೆಚ್ಚು ಪುಸ್ತಕಗಳು, ಗೊಂದಲಪುರದ ಗಿಂದಲರು, ದಾಂಪತ್ಯಗಾಥೆ ಕಾದಂಬರಿಗಳು, ಹಿಮಾಲಯ ಪ್ರವಾಸಿ ಕಥನ ರಚಿಸಿದ್ದರು.

ಕಾರಂತರ ನಿಧನದ ನಂತರ ಅವರು ವಾಸವಿದ್ದ ಸಾಲಿಗ್ರಾಮದ ಮನೆಯಲ್ಲಿ ಡಾ.ಶಿವರಾಮ ಕಾರಂತ ಪ್ರತಿಷ್ಠಾನವನ್ನು ಸ್ಥಾಪಿಸಿದ್ದರು.

ಬಂಜಾರ ಸಮುದಾಯದ ಮುಂದುವರಿದ ಪ್ರತಿಭಟನೆ • ಸರ್ಕಾರದ ವಿರುದ್ಧ ಘೋಷಣೆ

ಕುಂಚೇನಹಳ್ಳಿ ತಾಂಡಾ: ಮೂರು ತಾಸು ರಸ್ತೆ ತಡೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡುವ ರಾಜ್ಯ ಸರ್ಕಾರದ ನಿರ್ಧಾರ ಖಂಡಿಸಿ ಜಿಲ್ಲೆಯ ಶಿಕಾರಿಪುರದಲ್ಲಿ ಸೋಮವಾರ ಬಂಜಾರ ಸಮುದಾಯ ನಡೆಸಿದ ಪ್ರತಿಭಟನೆ ಜಿಲ್ಲೆಯ ಬೇರೆಡೆಗೂ ವ್ಯಾಪ್ತಿಸುತ್ತಿದೆ.

ಶಿವಮೊಗ್ಗ ತಾಲ್ಲೂಕಿನ ಕುಂಚೇನಹಳ್ಳಿ ತಾಂಡಾ ನಿವಾಸಿಗಳು ಮಂಗಳವಾರ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಪ್ರತಿಭಟನಕಾರರು ರಸ್ತೆಗೆ ಟೈರ್‌ಗಳನ್ನು ಅಡ್ಡ ಇಟ್ಟು ಬೆಂಕಿ ಹಚ್ಚಿದ್ದರಿಂದ ಸುಮಾರು ಮೂರು ಗಂಟೆಗಳ ಕಾಲ ಶಿವಮೊಗ್ಗ- ಸವಳಂಗ ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡಿತ್ತು.

ಮೇಲಿನ ಕುಂಚೇನಹಳ್ಳಿ ಹಾಗೂ ಕೆಳಗಿನ ಕುಂಚೇನಹಳ್ಳಿ ಗ್ರಾಮಗಳ ನಡುವೆ ಹೆದ್ದಾರಿ ಪಕ್ಕದಲ್ಲಿರುವ ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಇದರಿಂದಾಗಿ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಶಿವಮೊಗ್ಗದಿಂದ ಶಿಕಾರಿಪುರಕ್ಕೆ ಬಂದೋಬಸ್ತ್‌ಗೆ ಹೊರಟಿದ್ದ ಡಿಎಆರ್ ಸಿಬ್ಬಂದಿ ಇದ್ದ ವಾಹನ ಹಾಗೂ ಪೊಲೀಸ್ ಅಧಿಕಾರಿಗಳಿದ್ದ ವಾಹನಗಳು ಗಂಟೆಗಟ್ಟಲೇ ಕಾಯಬೇಕಾಯಿತು.

ರಸ್ತೆಯಲ್ಲಿ ಕುಳಿತು ಸರ್ಕಾರದ ವಿರುದ್ಧ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು. ಭೋವಿ, ಕೊರಚ, ಕೊರಮ ಹಾಗೂ ತಮಿಳು ಸಮುದಾಯದವರು ಬೆಂಬಲ ಸೂಚಿಸಿದ್ದರು.

ಬೃಹತ್ ಪ್ರತಿಭಟನೆ ನಾಳೆ: ಶಿವಮೊಗ್ಗದ ಬಂಜಾರ ಕನ್ವೆನ್‌ಷನ್ ಹಾಲ್‌ನಲ್ಲಿ ಮಂಗಳವಾರ ಸಂಜೆ ಸಮುದಾಯದ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಸಭೆ ನಡೆದಿದ್ದು, ಮಾರ್ಚ್ 30ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲು ನಿರ್ಧರಿಸಲಾಯಿತು.

ಚನ್ನಗಿರಿಯಲ್ಲೂ ನಾಳೆ ಪ್ರತಿಭಟನೆ: ಒಳಮೀಸಲಾತಿಯನ್ನು ವಿರೋಧಿಸಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ಪಟ್ಟಣದಲ್ಲಿ ಮಾರ್ಚ್ 30ರಂದು ಬೆಳಿಗ್ಗೆ 11ರಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲು ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಗಿದೆ.



ಶಿವಮೊಗ್ಗ ತಾಲ್ಲೂಕಿನ ಕುಂಚೇನಹಳ್ಳಿ ತಾಂಡಾ ನಿವಾಸಿಗಳು ಒಳಮೀಸಲಾತಿ ವಿರೋಧಿಸಿ ಶಿವಮೊಗ್ಗ–ಸವಳಂಗ ರಾಜ್ಯ ಹೆದ್ದಾರಿಯಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಮಂಗಳವಾರ ಪ್ರತಿಭಟಿಸಿದರು

ಕಾಂಗ್ರೆಸ್‌ನ ಮೂವರು ಮುಖಂಡರ ಬಂಧನ

ಶಿಕಾರಿಪುರದಲ್ಲಿ ಸೋಮವಾರ ಬಂಜಾರ ಸಮುದಾಯದ ಪ್ರತಿಭಟನೆ ವೇಳೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಮನೆಯ ಮೇಲೆ ಕಲ್ಲು ತೂರಾಟ, ಪೊಲೀಸರ ಮೇಲಿನ ಹಲ್ಲೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ನಾಲ್ಕು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು, ಮೂವರನ್ನು ಬಂಧಿಸಲಾಗಿದೆ ಎಂದು ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ತಿಳಿಸಿದ್ದಾರೆ.

ಶಿಕಾರಿಪುರ ತಾಲ್ಲೂಕು ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯ್ಕ, ಕಾಂಗ್ರೆಸ್ ಮುಖಂಡರಾದ ಜೋಗಿಹಳ್ಳಿಯ ನಿವಾಸಿ ಪುನೀತ್ ನಾಯ್ಕ, ಚುಂಚನಕೊಪ್ಪದ ಪ್ರೇಮಕುಮಾರ್ ನಾಯ್ಕ ಬಂಧಿತರು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾಂಗ್ರೆಸ್ ಕುತಂತ್ರದ ಸಾಕ್ಷಿ ಇದೆ: ಬಸವರಾಜ ಬೊಮ್ಮಾಯಿ

ಕಲಬುರಗಿ: 'ಬಿ.ಎಸ್.ಯಡಿಯೂರಪ್ಪ ಅವರ ಮನೆ ಮೇಲೆ ಕಲ್ಲು ತೂರಾಟ ನಡೆಸಲು ಬಂಜಾರ ಸಮುದಾಯಕ್ಕೆ ಕಾಂಗ್ರೆಸ್ ನಾಯಕರೇ ಪ್ರಚೋದಿಸಿದ್ದಾರೆ. ರಾತ್ರಿಯೇ ಕಾಂಗ್ರೆಸ್‌ನವರು ಸಭೆ ನಡೆಸಿ, ಬಂಜಾರರನ್ನು ದಾರಿ ತಪ್ಪಿಸಿದ್ದಾರೆ. ಇದೆಲ್ಲವನ್ನೂ ಸಾಕ್ಷಿ ಸಮೇತ ಹೇಳುತ್ತಿದ್ದೇನೆ. ಸುಳ್ಳು ಹೇಳುವುದನ್ನು ಡಿ.ಕೆ. ಶಿವಕುಮಾರ ಕೈಬಿಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

> **ಮೀಸಲಾತಿ ವರ್ಗೀಕರಣ ವಿಷಯದಲ್ಲಿ ಅನ್ಯಾಯ ವಾಗಿದ್ದರೆ, ಆಯಾ ಸಮುದಾಯದವರು ಸರ್ಕಾರಕ್ಕೆ ಅರ್ಜಿ ಸಲ್ಲಿಸ ಬಹುದು. ಶಾಂತಿಯುತ ಹೋರಾಟ ಮಾಡಿ, ನ್ಯಾಯ ಪಡೆಯಬೇಕು**
> **ಗೋವಿಂದ ಕಾರಜೋಳ**
> ಜಲಸಂಪನ್ಮೂಲ ಸಚಿವ

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪೊಲೀಸರು ಕ್ಯಾಮೆರಾದಲ್ಲಿ ಸೆರೆ ಹಿಡಿದಿರುವ ದೃಶ್ಯದಲ್ಲಿ ಕಾಂಗ್ರೆಸ್ ನಾಯಕರು ಇದ್ದಾರೆ. ಇದರ ಬಗ್ಗೆ ಡಿ.ಕೆ.ಶಿವಕುಮಾರ್ ಏನು ಹೇಳುತ್ತಾರೆ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್‌ನವರಿಂದ ಮಾಡಲು ಆಗದ್ದನ್ನು ನಾವು ಸಾಧಿಸಿ ತೋರಿಸಿದ್ದೇವೆ. ಒಂದೂವರೆ ವರ್ಷದ ಹಿಂದೆ ಜವಳಿ ಪಾರ್ಕ್ ವಿಷಯ ಪ್ರಸ್ತಾಪಿಸಿದ್ದೆವು. ಹೊಸ ಜವಳಿ ನೀತಿಯಡಿ ಪಾರ್ಕ್ ಬಂದಿದೆ ಹೊರತು ಅದರ ಹಿಂದೆ ರಾಜಕೀಯ ಲಾಭದ ಉದ್ದೇಶವಿಲ್ಲ' ಎಂದರು.

ಸುದ್ದಿ 2 ನಿಮಿಷ

ಅಡ್ಯಾರ್: ಐಸ್ ಕ್ರೀಮ್ ಘಟಕ ಬೆಂಕಿಗಾಹುತಿ

ಮಂಗಳೂರು: ನಗರದ ಹೊರವಲಯದ ಅಡ್ಯಾರ್ ಕಟ್ಟೆಯಲ್ಲಿ ಕಾರ್ಯಾಚರಿಸುತ್ತಿದ್ದ ಐಸ್‌ಕ್ರೀಮ್ ಘಟಕದಲ್ಲಿ ಮಂಗಳವಾರ ನಸುಕಿನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಅದರಲ್ಲಿ ದಾಸ್ತಾನಿದ್ದ ಐಸ್ ಕ್ರೀಮ್, ಶೀತಲೀಕರಣ ಘಟಕವನ್ನು ಹೊಂದಿದ್ದ ಒಂದು ವಾಹನ ಹಾಗೂ 3 ಶೈತ್ಯಾಗಾರಗಳು ಆಹುತಿಯಾಗಿವೆ.

'18 ವರ್ಷಗಳಿಂದ ಈ ಘಟಕವು ಕಾರ್ಯಾಚರಿಸುತ್ತಿದೆ. ಈ ಘಟಕವು 4 ಸಾವಿರ ಚದರ ಅಡಿ ವಿಸ್ತೀರ್ಣವನ್ನು ಹೊಂದಿದೆ. ಕೆಎಂಎಫ್ ನಂದಿನಿ ಬ್ರಾಂಡ್ ಐಸ್ ಕ್ರೀಮ್ ಅನ್ನು ಸಹ ಈ ಘಟಕದಲ್ಲಿ ದಾಸ್ತಾನು ಮಾಡಲಾಗುತ್ತಿತ್ತು. ರಾಜ್ಯದ ಕರಾವಳಿ ಜಿಲ್ಲೆಯ ಮಳಿಗೆಗಳಿಗೆ ಈ ಘಟಕದ ಮೂಲಕವೇ ಐಸ್‌ಕ್ರೀಂ ಅನ್ನು ತಲುಪಿಸಲಾಗುತ್ತಿತ್ತು. ಐಸ್ ಕ್ರೀಂ ತಿನ್ನುವ ಚಮಚಗಳನ್ನೂ ಈ ಘಟಕದಲ್ಲೇ ತಯಾರಿಸಲಾಗುತ್ತಿತ್ತು' ಎಂದು ಘಟಕದ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಸಾಧ್ಯತೆ ಇದೆ. ಅಗ್ನಿಶಾಮಕ ದಳದ ಮೂರು ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದವು. ಘಟಕದಲ್ಲಿದ್ದ ಬಹುತೇಕ ವಸ್ತುಗಳು ಅಷ್ಟರಲ್ಲಿ ಸುಟ್ಟು ಕರಕಲಾಗಿದ್ದವು' ಎಂದು ತಿಳಿಸಿದರು.

'ಈ ಬೆಂಕಿ ಅವಘಡದಿಂದ ₹1 ಕೋಟಿಗೂ ಅಧಿಕ ಮೌಲ್ಯದ ಐಸ್‌ಕ್ರಿಮ್ ಸೇರಿದಂತೆ ಸುಮಾರು ₹ 4 ಕೋಟಿ ಮೌಲ್ಯದ ಸ್ವತ್ತುಗಳು ನಷ್ಟವಾಗಿರಬಹುದು ಎಂದು ಅಂದಾಜಿಸಿದ್ದೇವೆ' ಎಂದು ಘಟಕದ ಸಿಬ್ಬಂದಿ ಮಾಹಿತಿ ನೀಡಿದರು.

'ಈ ಅವಘಡ ಬಗ್ಗೆ ಐಸ್ ಕ್ರೀಂ ಘಟಕದ ಮಾಲೀಕರು ಮಾಹಿತಿ ನೀಡಿದ್ದಾರೆ. ಆದರೆ, ಈ ಬಗ್ಗೆ ಇನ್ನೂ ದೂರು ನೀಡಿಲ್ಲ' ಎಂದು ಮಂಗಳೂರು ಗ್ರಾಮಾಂತರ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪುತ್ತೂರು: ಎಸ್‌ಡಿಪಿಐ ಪ್ರತಿಭಟನೆ



ಪುತ್ತೂರು (ದಕ್ಷಿಣ ಕನ್ನಡ): ಮುಸ್ಲಿಂ ಸಮುದಾಯದ ಮೀಸಲಾತಿ ರದ್ದು ಮಾಡಿದ ರಾಜ್ಯ ಸರ್ಕಾರದ ನಿರ್ಣಯ ವಿರೋಧಿಸಿ ಎಸ್‌ಡಿಪಿಐ ಪುತ್ತೂರು ವಿಧಾನಸಭಾ ಕ್ಷೇತ್ರ ಸಮಿತಿಯವರು ಮಂಗಳವಾರ ನಗರದ ಕಿಲ್ಲೆ ಮೈದಾನದ ಅಮರ್ ಜವಾನ್ ಜ್ಯೋತಿ ಸ್ಮಾರಕ ಬಳಿ ಪ್ರತಿಭಟನೆ ನಡೆಸಿದರು.

ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅಬ್ದುಲ್ ಮಜೀದ್ ಖಾನ್, ಎಸ್‌ಡಿಪಿಐ ಪುತ್ತೂರು ವಿಧಾನಸಭಾ ಕ್ಷೇತ್ರ ಸಮಿತಿಯ ಅಧ್ಯಕ್ಷ ಇಬ್ರಾಹಿಂ ಸಾಗರ್ ಮಾತನಾಡಿ, 'ಬಿಜೆಪಿ ಸರ್ಕಾರ ಮುಸಲ್ಮಾನರ ಮೇಲೆ ನಿರಂತರ ದಬ್ಬಾಳಿಕೆ ಮಾಡಿಕೊಂಡು ಬಂದಿದೆ. ಮುಸಲ್ಮಾನರಿಗೆ ಶೈಕ್ಷಣಿಕ, ಉದ್ಯೋಗದಲ್ಲಿಯ ಸೌಲಭ್ಯವನ್ನು ಕಿತ್ತುಕೊಳ್ಳುವ ಮೂಲಕ ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ದಾಳಿ ಮಾಡಿದೆ. ಮೀಸಲಾತಿ ಕೊಡದಿದ್ದರೆ ವಿಧಾನಸಭಾ ಚಲೋ ಚಳವಳಿ ಮಾಡುತ್ತೇವೆ' ಎಂದರು. ಎಸ್‌ಡಿಪಿಐ ಪದಾಧಿಕಾರಿಗಳಾದ ಅಬ್ದುಲ್ ಹಮೀದ್ ಸಾಲ್ಮರ, ರಹೀಮ್, ಮುಖಂಡರಾದ ಅಶ್ರಫ್ ಬಾವು, ಕಬಕ ಗ್ರಾಮ ಪಂಚಾಯಿತಿ ಸದಸ್ಯ ಫಾರೂಕ್ ಕಬಕ, ಉಪ್ಪಿನಂಗಡಿ ಗ್ರಾಮ ಪಂಚಾಯಿತಿ ಸದಸ್ಯ ರಶೀದ್ ಪುಣ್ಚಪ್ಪಾಡಿ, ವಿಶ್ವನಾಥ್ ಪುಣ್ಚತ್ತಾರ್, ಪಿಬಿಕೆ ಮಹಮ್ಮದ್ ಇದ್ದರು.

ಕಲ್ಯಾಣ ಕರ್ನಾಟಕದಲ್ಲಿ ಎಸ್‌ಡಿಪಿಐ, ಜೆಡಿಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮುಸ್ಲಿಂ ಮೀಸಲಾತಿ ರದ್ದುಪಡಿಸುವ ಕ್ರಮವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಮತ್ತು ಜೆಡಿಎಸ್ ನೇತೃತ್ವದಲ್ಲಿ ಕಲಬುರಗಿ, ಯಾದಗಿರಿ, ಬೀದರ್ ಮತ್ತು ರಾಯಚೂರು ಜಿಲ್ಲೆಯಲ್ಲಿ ಪ್ರತಿಭಟನೆ ನಡೆಯಿತು.

ಬೀದರ್ ನಗರದಲ್ಲಿ ಜೆಡಿಎಸ್ ಶಾಸಕ ಬಂಡೆಪ್ಪ ಕಾಶೆಂಪುರ ನೇತೃತ್ವದಲ್ಲಿ ಮತ್ತು ಕಲಬುರಗಿ ಜಿಲ್ಲೆಯ ಚಿಂಚೋಳಿಯಲ್ಲಿ ಜೆಡಿಎಸ್ ಮುಖಂಡರ ಸಮ್ಮುಖದಲ್ಲಿ ಪ್ರತಿಭಟನೆ ನಡೆಯಿತು. ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಮತ್ತು ರಾಯಚೂರು ಜಿಲ್ಲೆಯ ಮುದಗಲ್‌ನಲ್ಲಿ ಎಸ್‌ಡಿಪಿಐ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

'ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ಸರ್ಕಾರವು ಮೀಸಲಾತಿ ರದ್ದುಪಡಿಸಿದ್ದು ಸರಿಯಲ್ಲ. ಇದು ಅಸಂವಿಧಾನಿಕ. ಮುಸ್ಲಿಂ ಸಮುದಾಯದವರು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗವೆಂದು ಗುರುತಿಸಿ ಮೀಸಲಾತಿ ನೀಡಲಾಗಿದೆ. ಸರ್ಕಾರವು ಮೀಸಲಾತಿ ರದ್ದುಪಡಿಸಿದ್ದು ಸರಿಯಲ್ಲ' ಎಂದು ಪ್ರತಿಭಟನಾಕಾರರು ಹೇಳಿದರು.

ಕಾನೂನು ಕೈಗೆತ್ತಿಕೊಳ್ಳುವುದು ಸಲ್ಲ: ಆರಗ ಜ್ಞಾನೇಂದ್ರ

ಶಿವಮೊಗ್ಗ: 'ಒಳಮೀಸಲಾತಿ ವಿಚಾರದಲ್ಲಿ ಯಾರಿಗೇ ಅನ್ಯಾಯವಾಗಿದ್ದರೂ ಅದನ್ನು ಸರಿಪಡಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಕ್ತ ಮನಸ್ಸು ಹೊಂದಿದ್ದಾರೆ. ಹೀಗಾಗಿ ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು. ಇದು ಇಲ್ಲಿಗೇ ನಿಲ್ಲಬೇಕು' ಎಂದು ಗೃಹಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

'ವೈಜ್ಞಾನಿಕವಾಗಿ ಒಳಮೀಸಲಾತಿ ಮೂಲಕ ಎಲ್ಲರಿಗೂ ನ್ಯಾಯ ಒದಗಿಸುವ ವಿಶೇಷ ಪ್ರಯತ್ನವನ್ನು ಸರ್ಕಾರ ಮಾಡಿದೆ. ವದಂತಿಗಳಿಂದ ಯಾರೂ ಪ್ರಚೋದಿತರಾಗಬಾರದು. ಇದು ಎಲ್ಲರಿಗೂ ಲಾಭವಾಗುವಂತಹ ಯೋಜನೆ. ಇದನ್ನು ಎಲ್ಲ ಸಮುದಾಯಗಳೂ ಅರ್ಥ ಮಾಡಿಕೊಳ್ಳಬೇಕು' ಎಂದು ಶಿಕಾರಿಪುರದಲ್ಲಿ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. 'ಗಲಾಟೆಯಲ್ಲಿ ಪೊಲೀಸರಿಗೆ ಗಾಯವಾಗಿದೆ. ಪೊಲೀಸರಿಗೆ ಹೊಡೆದರೆ ಬಿಡಲು ಆಗುತ್ತದೆಯೇ? ಹೀಗಾಗಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ' ಎಂದರು.

ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅಮಾಯಕ ಜನರನ್ನು ಪ್ರಚೋದಿಸುತ್ತಿದ್ದಾರೆ ಎಂಬ ಮಾಹಿತಿ ಇದೆ. ಇದರ ಹಿಂದೆ ಯಾರ್‍ಯಾರು ಇದ್ದಾರೆ ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಉಡುಗೊರೆ ಸೀರೆ ಸುಟ್ಟು ಆಕ್ರೋಶ

ಚನ್ನಪಟ್ಟಣ: ಮುಸ್ಲಿಂ ಸಮುದಾಯಕ್ಕೆ ಇದ್ದ ಶೇ 4ರ ಮೀಸಲಾತಿಯನ್ನು ಬಿಜೆಪಿ ಸರ್ಕಾರ ರದ್ದುಗೊಳಿಸಿದ್ದನ್ನು ಖಂಡಿಸಿ ಇಲ್ಲಿನ 17ನೇ ವಾರ್ಡಿನ ಮುಸ್ಲಿಂ ನಿವಾಸಿಗಳು ಮಂಗಳವಾರ 30ಕ್ಕೂ ಹೆಚ್ಚು ಸೀರೆಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯುಗಾದಿ ಹಾಗೂ ರಂಜಾನ್ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಬೆಂಬಲಿಗರು ಮುಸ್ಲಿಮರಿಗೆ ಈ ಸೀರೆಗಳನ್ನು ಹಂಚಿದ್ದರು ಎಂದು ಹೇಳಲಾಗಿದೆ.

ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುವ ಸಲುವಾಗಿ ಹೀಗೆ ಸೀರೆಗಳನ್ನು ಸುಡಲಾಗಿದೆ. ಇನ್ನೂ ಕೆಲವು ಮುಸ್ಲಿಮರು ಸೀರೆ ರೂಪದ ಉಡುಗೊರೆಗಳನ್ನು ಪಡೆಯಲು ನಿರಾಕರಿಸಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಎಸ್‌ಡಿಪಿಐನವರು ನನ್ನನ್ನು ಹೊಗಳಲು ಸಾಧ್ಯವೇ?: ಸಿ.ಎಂ

ಬೆಳಗಾವಿ: 'ಎಸ್‌ಡಿಪಿಐ ದೇಶದ್ರೋಹಿ ಸಂಘಟನೆ. ದೇಶದ ವಿರುದ್ಧ ಕೆಲಸ ಮಾಡುವ ಅವರು, ಭಾರತದ ಅಲ್ಪಸಂಖ್ಯಾತರ ವಿರೋಧಿಗಳು. ಅವರು ನನ್ನನ್ನು ಹೊಗಳಲು ಸಾಧ್ಯವೇ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

'2ಬಿ' ಅಡಿ ಮುಸ್ಲಿಂ ಸಮುದಾಯಕ್ಕಿದ್ದ ಮೀಸಲಾತಿ ರದ್ದುಪಡಿಸಿದ ವಿಚಾರವಾಗಿ ಎಸ್‌ಡಿಪಿಐನವರು ತಮ್ಮ ವಿರುದ್ಧ ನೀಡಿದ ಅವಹೇಳನಕಾರಿ ಹೇಳಿಕೆಗೆ, ಇಲ್ಲಿ ಮಂಗಳವಾರ ಸುದ್ದಿಗಾರರಿಗೆ ಹೀಗೆ ಪ್ರತಿಕ್ರಿಯಿಸಿದರು.

'ಎಂದಿಗೂ ನಮ್ಮ ಚಿಂತನೆ ಮತ್ತು ವಿಚಾರಗಳಿಗೆ ವಿರುದ್ಧವಾಗಿರುವ ಎಸ್‌ಡಿಪಿಐನವರಿಗೆ ನಾನು ಸೊಪ್ಪು ಹಾಕುವುದಿಲ್ಲ. ಅವರ ಹೊಗಳಿಕೆಯನ್ನೂ ಬಯಸುವುದಿಲ್ಲ. ಹೇಳಿಕೆಗಳನ್ನು ಗಮನಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಮೀಸಲು ರದ್ದು: ಬೀದಿಗಿಳಿದ ಮುಸ್ಲಿಮರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುಸ್ಲಿಂ ಸಮುದಾಯಕ್ಕಿದ್ದ ಶೇ 4ರಷ್ಟು ಮೀಸಲಾತಿ ಸೌಲಭ್ಯವನ್ನು ರದ್ದುಪಡಿಸಿದ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಪಕ್ಷದ ಕಾರ್ಯಕರ್ತರು ಮಂಗಳವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಒನಕೆ ಓಬವ್ವ ವೃತ್ತದತ್ತ ಮೆರವಣಿಗೆ ಮೂಲಕ ತೆರಳಲು ಹಾಗೂ ಬಹಿರಂಗ ಸಭೆ ನಡೆಸುವ ವಿಚಾರದಲ್ಲಿ ಪ್ರತಿಭಟನಕಾರರು ಪೊಲೀಸರ ನಡುವೆ ವಾಗ್ವಾದ ನಡೆಯಿತು.

ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಇತರ ಹಿಂದುಳಿದ ವರ್ಗ (ಒಬಿಸಿ) ಪ್ರವರ್ಗ '2ಬಿ' ಅಡಿಯಲ್ಲಿ ಮೀಸಲಾತಿ ಸೌಲಭ್ಯ ಕಲ್ಪಿಸಲಾಗಿತ್ತು. ವಿವಿಧ ಆಯೋಗಗಳು ಮೀಸಲಾತಿಗೆ ಪೂರಕ ವರದಿ ನೀಡಿದ್ದವು. ಆದರೂ ಮುಸ್ಲಿಮರ ಏಳ್ಗೆ ಸಹಿಸದ ಬಿಜೆಪಿ ಈ ಸೌಲಭ್ಯ ರದ್ದುಪಡಿಸಿದೆ ಎಂದು ಆರೋಪಿಸಿದರು.

ಈವರೆಗೆ ನೀಡಲಾಗಿದ್ದ ಮೀಸಲು ಸೌಲಭ್ಯವನ್ನು ಮುಂದುವರಿಸುವಂತೆ ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಆಗ್ರಹಿಸಿದರು. ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಬಾಳೆಕಾಯಿ ಶ್ರೀನಿವಾಸ್, ವಕೀಲ ಬಿ.ಕೆ. ರಹಮತ್‌ವುಲ್ಲಾ, ಎಸ್‌ಡಿಪಿಐ ಮುಖಂಡ ಜಾಕಿರ್ ಹುಸೇನ್ ಇದ್ದರು.



ಮುಸ್ಲಿಮರ ಮೀಸಲಾತಿ ಸೌಲಭ್ಯ ರದ್ದುಪಡಿಸಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ ಚಿತ್ರದುರ್ಗದಲ್ಲಿ ಮಂಗಳವಾರ ಎಸ್‌ಡಿಪಿಐ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಸುಧಾ ಓದಿರಿ

ಮುಸ್ಲಿಮರಿಂದ ರಾಜ್ಯಪಾಲರಿಗೆ ಮನವಿ

ಹೊಸಪೇಟೆ (ವಿಜಯನಗರ): ಪ್ರವರ್ಗ 2ಬಿ ಅಡಿ ಮುಸ್ಲಿಂ ಸಮುದಾಯವರಿಗೆ ನೀಡಲಾಗುತ್ತಿದ್ದ ಮೀಸಲಾತಿ ರದ್ದುಗೊಳಿಸಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಅಂಜುಮನ್–ಖಿದ್ಮತೆ–ಇ–ಇಸ್ಲಾಂ ಸಂಘಟನೆಯ ನೇತೃತ್ವದಲ್ಲಿ ಮುಸ್ಲಿಮರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸಂಘಟನೆಯ ಕಚೇರಿ ಬಳಿ ಸೇರಿದ ನೂರಾರು ಜನ ನಗರದ ಪ್ರಮುಖ ಮಾರ್ಗಗಳಿಂದ ತಹಶೀಲ್ದಾರ್ ಕಚೇರಿ ವರೆಗೆ ರ್‍ಯಾಲಿ ನಡೆಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಹೆಸರಿಗೆ ಬರೆದ ಮನವಿ ಪತ್ರ ಸಲ್ಲಿಸಿ, ಮೀಸಲಾತಿ ರದ್ದುಗೊಳಿಸಿರುವ ಆದೇಶ ಹಿಂಪಡೆದು, ಅದನ್ನು ಮರುಸ್ಥಾಪಿಸಬೇಕೆಂದು ಆಗ್ರಹಿಸಿದರು.

ಅಂಜುಮನ್ ಸಂಘಟನೆಯ ಅಧ್ಯಕ್ಷ ಮಹಮ್ಮದ್ ಇಮಾಮ್ ನಿಯಾಜಿ ಮಾತನಾಡಿದರು.

ಬಳ್ಳಾರಿ ವರದಿ: ಮುಸ್ಲಿಂ ಮೀಸಲಾತಿ ರದ್ದುಗೊಳಿಸಿರುವುದನ್ನು ಖಂಡಿಸಿ ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಎಸ್ ಡಿಪಿಐ ಕಾರ್ಯಕರ್ತರು ಬಿಜೆಪಿ ಸರ್ಕಾರ ಹಾಗೂ ಮುಖ್ಯಮಂತ್ರಿ ಬೊಮ್ಮಾಯಿ ವಿರುದ್ಧ ಘೋಷಣೆ ಕೂಗಿದರು. ಬಳಿಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಬೆಳಗಾವಿ ವರದಿ: ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದವರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. ಇಲ್ಲಿನ ರಾಣಿ ಚನ್ನಮ್ಮನ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, 'ನಮಗೆ ಈ ಹಿಂದಿನಂತೆಯೇ ಮೀಸಲಾತಿ ನೀಡಬೇಕು' ಎಂದು ಆಗ್ರಹಿಸಿ ಜಿಲ್ಲಾಡಳಿತ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸರ್ಕಾರ ತನ್ನ ನಿರ್ಧಾರ ಹಿಂದಕ್ಕೆ ಪಡೆಯುವವರೆಗೆ ಹೋರಾಟ ಮುಂದುವರಿಸುವುದಾಗಿ ಎಚ್ಚರಿಕೆ ಕೊಟ್ಟರು.

'ಬಂಜಾರ ಸಮಾಜಕ್ಕೆ ಅನ್ಯಾಯವಾಗಿಲ್ಲ'



ಹನುಮಂತಪ್ಪ

ಬಳ್ಳಾರಿ: 'ಒಳ ಮೀಸಲಾತಿ ಕುರಿತು ಸರ್ಕಾರ ಕೈಗೊಂಡಿರುವ ನಿರ್ಧಾರದಿಂದ ಬಂಜಾರ ಸಮಾಜಕ್ಕೆ ಅನ್ಯಾಯವಾಗಿಲ್ಲ' ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಎಚ್. ಹನುಮಂತಪ್ಪ ಹೇಳಿದರು.

'ಒಳ ಮೀಸಲಾತಿ ಕುರಿತು ಸರ್ಕಾರ ತಗೆದುಕೊಂಡಿರುವ ನಿರ್ಧಾರ ಸ್ವಾಗತಾರ್ಹವಾಗಿದ್ದು, ಇಲ್ಲಿ ಯಾವುದೇ ಸಮುದಾಯಕ್ಕೆ ಅನ್ಯಾಯವಾಗಿಲ್ಲ. ಬಂಜಾರ ಸಮುದಾಯಕ್ಕೆ ಶೇ 4.5ರಷ್ಟು ಮೀಸಲಾತಿ ನೀಡಿದೆ' ಎಂದು ಹನುಮಂತಪ್ಪ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಪ್ರತಿಪಾದಿಸಿದರು.

'ಒಳ ಮೀಸಲಾತಿಗಾಗಿ ಮೂವತ್ತು ವರ್ಷಗಳಿಂದ ನಡೆಸಿದ ಹೋರಾಟಕ್ಕೆ ಬಿಜೆಪಿ ಸರ್ಕಾರದಿಂದ ನ್ಯಾಯ ಸಿಕ್ಕಿದೆ. ಬಂಜಾರ ಸಮಾಜ ತಪ್ಪುಗ್ರಹಿಕೆಯಿಂದ ಅನ್ಯಾಯವಾಗಿದೆ ಎಂದು ಪ್ರತಿಭಟಿಸುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ರಾಜ್ಯ ಸರ್ಕಾರ ಎಲ್ಲರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಒಳ ಮೀಸಲಾತಿ ನೀಡುವ ನಿರ್ಧಾರ ಕೈಗೊಂಡಿದೆ' ಎಂದರು. ಸೋಮಶೇಖರ್, ರಾಜೇಶ್, ಹುಲುಗಪ್ಪ, ರಾಮಣ್ಣ ಪತ್ರಿಕಾ ಗೋಷ್ಠಿಯಲ್ಲಿ ಇದ್ದರು.

ಒಳ ಮೀಸಲಾತಿ ವಿರೋಧಿಸಿ ಲಂಬಾಣಿ ಯುವಕ ಏಕಾಂಗಿ ಧರಣಿ

ಹೂವಿನಹಡಗಲಿ (ವಿಜಯನಗರ): ಒಳ ಮೀಸಲಾತಿ ವರದಿ ಜಾರಿಗೊಳಿಸುವ ಸರ್ಕಾರದ ತೀರ್ಮಾನ ವಿರೋಧಿಸಿ ಲಂಬಾಣಿ ಯುವಕನೊಬ್ಬ ಪಟ್ಟಣದಲ್ಲಿ ಮಂಗಳವಾರ ಏಕಾಂಗಿಯಾಗಿ ಧರಣಿ ಆರಂಭಿಸಿದ್ದಾನೆ.

ತಾಲ್ಲೂಕಿನ ದಾಸರಹಳ್ಳಿ ತಾಂಡಾದ ಯುವಕ ಸೇವಾನಾಯ್ಕ ಎಂಬುವವರು ಲಾಲ್ ಬಹಾದ್ದೂರ್ ಶಾಸ್ತ್ರಿ ವೃತ್ತದಲ್ಲಿ ಸೇವಾಲಾಲ್ ಫೋಟೊ ಇರಿಸಿ ಧರಣಿ ಪ್ರಾರಂಭಿಸಿದ್ದಾರೆ. ಸುಡು ಬಿಸಿಲು ಲೆಕ್ಕಿಸದೇ ಇಡೀ ದಿನ ಧರಣಿ ನಡೆಸಿ, ಒಳ ಮೀಸಲಾತಿ ವರ್ಗೀಕರಣ ಶಿಫಾರಸು ಹಿಂಪಡೆಯುವವರೆಗೂ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು.

'ಸರ್ಕಾರ ಕೂಡಲೇ ಮೀಸಲಾತಿ ವರ್ಗೀಕರಣ ಶಿಫಾರಸು ಹಿಂಪಡೆಯಬೇಕು. ಇಲ್ಲದಿದ್ದಲ್ಲಿ ತಾಂಡಾಗಳಲ್ಲಿ ಜಾಗೃತಿ ಮೂಡಿಸಿ ಮತದಾನ ಬಹಿಷ್ಕರಿಸಲು ತಿಳಿಸುತ್ತೇವೆ' ಎಂದು ಹೇಳಿದರು.

'ಸರ್ಕಾರದ ತೀರ್ಮಾನ ವಿರೋಧಿಸಿ ಏಕಾಂಗಿಯಾಗಿ ಪ್ರತಿಭಟನೆ ಆರಂಭಿಸಿದ್ದೇನೆ. ನಾಳೆಯಿಂದ ಸಮುದಾಯದ ಇನ್ನಷ್ಟು ಜನರು ನನ್ನೊಂದಿಗೆ ಸೇರಲಿದ್ದಾರೆ. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇವೆ' ಎಂದರು.




ಒಳ ಮೀಸಲಾತಿ ಜಾರಿ ವಿರೋಧಿಸಿ ಹೂವಿನಹಡಗಲಿಯಲ್ಲಿ ಲಂಬಾಣಿ ಯುವಕ ಸೇವಾನಾಯ್ಕ ಏಕಾಂಗಿ ಧರಣಿ ನಡೆಸಿದರು

ಏಳು ಮೊಬೈಲ್, 20 ಸಿಮ್ ಕಾರ್ಡ್ ಬಳಸಿದ್ದ ನವೀನ್ ಪ್ರಸಾದ್!

ನೇಮಕಾತಿ ಅಕ್ರಮ: ಬಂಧಿತ ಪಿಎಸ್‌ಐಗೆ ಕಾರೇ ಮನೆ

ಪ್ರಜಾವಾಣಿ ವಾರ್ತೆ



ನವೀನ್ ಪ್ರಸಾದ್

ಬೆಂಗಳೂರು: ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿತ ಪಿಎಸ್‌ಐ ನವೀನ್ ಪ್ರಸಾದ್ ಎಂಬಾತನನ್ನು ಮಂಗಳವಾರ ಸಿಐಡಿ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ನ್ಯಾಯಾಲಯವು ಏಪ್ರಿಲ್ 6ರ ತನಕ ಸಿಐಡಿ ವಶಕ್ಕೆ ನೀಡಿದೆ.

ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ನವೀನ್‌ನನ್ನು ಬಂಧಿಸಲಾಗಿದೆ. ನೇಮಕಾತಿ ಅಕ್ರಮ ಪ್ರಕರಣದಲ್ಲಿ ಈತ 43ನೇ ಆರೋಪಿಯಾಗಿದ್ದು, ಬಂಧಿತರ ಸಂಖ್ಯೆ 110ಕ್ಕೆ ಏರಿಕೆ ಆದಂತಾಗಿದೆ.

ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿದ್ದ ನವೀನ್ ಅಕ್ರಮ ಪ್ರಕರಣದಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದ. ಸಿಐಡಿ ತಂಡಕ್ಕೆ ನವೀನ್ ಪಾತ್ರದ ಸುಳಿವು ಲಭಿಸಿದ ಬಳಿಕ ದಿಢೀರ್ ನಾಪತ್ತೆಯಾಗಿದ್ದ. ಆರಂಭದಲ್ಲಿ 10 ವರ್ಷ ಕಾನ್‌ಸ್ಟೆಬಲ್ ಆಗಿದ್ದ ನವೀನ್, ಪಿಎಸ್‌ಐ ಪರೀಕ್ಷೆ ಬರೆದು ತೇರ್ಗಡೆಯಾಗಿದ್ದ ಎಂದು ಮೂಲಗಳು ಹೇಳಿವೆ.

ಸಿಮ್ ಬದಲಾವಣೆ: ಪದೇ ಪದೇ ಸಿಮ್ ಬದಲಾವಣೆ ಮಾಡುತ್ತಿದ್ದ ಆರೋಪಿಯು ಏಳು ಮೊಬೈಲ್ ಬಳಸುತ್ತಿದ್ದ. 20ಕ್ಕೂ ಹೆಚ್ಚು ನಂಬರ್ ಬದಲಾಯಿಸಿದ್ದ. ಬಂಧನದ ಭೀತಿಯಿಂದ ತೆಲಂಗಾಣದ ನೋಂದಣಿಯ (ಟಿಎಸ್ 09 ಎಫ್‌ಎಚ್ 3777) ಕಾರನ್ನೇ ಮನೆ ಮಾಡಿಕೊಂಡಿದ್ದ. ಕಾರಿನಲ್ಲಿ ಬಟ್ಟೆ ಬದಲಾಯಿಸುತ್ತಿದ್ದ. ಹಲವು ರಾತ್ರಿಗಳನ್ನು ಕಾರಿನಲ್ಲೇ ಕಳೆದಿದ್ದ.

ಸೋಮವಾರ ರಾತ್ರಿ ನಂದಿನಿ ಲೇಔಟ್‌ನ ರಿಂಗ್ ರಸ್ತೆಯಲ್ಲಿ ಕಾರಿನಲ್ಲಿ ಸುತ್ತಾಟ ನಡೆಸುತ್ತಿದ್ದ ಮಾಹಿತಿ ತಿಳಿದಿದ್ದ ಸಿಐಡಿ ಡಿವೈಎಸ್ಪಿ ಅಂಜುಮಾಲಾ ಟಿ.ನಾಯಕ್, ಪತ್ತೆದಳದ ವಿಭಾಗದ ಸಬ್ ಇನ್‌ಸ್ಪೆಕ್ಟರ್‌ಗಳಾದ ಅಭಿಜಿತ್ ಆದಿತ್ಯ ಹಾಗೂ ಶ್ರೀಕಾಂತ್ ನೇತೃತ್ವದ ತಂಡವು ಆರೋಪಿಯನ್ನು ಕಂಠೀರವ ಸ್ಟುಡಿಯೊ ಬಳಿ ಬಂಧಿಸಿದೆ.

ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದಕ್ಕೆ ರಾತ್ರಿ ವೇಳೆ ಬಂದುಹೋಗುತ್ತಿದ್ದ ಆರೋಪಿ, ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ತನ್ನ ಗುರುತು ಪತ್ತೆಯಾಗದಂತೆ ಸದಾ ಕ್ಯಾಪ್ ಧರಿಸುತ್ತಿದ್ದ. ಸಬ್ ಇನ್‌ಸ್ಪೆಕ್ಟರ್‌ಗಳಾದ ಅಭಿಜಿತ್ ಆದಿತ್ಯ ನೇತೃತ್ವದ ತಂಡವು ಫೆ. 3ರಂದು ಮಂತ್ರಾಲಯದಲ್ಲಿ ಈತ ಇರುವುದನ್ನು ಪತ್ತೆ ಮಾಡಿತ್ತು. ಅದಾದ ಮರುದಿನ ಬೆಂಗಳೂರು ಹೊಸಗೊಲ್ಲರಪಾಳ್ಯದ ಬಳಿ ಇರುವುದನ್ನು ಪತ್ತೆ ಮಾಡಿದ್ದ ತನಿಖಾ ತಂಡ, ಅಲ್ಲಿಗೆ ತೆರಳಿದಾಗ ಪರಾರಿಯಾಗಿದ್ದ ಎಂದು ಮೂಲಗಳು ಹೇಳಿವೆ.

'ಮಾಗಡಿ ಮೂಲದ ನವೀನ್, ಮುಂಬೈನಲ್ಲಿ ಬಂಧಿತ ಇನ್‌ಸ್ಪೆಕ್ಟರ್ ಷರೀಫ್ ಕಳ್ಳಿಮನಿ ಹಾಗೂ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಹರೀಶ್ ಜತೆಗೆ ಸಂಪರ್ಕದಲ್ಲಿದ್ದ. ಮೂವರೂ ಸೇರಿಕೊಂಡು ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದರು. ಕೆಲಸದ ಆಮಿಷವೊಡ್ಡಿ ಅಭ್ಯರ್ಥಿ ರಘುವೀರ್‌ನಿಂದ ₹ 85 ಲಕ್ಷ ಹಾಗೂ ದಿಲೀಪ್‌ನಿಂದ ₹ 45 ಲಕ್ಷ ಪಡೆದುಕೊಂಡಿದ್ದರು. ಷರೀಫ್ ಕಳ್ಳಿಮನಿ ಹಾಗೂ ನವೀನ್ ತಲಾ ₹ 65 ಲಕ್ಷ ಹಂಚಿಕೊಂಡಿದ್ದರು' ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಗೆಳತಿಯೊಂದಿಗೆ ಸುತ್ತಾಟ: 'ಪ್ರಕರಣದಲ್ಲಿ ನವೀನ್ ಹೆಸರು ಕೇಳಿಬಂದಂತೆ ಸೇವೆಯಿಂದ ಅಮಾನತು ಮಾಡಲಾಗಿತ್ತು. ಬಳಿಕ ಪತ್ನಿಯನ್ನು ತವರಿಗೆ ಕಳುಹಿಸಿ ತಲೆಮರೆಸಿಕೊಂಡಿದ್ದ ನವೀನ್, ಗೆಳತಿಯ ಜತೆಗೆ ಕಾರಿನಲ್ಲಿ ಸುತ್ತಾಟ ನಡೆಸುತ್ತಿದ್ದ. ಮೊಬೈಲ್ ನಂಬರ್ ಸಂಖ್ಯೆಯ ಲೊಕೇಶನ್ ಆಧರಿಸಿ ಹಾಸನ ಜಿಲ್ಲೆಯ ಬೇಲೂರಿಗೆ ತೆರಳಿದ್ದ ತಂಡಕ್ಕೆ ನವೀನ್ ಗೆಳತಿ ಅರಸೀಕೆರೆಯ ಅಶ್ವಿನಿ ಮಾತ್ರ ಸಿಕ್ಕಿದ್ದರು. ನವೀನ್ ಬಗ್ಗೆ ವಿಚಾರಿಸಿದರೂ ಆಕೆ ಸುಳಿವು ಬಿಟ್ಟು ಕೊಟ್ಟಿರಲಿಲ್ಲ. ಅಶ್ವಿನಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಉಕ್ರೇನ್‌ನಿಂದ ಹಿಂದಿರುಗಿರುವ ವಿದ್ಯಾರ್ಥಿಗಳ ಅರ್ಜಿ ವಿಚಾರಣೆ

‘2 ಯತ್ನಗಳಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಲು ಅವಕಾಶ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಒಂದು ಪ್ರಯತ್ನದಲ್ಲಿ ಪರೀಕ್ಷೆ ಪೂರ್ಣಗೊಳಿಸಲು ಅವಕಾಶ ನೀಡಿದ್ದ ಸಮಿತಿ
- ಕೇಂದ್ರದ ನಿಲುವಿಗೆ ವಿದ್ಯಾರ್ಥಿಗಳ ಪರ ವಕೀಲರ ವಿರೋಧ
- ದ್ವಿಸದಸ್ಯ ನ್ಯಾಯಪೀಠದಿಂದ ಅರ್ಜಿಯ ವಿಚಾರಣೆ

ನವದೆಹಲಿ: ‘ಯುದ್ಧ ಹಾಗೂ ಕೋವಿಡ್ ಕಾರಣದಿಂದಾಗಿ ಉಕ್ರೇನ್, ಚೀನಾ ಮತ್ತು ಫಿಲಿಪ್ಪೀನ್ಸ್‌ನಿಂದ ವಾಪಸಾಗಿರುವ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಇಲ್ಲಿನ ವೈದ್ಯಕೀಯ ಕಾಲೇಜುಗಳಲ್ಲಿ ಎರಡು ಪ್ರಯತ್ನಗಳಲ್ಲಿ ಪರೀಕ್ಷೆ ಪೂರ್ಣಗೊಳಿಸಲು ಅವಕಾಶ ನೀಡಿ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಈ ಸಂಬಂಧ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದು, ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ವಿಕ್ರಂನಾಥ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಇವುಗಳ ವಿಚಾರಣೆ ನಡೆಸಿತು.

‘ಈ ವಿಚಾರವಾಗಿ ಸೂಕ್ತ ತೀರ್ಮಾನ ಕೈಗೊಳ್ಳಲು ಆರೋಗ್ಯ ಸೇವೆಗಳ ಮಹಾನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಇದರಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಕೆಲವರು ಇದ್ದರು. ವಿದೇಶಗಳಿಂದ ಹಿಂದಿರುಗಿರುವ ಎಂಬಿಬಿಎಸ್ ವಿದ್ಯಾರ್ಥಿಗಳು ಹಾಗೂ ಆನ್‌ಲೈನ್ ಮೂಲಕ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಂತಿಮ ವರ್ಷದ ಪರೀಕ್ಷೆ ಪೂರ್ಣಗೊಳಿಸಲು ಒಂದು ಅವಕಾಶ ಕಲ್ಪಿಸಬಹುದು ಎಂದು ಸಮಿತಿ ಶಿಫಾರಸು ಮಾಡಿದೆ’ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ನ್ಯಾಯಪೀಠಕ್ಕೆ ತಿಳಿಸಿದರು.

‘ಈಗಾಗಲೇ ಅಸ್ತಿತ್ವದಲ್ಲಿರುವ ಮಾರ್ಗಸೂಚಿಯ ಅನುಸಾರ ಭಾರತದಲ್ಲಿನ ಕಾಲೇಜುಗಳಿಗೆ ದಾಖಲಾಗದೆಯೇ ಭಾಗ-1 ಮತ್ತು ಭಾಗ-2 (ವಿಷಯಾಧಾರಿತ ಮತ್ತು ಪ್ರಾಯೋಗಿಕ) ಪರೀಕ್ಷೆಗಳನ್ನು ಒಂದೇ ಪ್ರಯತ್ನದಲ್ಲಿ ಪೂರ್ಣಗೊಳಿಸಲು ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಿದ್ದೇವೆ’ ಎಂದು ಕೇಂದ್ರ ಸರ್ಕಾರವು ನ್ಯಾಯಾಲಯಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ತಿಳಿಸಿದೆ.

‘ಭಾರತದಲ್ಲಿ ಅನುಸರಿಸಲಾಗುತ್ತಿರುವ ಮಾದರಿಯಲ್ಲೇ ವಿಷಯಾಧಾರಿತ ಪರೀಕ್ಷೆಯನ್ನು ಕೇಂದ್ರೀಯ ಹಾಗೂ ಭೌತಿಕವಾಗಿ ನಡೆಸಲಾಗುತ್ತದೆ. ಪ್ರಾಯೋಗಿಕ ಪರೀಕ್ಷೆಗಳನ್ನು ಗೊತ್ತುಪಡಿಸಿದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕೈಗೊಳ್ಳಲಾಗುತ್ತದೆ. ಎರಡೂ ಪರೀಕ್ಷೆಗಳಲ್ಲೂ ಉತ್ತೀರ್ಣರಾದ ಬಳಿಕ ವಿದ್ಯಾರ್ಥಿಗಳು ಎರಡು ವರ್ಷಗಳ ಕಡ್ಡಾಯ ಇಂಟರ್ನ್ ಶಿಪ್ ಪೂರ್ಣಗೊಳಿಸಬೇಕಾಗುತ್ತದೆ. ಮೊದಲ ವರ್ಷದ



ಇಂಟರ್ನ್‌ಶಿಪ್ ಉಚಿತವಾಗಿರಲಿದ್ದು, ಎರಡನೇ ವರ್ಷದ ಇಂಟರ್ನ್‌ಶಿಪ್‌ಗಾಗಿ ಎನ್‌ಎಂಸಿ ನಿಗದಿಪಡಿಸಿರುವ ಶುಲ್ಕ ಪಾವತಿಸಬೇಕಾಗುತ್ತದೆ’ ಎಂದೂ ಹೇಳಲಾಗಿದೆ.

ವಿದ್ಯಾರ್ಥಿಗಳ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲರಾದ ಎಸ್. ನಾಗಮುತ್ತು, ಗೋಪಾಲಶಂಕರ ನಾರಾಯಣನ್ ಹಾಗೂ ಇತರರು ಕೇಂದ್ರ ಸರ್ಕಾರದ ನಿಲುವನ್ನು ವಿರೋಧಿಸಿದರು.

ಇದರಿಂದ ವಿದ್ಯಾರ್ಥಿಗಳಿಗೆ ಆಗುವ ಅನಾನುಕೂಲಗಳೇನು ಎಂಬುದರ ಕುರಿತು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

‘ಕೇಂದ್ರ ಸರ್ಕಾರದಿಂದ ನೇಮಕಗೊಂಡಿದ್ದ ಸಮಿತಿಯು ನೀಡಿರುವ ಶಿಫಾರಸುಗಳನ್ನು ನಾವು ಸ್ವೀಕರಿಸುತ್ತೇವೆ. ಆದರೆ ಭಾಗ-1 ಮತ್ತು ಭಾಗ-2ರ ಪರೀಕ್ಷೆಗಳನ್ನು ಒಂದರ ಬದಲು ಎರಡು ಪ್ರಯತ್ನಗಳಲ್ಲಿ ಪೂರ್ಣಗೊಳಿಸುವುದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುತ್ತಿದ್ದೇವೆ’ ಎಂದು ನ್ಯಾಯಪೀಠವು ತಿಳಿಸಿತು.

ಗಡಿಯಲ್ಲಿ ಮೂರು ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ಚಂಡೀಗಢ (ಪಿಟಿಐ): ಭಾರತ-ಪಾಕಿಸ್ತಾನ ಗಡಿಯಲ್ಲಿ ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದ ಮೂರು ಡ್ರೋನ್‌ಗಳನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹೊಡೆದುರುಳಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಘಟನಾ ಸ್ಥಳಗಳಿಂದ ಸುಮಾರು 10 ಕೆ.ಜಿ ಹೆರಾಯಿನ್, ಪಿಸ್ತೂಲ್ ಮತ್ತು ಮ್ಯಾಗಜಿನ್ ಮತ್ತಿತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.

‘ಅಮೃತಸರದ ರಜತಾಲ್ ಗ್ರಾಮದಲ್ಲಿ ಸೋಮವಾರ ಸಂಜೆ 8.30ರ ಸುಮಾರಿಗೆ ಪಾಕಿಸ್ತಾನದ ಡ್ರೋನ್ ಹಾರಾಡುತ್ತಿರುವುದು ಪತ್ತೆಯಾಗಿತ್ತು. ಕೂಡಲೇ ಬಿಎಸ್‌ಎಫ್ ಸಿಬ್ಬಂದಿ ಅದನ್ನು ಹೊಡೆದುರುಳಿಸಿದರು. ಮಂಗಳವಾರ ಈ ಪ್ರದೇಶದಲ್ಲಿ ಶೋಧ ನಡೆಸಿದಾಗ ಕಪ್ಪು ಬಣ್ಣದ ಡ್ರೋನ್ ಪತ್ತೆಯಾಗಿತ್ತು. ಅದರೊಳಗೆ ಹೆರಾಯಿನ್ ಪ್ಯಾಕೆಟ್‌ಗಳು (2.6 ಕೆ.ಜಿ) ಕಂಡುಬಂದವು’ ಎಂದು ವಕ್ತಾರರು ತಿಳಿಸಿದ್ದಾರೆ.

‘ಅದೇ ದಿನ ರಾತ್ರಿ ಅಮೃತಸರದ ಬಚಿವಿಂದ್ ಗ್ರಾಮದಲ್ಲಿ ಹಾರಾಡುತ್ತಿದ್ದ ಮತ್ತೊಂದು ಡ್ರೋನ್ ಅನ್ನು ಯೋಧರು ಹೊಡೆದುರುಳಿಸಿದರು. ಅದರಲ್ಲಿದ್ದ ಮೂರು ಕೆ.ಜಿ ಹೆರಾಯಿನ್ ವಶಪಡಿಸಿಕೊಂಡಿದ್ದಾರೆ. ಇಬ್ಬರನ್ನು ಬಂಧಿಸಲಾಗಿದೆ. ಹರ್ದೋ ರತ್ತನ್ ಗ್ರಾಮದಲ್ಲಿ ಮತ್ತೊಂದು ಡ್ರೋನ್ ಅನ್ನು ಯೋಧರು ಹೊಡೆದುರುಳಿಸಿದ್ದಾರೆ. ಆ ಪ್ರದೇಶದಲ್ಲಿ 2 ಕೆ.ಜಿ ಹೆರಾಯಿನ್ ಪತ್ತೆಯಾಗಿದೆ. ಫಾಝಿಲ್ಕಾ ಜಿಲ್ಲೆಯ ಗಡಿಯುದ್ದಕ್ಕೂ ಹೆರಾಯಿನ್ ಪ್ಯಾಕ್‌ಗಳನ್ನು ಎಸೆಯುತ್ತಿದ್ದವರ ಮೇಲೆ ಬಿಎಸ್‌ಎಫ್ ಯೋಧರು ಗುಂಡು ಹಾರಿಸಿದ್ದಾರೆ. ದುಷ್ಕರ್ಮಿಗಳು ಪರಾರಿಯಾಗಿದ್ದಾರೆ’ ಎಂದು ತಿಳಿಸಿದ್ದಾರೆ.

ಕೋವಿಡ್: 1,573 ಮಂದಿಗೆ ಸೋಂಕು

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ 1,573 ಕೋವಿಡ್ ಪ್ರಕರಣಗಳು ದಾಖಲಾಗಿವೆ. ಈ ಮೂಲಕ ಸಕ್ರಿಯ ಪ್ರಕರಣಗಳ ಸಂಖ್ಯೆ 10,981ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ತಿಳಿಸಿದೆ.

ಕೋವಿಡ್‌ನಿಂದ ನಾಲ್ವರು ಸಾವನ್ನಪ್ಪಿದ್ದು, ಮೃತಪಟ್ಟವರ ಸಂಖ್ಯೆ 5,30,841ಕ್ಕೆ ಏರಿದೆ. ದೈನಂದಿನ ಪಾಸಿಟಿವಿಟಿ ದರ ಶೇ 1.30ರಷ್ಟಿದೆ. ಒಟ್ಟಾರೆ, ದೇಶದಲ್ಲಿ ಈವರೆಗೆ 4.47 ಕೋಟಿ (4,47,07, 525) ಜನರಿಗೆ ಸೋಂಕು ತಗುಲಿದೆ ಸಕ್ರಿಯ ಪ್ರಕರಣಗಳ ದರ ಶೇ 0.02ರಷ್ಟಿದ್ದು, ಸಾವಿನ ಪ್ರಮಾಣ ಶೇ 1.19ರಷ್ಟಾಗಿದೆ ಎಂದು ಸಚಿವಾಲಯ ತಿಳಿಸಿದೆ.

ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವುದು ಮೂಲಭೂತ ಅಗತ್ಯ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ‘ದೇಶದಲ್ಲಿ ಕೋಮು ಸಾಮರಸ್ಯ ಕಾಪಾಡುವ ದಿಸೆಯಲ್ಲಿ ದ್ವೇಷ ಭಾಷಣಕ್ಕೆ ಕಡಿ ವಾಣ ಹಾಕುವುದು ಮೂಲಭೂತ ಅಗತ್ಯವಾಗಿದೆ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ದ್ವೇಷ ಭಾಷಣ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಮಂಗಳವಾರ ನಡೆಸಿತು.


‘ಕೇವಲ ದೂರು ದಾಖಲಿಸುವುದರಿಂದ ದ್ವೇಷ ಭಾಷಣದ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಎಫ್‌ಐಆರ್‌ಗಳಿಗೆ ಅನುಸಾರವಾಗಿ ಬೇರೆ ಯಾವುದಾದರೂ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ’ ಎಂದು ನ್ಯಾಯಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿತು. ‘ದ್ವೇಷ ಭಾಷಣ ಸಂಬಂಧ ಈವರೆಗೂ ಒಟ್ಟು 18 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ’ ಎಂದು ಮೆಹ್ತಾ ಪೀಠಕ್ಕೆ ಹೇಳಿದರು.

ನ್ಯಾಯಪೀಠವು ಮೆಹ್ತಾ ಹಾಗೂ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರ ಆಕ್ಷೇಪದ ನಡುವೆಯೂ ಅರ್ಜಿಯ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ದ್ವೇಷ ಭಾಷಣದ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಕಳೆದ ವರ್ಷದ ಅಕ್ಟೋಬರ್ 21ರಂದು ದೆಹಲಿ, ಉತ್ತರಪ್ರದೇಶ ಹಾಗೂ ಉತ್ತರಾಖಂಡ ಸರ್ಕಾರಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಕಿಡಿಗೇಡಿಗಳ ವಿರುದ್ಧ ದೂರು ದಾಖಲಾಗಲಿ ಎಂದು ಕಾಯುತ್ತಾ ಕೂರದೇ ತಕ್ಷಣವೇ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದೂ ನಿರ್ದೇಶಿಸಿತ್ತು.

ಅತ್ಯಂತ ಗಂಭೀರವೆನಿಸಿರುವ ಈ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಆಡಳಿತವು ವಿಳಂಬ ಧೋರಣೆ ಅನುಸರಿಸಿದ್ದೇ ಆದಲ್ಲಿ ನ್ಯಾಯಾಂಗ ನಿಂದನೆ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ ಎಂದೂ ಎಚ್ಚರಿಸಿತ್ತು.

ತಂತ್ರಜ್ಞಾನ



ಮರದಿಂದ ಜಲಶುದ್ಧಿ!



ಅಮೃತೇಶ್ವರಿ ಬಿ.

> ನೀರಿನಲ್ಲಿನ ಕಲ್ಮಶಗಳಲ್ಲದೆ ಬಣ್ಣವನ್ನೂ ಬೇರ್ಪಡಿಸುವ ಸುಲಭ ತಂತ್ರವೊಂದನ್ನು ವಿಜ್ಞಾನಿಯೊಬ್ಬರು ಕಂಡುಹಿಡಿದಿದ್ದಾರೆ.

ನೀರಿನ ಎಲ್ಲ ಮೂಲಗಳು ಕಲುಷಿತಗೊಂಡು, ಇಡೀ ಜೀವಸಂಕುಲಕ್ಕೆ, ಅದರಲ್ಲೂ ಜಲಚರಜೀವಿಗಳಿಗೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ನಾವು ಆಗಿಂದಾಗ್ಗೆ ಕೇಳುತ್ತಲೇ ಇರುತ್ತೇವೆ. ಈ ಸಮಸ್ಯೆಯನ್ನು ಬಗೆಹರಿಸುವತ್ತ ನಡೆಯುತ್ತಿರುವ ಸಾಕಷ್ಟು ಸಂಶೋಧನೆಗಳ ಬಗ್ಗೆಯೂ ಓದಿದ್ದೇವೆ. ಕೊಳಚೆ ನೀರನ್ನು ಶುದ್ಧೀಕರಿಸಿ ಮರುಬಳಸುವ ಅಥವಾ ಮಾಲಿನ್ಯಕಾರಕಗಳನ್ನು ಬೇರ್ಪಡಿಸಿ ಪರಿಸರಕ್ಕೆ ಬಿಡುವಂತಹ ಉಪಾಯ ಹೊಸತೇನಲ್ಲ. ಜೈವಿಕ, ರಾಸಾಯನಿಕ ಅಥವಾ ತಾಂತ್ರಿಕ ವಿಧಾನಗಳನ್ನು ಬಳಸಿ ಕೊಳಚೆ ನೀರಿನಲ್ಲಿನ ಮಲಿನವನ್ನು ವಿಘಟಿಸುವ ಪ್ರಯತ್ನಗಳು ಸಾಕಷ್ಟು ನಡೆದಿವೆ. ಆದರೆ ನೀರಿನಲ್ಲಿನ ಕಲ್ಮಶಗಳಲ್ಲದೆ ಬಣ್ಣವನ್ನೂ ಬೇರ್ಪಡಿಸುವ ಸುಲಭ ತಂತ್ರವೊಂದನ್ನು ಸ್ವೀಡನ್ನಿನ ಶಾಮರ್ಸ್ ಯೂನಿವರ್ಸಿಟಿ ಆಫ್ ಟೆಕ್ನಾಲಜಿಯ ವಿಜ್ಞಾನಿ ಗನ್ನರ್ ವೆಸ್ಮನ್ ಕಂಡುಹಿಡಿದಿದ್ದಾರೆ. ಅದುವೇ ಗಿಡಮರಗಳ ಎಲೆ ಕಾಂಡಗಳಲ್ಲಿರುವ 'ಸೆಲ್ಯುಲೋಸ್' ಎನ್ನುವ ನಾರಿನಂತಿರುವ ಕಾರ್ಬೋಹೈಡ್ರೇಟಿನ ಪುಡಿರೂಪದ ಶೋಧಕ.

ವಿಶ್ವದ ಸುಮಾರು 200 ಕೋಟಿ ಜನರಿಗೆ ಶುದ್ಧವಾದ ನೀರಿನ ಸೌಲಭ್ಯವೇ ಇಲ್ಲ. ಏಷ್ಯಾ ಹಾಗೂ ಆಫ್ರಿಕಾದಂತಹ ಖಂಡಗಳ ದೇಶಗಳಲ್ಲಿ ಬಟ್ಟೆ ಉದ್ಯಮ ಹೆಚ್ಚು. ಇಲ್ಲಿ ಆದಾಯವೂ ಕಡಿಮೆ, ತಂತ್ರಜ್ಞಾನಗಳೂ ಹಳೆಯವು ಮತ್ತು ಪರಿಸರ ರಕ್ಷಣೆಗಾಗಿ ಕಾನೂನುಗಳೂ ಭದ್ರವಾಗಿಲ್ಲ. ಹಾಗಾಗಿ ಕೈಗಾರಿಕೆಗಳ ತ್ಯಾಜ್ಯಗಳನ್ನು ಮನಸೋ ಇಚ್ಛೆ ನೀರಿಗೆ ಹರಿಯಬಿಡುತ್ತಾರೆ. ಒಂದು ಕೆಜಿಯಷ್ಟು ಹೊಸ ಬಟ್ಟೆಯನ್ನು ತಯಾರಿಸುವ ಕ್ರಿಯೆಯಲ್ಲಿ ಸುಮಾರು 7000ದಿಂದ 29000 ಲೀಟರು ನೀರು ಮತ್ತು ಸುಮಾರು 1.5ರಿಂದ 6.9 ಕೆ.ಜಿಯಷ್ಟು ರಾಸಾಯನಿಕಗಳು ವೆಚ್ಚವಾಗುತ್ತದೆಯಂತೆ. ಒಂದು ಕೆಜಿ ಬಟ್ಟೆಯ ಉತ್ಪಾದನೆಯಲ್ಲಿ ಇಷ್ಟೆಲ್ಲಾ ತ್ಯಾಜ್ಯ ಹೊರಬರುವುದಾರೆ, ಬಟ್ಟೆ ಉದ್ಯಮದ ಒಟ್ಟು ತ್ಯಾಜ್ಯ ಎಷ್ಟು ದೊಡ್ಡ ಪ್ರಮಾಣದಲ್ಲಿರಬಹುದು? ಬಟ್ಟೆ ಉದ್ಯಮದ ಕಲುಷಿತ ನೀರಿನಲ್ಲಿ ಮತ್ತೊಂದು ಸಮಸ್ಯೆಯೆಂದರೆ ತ್ಯಾಜ್ಯದಲ್ಲಿರುವ ಬಣ್ಣಕಾರಕಗಳು. ಬಣ್ಣಗಳಲ್ಲಿರುವ ಪಾದರಸ, ಸೀಸದಂತಹ ಭಾರಲೋಹಗಳು ಮಣ್ಣು, ನೀರನ್ನು ಕಲುಷಿತಗೊಳಿಸುತ್ತವೆ. ಕೊನೆಗೆ ಅಂತರ್ಜಲದ ನೀರನ್ನೂ ವಿಷವಾಗಿಸುತ್ತವೆ. ಕಾರ್ಖಾನೆಗಳಿಂದ ಹೊರಬರುವ ಮಲಿನಗೊಂಡ ನೀರಿನಲ್ಲಿರುವ ಘನತ್ಯಾಜ್ಯಗಳನ್ನು ಹೇಗೋ ಬೇರ್ಪಡಿಸಬಹುದು. ಆದರೆ ರಾಸಾಯನಿಕಗಳು ಮತ್ತು ಬಣ್ಣಕಾರಕಗಳನ್ನು ಬೇರ್ಪಡಿಸುವುದು ಹೆಚ್ಚಿನ ಶ್ರಮವನ್ನೇ ಬೇಡುತ್ತವೆ. ಗನ್ನರ್ ವೆಸ್ಮನ್ ಮತ್ತು ತಂಡದವರು ಈ ಬಣ್ಣವನ್ನು ತೆಗೆಯಲೆಂದು ಗಿಡಮರಗಳ ಸೆಲ್ಯುಲೋಸ್ ನಾರನ್ನು ಬಳಸಿರುವುದು ವಿಶೇಷ.

ಇದುವರೆಗೂ ಸೆಲ್ಯುಲೋಸನ್ನು ಕಾಗದ, ಪೇಪರುಬೋರ್ಡು, ಜೈವಿಕ ಇಂಧನವಾದ ಎಥನಾಲ್ – ಇವುಗಳ ಉತ್ಪಾದನೆಯಲ್ಲಿ ಬಳಸಿಕೊಳ್ಳುತ್ತಿದ್ದರು. ವೆಸ್ಮನ್ ಅವರು ಸೆಲ್ಯುಲೋಸ್ ನಾರಿನ ಹೊಸ ಉಪಯೋಗವನ್ನು ಪತ್ತೆ ಮಾಡಿದ್ದಾರೆ. ಇವರು ಸೆಲ್ಯುಲೋಸಿನ ನ್ಯಾನೋಕಣಗಳನ್ನು ತಯಾರಿಸಿ, ಅದರ ಹೀರಿಕೊಳ್ಳುವ ಸಾಮರ್ಥ್ಯವನ್ನು ಪರೀಕ್ಷಿಸಿದ್ದಾರೆ. ಅದನ್ನು ಮತ್ತಷ್ಟು ಸಂಸ್ಕರಿಸಿ ನೀರನ್ನು ಶುದ್ಧೀಕರಿಸುವ, ಬಣ್ಣಕಾರಕಗಳನ್ನು ತನ್ನಲ್ಲಿ ಹಿಡಿದಿಟ್ಟುಕೊಳ್ಳುವ ಗುಣವುಳ್ಳ ಅದ್ಭುತ ಪುಡಿಯನ್ನು ತಯಾರಿಸಿದ್ದಾರೆ. ಕಲುಷಿತ ನೀರನ್ನು ಹೊರಹಾಕುವ ಕೊಳವೆಗೆ ಸೋಸುವ ಸೆಲ್ಯುಲೋಸ್ ನಾರಿನ ಪುಡಿಯನ್ನು ತುಂಬಿರುವ ಒಂದು ಪೆಟ್ಟಿಗೆಯನ್ನು ಜೋಡಿಸಿಬಿಟ್ಟರೆ ಸಾಕು. ನೀರು ಈ ಸೋಸುಪದರದ ಮೂಲಕ ಹಾದುಹೋಗುತ್ತಿದ್ದಂತೆ ನೀರಿನಲ್ಲಿ ಬಣ್ಣ ಹಾಗೂ ಬಣ್ಣಕಾರಕಗಳನ್ನು ತನ್ನೊಳಗೆ ಹಿಡಿದಿಟ್ಟುಕೊಳ್ಳುತ್ತದೆ. ಸೂರ್ಯನ ಬಿಸಿಲು ಕೂಡ ಅದರ ಮೇಲೆ ಬೀಳುತ್ತಿದ್ದಂತೆ ಈ ಮಾಲಿನ್ಯಕಾರಕಗಳು ಸುಲಭವಾಗಿ ವಿಘಟನೆಯಾಗಿಬಿಡುತ್ತವೆ. ಈ ವಿಧಾನದಲ್ಲಿ ಶಾಖ ಅಥವಾ ಇತರೆ ಶಕ್ತಿಯನ್ನು ಬಳಸುವ ಅವಶ್ಯಕತೆಯಿಲ್ಲ. ಸೂರ್ಯನ ಬಿಸಿಲೇ ಅತ್ಯಂತ ದಕ್ಷವಾಗಿ ನೀರನ್ನು ಸೋಸಿಬಿಡುತ್ತದೆ ಎನ್ನುತ್ತಾರೆ, ವೆಸ್ಮನ್.

ಒಂದಿಷ್ಟು ಅಕ್ಕಿಕಾಳಿರುವ ನೀರಿನ ಲೋಟದಲ್ಲಿ ಹಣ್ಣಿನ ರಸವನ್ನು ಸೇರಿಸಿದರೆ, ಅಕ್ಕಿಕಾಳು ಅದರ ಬಣ್ಣವನ್ನು ಹೀರಿಕೊಳ್ಳುವಂತೆ, ಈ ಸೆಲ್ಯುಲೋಸ್ ಕೂಡ ಬಟ್ಟೆಯ ಉದ್ಯಮದಲ್ಲಿ ಬಳಸುವ ತ್ಯಾಜ್ಯಬಣ್ಣಗಳನ್ನು ಹೀರಿಕೊಳ್ಳುತ್ತದೆಯಂತೆ. ಅಕ್ಕಿಯಲ್ಲಿರುವುದೂ ಪಿಷ್ಟ ಎನ್ನುವ ಕಾರ್ಬೋಹೈಡ್ರೇಟ್. ಸೆಲ್ಯುಲೋಸ್ ಕೂಡ ಮತ್ತೊಂದು ಬಗೆಯ ಸಂಕೀರ್ಣ ಕಾರ್ಬೋಹೈಡ್ರೇಟ್ ಅಷ್ಟೆ. ಇದೊಂದು ದುಬಾರಿಯೂ ಅಲ್ಲದ, ಪರಿಸರಸ್ನೇಹಿ ಹಾಗೂ ಸುಲಭ ತಂತ್ರಜ್ಞಾನವಾಗಿದ್ದು, ಕೊಳಚೆ ನೀರಿನ ನಿರ್ವಹಣೆಯ ಕೊರತೆ ಇರುವಂತಹ ಹಿಂದುಳಿದ ದೇಶಗಳಲ್ಲಿ ಬಹಳ ಉಪಯುಕ್ತವಾಗಬಲ್ಲದು ಎನ್ನುವುದು ವೆಸ್ಮನ್ ಅವರ ಅಭಿಪ್ರಾಯ. ದೊಡ್ಡ ಪ್ರಮಾಣದಲ್ಲಿ ಬಟ್ಟೆ ಉದ್ಯಮವಿರುವ ಭಾರತದಲ್ಲಿಯೂ ಕೈಗಾರಿಕೆಗಳ ಕೊಳಚೆನೀರನ್ನು ನದಿಸಾಗರಗಳಿಗೆ ಬಿಡಲಾಗುತ್ತಿದೆ. ಇದರಿಂದ ಜಲಚರಗಳು, ನೀರು, ಮಣ್ಣು ಕಲುಷಿತವಾಗಿವುದಲ್ಲದೇ, ಕೊನೆಗೆ ಸಸ್ಯಗಳ ಬೆಳವಣಿಗೆ ಪ್ರಕ್ರಿಯೆಯಲ್ಲಿಯೇ ವ್ಯತ್ಯಾಸ ಉಂಟುಮಾಡಬಲ್ಲವು. ಈ ರಾಸಾಯನಿಕಗಳು ಆಹಾರ ಸರಪಳಿಯನ್ನೂ ಸೇರಿ ಇಡೀ ಪರಿಸರ ಮತ್ತು ಜೀವಿಗಳನ್ನು ಬಾಧಿಸುತ್ತಿದೆ. ಹಾಗಾಗಿ ಈ ವಿಷತ್ಯಾಜ್ಯಗಳನ್ನು ಸರಿಯಾಗಿ ವಿಲೇವಾರಿ ಮಾಡುವುದು ಮುಖ್ಯ. ಕೈಗಾರಿಕಾ ತ್ಯಾಜ್ಯವನ್ನು ಪ್ರಯೋಗಾಲಯದಲ್ಲಿ ಸೆಲ್ಯುಲೋಸನ್ನು ಬಳಸಿ ಶುದ್ಧೀಕರಿಸಿದಾಗ ಸುಮಾರು ಪ್ರತಿಶತ 80ರಷ್ಟು ಬಣ್ಣಕಾರಕಗಳು ಸೋಸಲ್ಪಟ್ಟಿದ್ದುವಂತೆ. ಮುಂದಿನ ದಿನಗಳಲ್ಲಿ ಇದರ ಶುದ್ಧೀಕರಿಸುವ ಸಾಮರ್ಥ್ಯವನ್ನು ಸುಧಾರಿಸಲು ಇನ್ನಷ್ಟು ಪ್ರಯತ್ನಿಸಲಾಗುತ್ತದೆ ಎನ್ನುತ್ತಾರೆ, ವೆಸ್ಮನ್.

ಕಲುಷಿತ ನೀರನ್ನು ಯಾವುದೇ ರೀತಿಯಲ್ಲಿಯೂ ಸಂಸ್ಕರಿಸದೇ ಪರಿಸರಕ್ಕೆ ಬಿಡುವುದಕ್ಕಿಂತ ಸುಮಾರು ಶೇ. 80ರಷ್ಟು ಬೇರ್ಪಡಿಸಿ, ವಿಘಟಿಸಿ, ವಿಸರ್ಜಿಸುವುದು ಉತ್ತಮ ಸುಧಾರಣೆಯೇ ಸರಿ. ಇದರ ಜೊತೆಗೆ ನೀರಿನ ಆಮ್ಲೀಯ ಮಟ್ಟವನ್ನು ನಿರ್ವಹಿಸುತ್ತಾ, ಸಂಸ್ಕರಣೆಯ ಅವಧಿಯನ್ನು ಹೆಚ್ಚಾಗಿಸುತ್ತಾ ಪ್ರಕ್ರಿಯೆಯನ್ನು ಮತ್ತಷ್ಟು ಉತ್ತಮವಾಗಿಸಿ ಆ ನೀರನ್ನು ವ್ಯವಸಾಯ ಹಾಗೂ ಕುಡಿಯಲು ಬಳಸಬಹುದೇ ಎಂದು ಪರೀಕ್ಷಿಸುವ ಪ್ರಯತ್ನವನ್ನೂ ಮಾಡಲಿದ್ದಾರೆ, ವೆಸ್ಮನ್.

ಸಸ್ಯಜನ್ಯ ಸೆಲ್ಯುಲೋಸ್ ಕಾರ್ಬೋಹೈಡ್ರೇಟುಗಳನ್ನು ಬಳಸಿಕೊಂಡು ಈಗಾಗಲೇ ಕೈಗಾರಿಗಳ ತ್ಯಾಜ್ಯಗಳಲ್ಲಿರುವ ಅತ್ಯಂತ ವಿಷಕಾರಿ ರಾಸಾಯನಿಕ ಕ್ರೋಮಿಯಂ ಅನ್ನು ಬೇರ್ಪಡಿಸಲಾಗಿದೆ. ವೆಸ್ಮನ್ ಮತ್ತು ತಂಡದವರು, ನೀರಿನಲ್ಲಿ ಕರಗಿಹೋಗಿರುವ ಬಣ್ಣಗಳನ್ನು ಶೋಧಿಸಿ ಈ ವಿಧಾನವನ್ನು ಮತ್ತಷ್ಟು ಸುಧಾರಿಸಿದ್ದಾರೆ. ಜೊತೆಗೆ, ಸೆಲ್ಯುಲೋಸ್ ನಾರಿನ ನ್ಯಾನೋಕಣಗಳನ್ನು ಬಳಸಿಕೊಂಡು ಮತ್ತಾವ ಮಾಲಿನ್ಯಕಾರಕಗಳನ್ನು ತೆಗೆಯಬಹುದು ಮತ್ತು ಈಗ ಸಾಮಾನ್ಯವಾಗಿ ಬಳಸುತ್ತಿರುವ ಆ್ಯಂಟಿಬಯೋಟಿಕ್ ಉಳಿಕೆಗಳನ್ನು ಹೇಗೆ ಶುದ್ಧೀಕರಿಸಬಹುದು ಎಂದೂ ಇವರು ಸಂಶೋಧನೆ ಮಾಡಲಿದ್ದಾರೆ. ❖

ಎಲ್. ವಿ. ಎಂ. 3: ಮತ್ತೊಂದು ಯಶಸ್ಸು!

ಬಿ. ಆರ್. ಗುರುಪ್ರಸಾದ್


ಕಳೆದ ಭಾನುವಾರ (ಮಾರ್ಚ್ 26, 2023) 'ಇಸ್ರೊ'ದ ವಿಜ್ಞಾನಿ ಹಾಗೂ ಎಂಜಿನಿಯರ್‌ಗಳಿಗೆ ವಿಶೇಷ ದಿನ. ಏಕೆಂದರೆ ಆ ದಿನ ಬೆಳಿಗ್ಗೆ ಭಾರತ ಇದುವರೆವಿಗೂ ನಿರ್ಮಿಸಿರುವ ರಾಕೆಟ್ ವಾಹನಗಳಲ್ಲೇ ಅತಿ ಶಕ್ತಿಶಾಲಿಯಾದ 'ಎಲ್ ವಿ ಎಂ 3' (ಇದಕ್ಕೆ 'ಜಿ. ಎಸ್. ಎಲ್. ವಿ. ಮಾರ್ಕ್ 3' ಎಂಬ ಹೆಸರೂ ಇದೆ) ಜಾಗತಿಕ ಮಟ್ಟದಲ್ಲಿ ಸಂಪರ್ಕ ಸೇವೆಯನ್ನು ಒದಗಿಸುತ್ತಿರುವ ಖಾಸಗಿ ಸಂಸ್ಥೆಗಳಲ್ಲಿ ಒಂದಾದ 'ಒನ್ ವೆಬ್' ಸಂಸ್ಥೆಗೆ ಸೇರಿದ 36 ಉಪಗ್ರಹಗಳನ್ನು ಹೊತ್ತು ಉಡಾವಣೆಗೆ ಸಿದ್ಧವಾಗಿ ನಿಂತಿತ್ತು.

ಕಳೆದ ಅಕ್ಟೋಬರ್‌ನಲ್ಲಿ ಅದೇ ರಾಕೆಟ್ ವಾಹನವು 36 'ಒನ್ ವೆಬ್' ಉಪಗ್ರಹಗಳನ್ನು ನಿಗದಿಯಾದ ಕಕ್ಷೆಗೆ ಯಶಸ್ವಿಯಾಗಿ ಹಾರಿಬಿಟ್ಟಿತ್ತು. ಆ ಅನುಭವ ತಮಗಿದ್ದರೂ ಉಪಗ್ರಹ ಉಡಾವಣಾ ಕಾರ್ಯದ ಸಂಕೀರ್ಣತೆಯ ಅರಿವಿದ್ದ ಇಸ್ರೊ ಸಮೂಹ ಅದೇ ಬಗೆಯ 36 ಉಪಗ್ರಹಗಳನ್ನು ಮತ್ತೆ ಹಾರಿಬಿಡುವುದಕ್ಕೆ ಮೊದಲು ಅತ್ಯಂತ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುತ್ತಿತ್ತು. ಮಾರ್ಚ್ 26ರಂದು ಬೆಳಿಗ್ಗೆ ಒಂಬತ್ತು ಗಂಟೆಗೆ ಸರಿಯಾಗಿ, ಸುಮಾರು 14 ಮಹಡಿಗಳ ಎತ್ತರವಿದ್ದ 'ಎಲ್ ವಿ ಎಂ 3' ಗುಡುಗುತ್ತಾ ಶ್ರೀಹರಿಕೋಟಾ ದ್ವೀಪದಲ್ಲಿರುವ ಸತೀಶ್ ಧವನ್ ಅಂತರಿಕ್ಷ ಕೇಂದ್ರದಲ್ಲಿನ ಎರಡನೇ ಉಡಾವಣಾ ವೇದಿಕೆಯಿಂದ ಮೇಲೇರಿತು. ಉಡಾವಣೆಯ ವೇಳೆಯಲ್ಲಿ ಸುಮಾರು 640 ಟನ್ (ಆರು ಲಕ್ಷ ನಲವತ್ತು ಸಾವಿರ ಕಿಲೋಗ್ರಾಂ!) ತೂಕವಿದ್ದ ಎಲ್. ವಿ. ಎಂ. 3 ರಾಕೆಟ್ ವಾಹನವು ಮೊದಲು ಸ್ವಲ್ಪ ನಿಧಾನವಾಗಿ ಮೇಲೇರಿದರೂ ನಂತರ ವೇಗವನ್ನು ತ್ವರಿತವಾಗಿ ಹೆಚ್ಚಿಸಿಕೊಳ್ಳುತ್ತಾ ಅಂತರಿಕ್ಷದತ್ತ ಸಾಗಲಾರಂಭಿಸಿತು. ಆ ವಾಹನದ ಚಲನೆಗೆ ಎರವಾದ ಎರಡು 'ಬೂಸ್ಟರ್' ರಾಕೆಟ್ಟುಗಳು ತಮ್ಮಲ್ಲಿದ್ದ ಘನರೂಪದ (ಸಾಲಿಡ್) ನೋದನಕಾರಿಗಳನ್ನು (ಅಂದರೆ ಇಂಧನ-ದಹನಾನುಕೂಲಿಗಳ ಮಿಶ್ರಣವನ್ನು) ಬಕಾಸುರನಂತೆ ಆ ವೇಳೆಯಲ್ಲಿ ಕಬಳಿಸುತ್ತಿದ್ದವು. ಇವುಗಳ ಪ್ರಚಂಡ ಶಕ್ತಿಯೇ ಸಾಲದೆಂಬಂತೆ 'ಎಲ್. ವಿ. ಎಂ. 3'ರ ಕೆಳಭಾಗದ ಮಧ್ಯದಲ್ಲಿರುವ ಎರಡು 'ದ್ರವ' ರಾಕೆಟ್ ಯಂತ್ರಗಳು ಜೀವತಳೆದು ರಾಕೆಟ್‌ನ ಚಲನೆಗೆ ತಾವೂ ಕೊಡುಗೆ ನೀಡಲಾರಂಭಿಸಿದವು. ಅನಂತರ ಮೊದಲಿಗೆ ಎರಡು ಬೂಸ್ಟರ್ ರಾಕೆಟ್ಟುಗಳು, ನಂತರ ಆ ರಾಕೆಟ್ ವಾಹನದ ಹೆಗಲಿನ ಮೇಲಿದ್ದ ಉಪಗ್ರಹಗಳನ್ನು ಚಿಪ್ಪಿನಂತೆ ಆವರಿಸಿದ್ದ ರಾಕೆಟ್‌ನ 'ಶಾಖಕವಚ' ಮತ್ತು ಆ ಬಳಿಕ ಎರಡು 'ದ್ರವ'ರಾಕೆಟ್ ಯಂತ್ರಗಳನ್ನು ಹೊಂದಿದ್ದ ಹಂತ – ಇವೆಲ್ಲವೂ ಸಕಾಲಕ್ಕೆ ಬೇರ್ಪಟ್ಟು ಭೂಮಿಯತ್ತ ಧಾವಿಸಿದವು.

ಹೀಗೆ ಎಲ್. ವಿ. ಎಂ. 3 ಸಾಕಷ್ಟು ಹಗುರವಾದಂತೆ ಅದರ ಅಂತಿಮ 'ಕ್ರಯೋಜನಿಕ್' ಹಂತ ಕಾರ್ಯಾರಂಭ ಮಾಡಿತು. ದ್ರವಜಲಜನಕ (ಹೈಡ್ರೊಜನ್) ಅನ್ನು ಇಂಧನವಾಗಿ ಹಾಗೂ ದ್ರವ ಆಮ್ಲಜನಕವನ್ನು ದಹನಾನುಕೂಲಿ (ಆಕ್ಸಿಡೈಸರ್) ಆಗಿ ಬಳಸುವ ಇಂತಹ ಅತ್ಯಂತ ಸಂಕೀರ್ಣವಾದ ಹಾಗೂ ದಕ್ಷವಾದ ರಾಕೆಟ್ ಹಂತದ ತಂತ್ರಜ್ಞಾನವನ್ನು ಇಂದು ಕರಗತಮಾಡಿಕೊಂಡಿರುವ ಕೆಲವೇ ಬೆರಳಣಿಕೆಯ ರಾಷ್ಟ್ರಗಳಲ್ಲಿ ಭಾರತವೂ ಒಂದು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಕೊನೆಗೆ ಆ ಹಂತವೂ ತನ್ನ ಕಾರ್ಯವನ್ನು ತೃಪ್ತಿಕರವಾಗಿ ಮುಗಿಸಿದಂತೆ ಅದರ ವೇಗ ಗಂಟೆಗೆ ಒಂದಲ್ಲ ಎರಡಲ್ಲ, ಸುಮಾರು 27 ಸಾವಿರ ಕಿಲೋಮೀಟರ್ ಗಳನ್ನು ತಲುಪಿತು. ಇದರೊಂದಿಗೇ ಆ ಹಂತ ಸುಮಾರು 450 ಕಿಲೋಮೀಟರ್ ಎತ್ತರದ ಕಕ್ಷೆಯನ್ನು ಪ್ರವೇಶಿಸಿತು. ನಂತರದ ಕೆಲ ಕ್ಷಣಗಳಲ್ಲೇ 36 'ಒನ್ ವೆಬ್' ಉಪಗ್ರಹಗಳು ಗುಂಪುಗುಂಪಾಗಿ ಆ ಹಂತದಿಂದ ಬೇರ್ಪಟ್ಟವು. ಈ ರೀತಿ 'ಎಲ್. ವಿ. ಎಂ. 3'ಯ ಆರನೆಯ ಯಾನ ಯಶಸ್ವಿಯಾಯಿತು. 2016ರಲ್ಲಿ ಉಪಗ್ರಹವೊಂದನ್ನು ಮೊದಲ ಬಾರಿ ಭೂಕಕ್ಷೆಗೆ ಕೊಂಡೊಯ್ದ 'ಎಲ್. ವಿ. ಎಂ. 3'ರ ಇದುವರೆಗಿನ ಯಾನಗಳೆಲ್ಲವೂ ಯಶಸ್ವಿಯಾಗಿವೆ. ಇದು ಅಂತರಿಕ್ಷ ಕ್ಷೇತ್ರದಲ್ಲಿ ಭಾರತದ ಸಾಮರ್ಥ್ಯ ಎಷ್ಟೆಂಬುದನ್ನು ಸೂಚಿಸುತ್ತದೆ.

ಕಳೆದ ಮೂರು ದಶಕಗಳಲ್ಲಿ ಪ್ರಚಂಡವಾದ ಯಶಸ್ಸನ್ನು ಕಂಡಿರುವ ಪಿ. ಎಸ್. ಎಲ್. ವಿ. ರಾಕೆಟ್ ವಾಹನಕ್ಕೆ ಇಂದು 'ಭಾರತದ ಕಾರ್ಯಾಶ್ವ ರಾಕೆಟ್' ಎಂಬ ಹೆಸರಿದೆ. ಅದಕ್ಕಿಂತ ಸುಮಾರು ನಾಲ್ಕು ಪಟ್ಟು ಸಾಮರ್ಥ್ಯವುಳ್ಳ ಈ 'ಎಲ್ ವಿ ಎಂ 3' ಭಾರತದ 'ಹೊಸ ಕಾರ್ಯಾಶ್ವ' ರಾಕೆಟ್ಟಾಗಿ ಹೊರಹೊಮ್ಮುವ ಲಕ್ಷಣಗಳು ಇದೀಗ ಗೋಚರಿಸುತ್ತಿರುವಂತೆ ಕಾಣುತ್ತದೆ.

ಕಳೆದ ವಾರದ 36 ಉಪಗ್ರಹಗಳ ಉಡಾವಣೆಯೂ ಸೇರಿದಂತೆ ಇದುವರೆವಿಗೂ ಭಾರತ 34 ರಾಷ್ಟ್ರಗಳಿಗೆ ಸೇರಿದ ಒಟ್ಟು 422 ವಿದೇಶಿ ಉಪಗ್ರಹಗಳನ್ನು ಉಡಾಯಿಸಿದೆ. ಅವುಗಳಲ್ಲಿ ಬಹುತೇಕವನ್ನು ಉಡಾಯಿಸಿದ್ದು ಪಿ. ಎಸ್. ಎಲ್. ವಿ. 2017ರ ಫೆಬ್ರುವರಿಯಲ್ಲಿ ಆ ರಾಕೆಟ್ ವಾಹನವು 104 ಉಪಗ್ರಹಗಳನ್ನು ತನ್ನ ಒಂದೇ ಯಾನದಲ್ಲಿ ಉಡಾಯಿಸುವ ಮೂಲಕ ವಿಶ್ವದಾಖಲೆಯೊಂದನ್ನು ನಿರ್ಮಿಸಿತ್ತು ಎಂಬುದನ್ನು ನಾವಿಲ್ಲಿ ನೆನೆಯಬಹುದು. ಕಳೆದ ಐದು ತಿಂಗಳ ಸುಮಾರಿನಲ್ಲಿ 72 ವಿದೇಶಿ ಉಪಗ್ರಹಗಳನ್ನು ತನ್ನ ಇತ್ತೀಚಿನ ಎರಡು ಯಾನಗಳಲ್ಲಿ ಅದಕ್ಕಿಂತ ಪ್ರಬಲವಾದ 'ಎಲ್. ವಿ. ಎಂ. 3' ಉಡಾಯಿಸಿದೆ. ಮಾನವ ಗಗನಯಾತ್ರಿಗಳನ್ನು ಭೂಕಕ್ಷೆಗೆ ಭಾರತದ ನೆಲದಿಂದ ಹಾರಿಬಿಡುವ ಉದ್ದೇಶ ಹೊಂದಿರುವ ಗಗನಯಾನ ಕಾರ್ಯಕ್ರಮದ ನೌಕೆಯನ್ನು ಹಾರಿಬಿಡುವುದೂ ಇದೇ 'ಎಲ್. ವಿ. ಎಂ. 3' ರಾಕೆಟ್ ವಾಹನವೇ ಆಗಿದೆ. ಉಪಗ್ರಹ ಉಡಾವಣಾ ರಾಕೆಟ್ ನಂತಹ ಸಂಕೀರ್ಣ ತಾಂತ್ರಿಕ ಸಾಧನದ ನಿರ್ಮಾಣದಲ್ಲಿ ಭಾರತ ಬಹುಮಟ್ಟಿಗೆ ಸ್ವಪ್ರಯತ್ನದಿಂದ ಸಾಧಿಸಿರುವ ಕಾರ್ಯ 'ಎಲ್. ವಿ. ಎಂ. 3' ವಾಹನದ ಇತ್ತೀಚಿನ ಯಶಸ್ಸಿನಿಂದ ಹೊರಜಗತ್ತಿಗೆ ಮತ್ತೊಮ್ಮೆ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಲ್ಪಟ್ಟಿದೆ. ❖



ಎಲ್. ವಿ. ಎಂ. 3ರ ಶಾಖಕವಚದ ಎರಡು ಹೋಳುಗಳ ನಡುವೆ ಇರುವ 36 ಒನ್ ವೆಬ್ ಉಪಗ್ರಹಗಳು ಚಿತ್ರಕೃಪೆ: ಇಸ್ರೊ

ಪಿಯುಸಿ-ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

BIOLOGY

1) Injection of an antidote against a snakebite is an example of

a) auto immunity
b) innate immunity
c) active immunity
d) passive immunity

Ans: (d)

Expln:- The ability of the body to fight against the pathogen is called immunity.

The immunity which is developed after the direct exposure to the pathogen or antigen is called active immunity. In this immunity, a person's own cells produce antibodies in response to infection.

The immunity gained by an organism through vaccines or antidotes is known as passive immunity. In this type of immunity, there will be no exposure to the pathogen directly. Ready-made antibodies are directly injected into a person to protect the body against foreign agents such as the snake poison. Thus, injection of an antidote of a snake is an example of passive immunity.

When the immune system recognizes the body cells as a foreign substance and attacks one's own healthy body cells, such immunity is known as autoimmunity. The immunity that is present since the time of birth is called innate immunity. This type of immunity is inherited from the parents and protects the individual throughout his life.

2) Fossils are generally found in

a) Sedimentary rocks b) Igneous rocks
c) Metamorphic rocks d) Any type of rock

Ans:- a

3) For the MN-blood group system, the frequencies of M and N alleles are 0.7 and 0.3, respectively. The expected frequency of MN-blood group bearing organisms is likely to be

a) 42% b) 49%
c) 9% d) 58%

Ans:- a

4) Which type of selection is industrial melanism observed in moth, Biston bitularia –

a) stabilising b) directional
c) disruptive d) Artificial

Ans:- b

5) Certain tumours are called malignant, because

a) they are not neoplastic
b) they are confined to specific locations
c) they invade and damage surrounding tissues
d) they show contact inhibition

Ans: (c)

Expln:- The uncontrolled growth of cells is called tumour or neoplasm. Tumours are considered to be either malignant or benign. Those tumours that are stagnant at one part of the body and do not spread are called benign tumours. But certain tumours invade and damage the surrounding tissues. Such tumours are known as malignant tumours. Only malignant tumours are properly designated as cancerous. Normal cells show a property called contact inhibition. Due to this property, when they are in contact with other cells the cell proliferation ceases. Cancer cells do not show the property of contact inhibition. A phenomenon in which the cancerous cells spread to distant sites in the body is called metastasis.

6) The most accepted line of descent in human evolution is-

a) Australopithecus → Ramapithecus → Homo sapiens → homohabilis
b) Homo erectus→ homohabilis → Homo sapiens
c) Ramapithecus→homohabilis→Homo erectus → Homo sapiens
d) Australopithecus → Ramapithecus → Homo erectus → homohabilis → Homo sapiens

Ans:- c

7) Which of the following is an example for link species –

a) Lobe fish b) Dodo bird
c) Sea weed d) Tyrannosaurus rex

Ans:- a

8) Variations during mutations of meiotic recombinations are -

a) random and directionless
b) random and directional c) random and small
d) random, small and directional

Ans:- a

9) The term 'Health' is defined in many ways. The most accurate definition of the health would be –

a) health is the state of the body and mind in a balanced condition
b) health is the reflection of a smiling face
c) health is a state of complete physical, mental and social well-being
d) health is the symbol of economic prosperity

Ans:- c

10) The chemical test that is used for the diagnosis of typhoid is –

a) ELISA – test b) ESR – test
c) PCR – test d) Widal - test

Ans:- d

PHYSICS

1) The number of electrons in one coulomb of charge is

a) 6.25×10^{18} b) 6.25×10^{16}
c) 6.25×10^{10} d) 6.25×10^{12}

Ans: (a) 6.25×10^{18}

Expln:-

$Q = ne$

$$\therefore n = \frac{Q}{e} = \frac{1C}{1.602 \times 10^{-19}} = 6.25 \times 10^{18} \text{ electrons.}$$

2) In a permanent magnet at room temperature

a) Domains are all perfectly aligned.
b) Magnetic moment of each molecule is zero.
c) The individual molecules have non-zero magnetic moment which are all perfectly aligned.
d) Domains are partially aligned.

Ans: a

Expln:- Due to thermal agitation, with increase in temperature randomness of the molecules increases and magnetic field moments get partially aligned. Hence the domains are partially aligned.

3) A particle A has charge +q and particle B has charge +4q, each of then having the same mass m. when allowed to fall from rest through the same electrical potential difference, the ratio of their speeds will become

a) 2:1 b) 1:2
c) 1:4 d) 4:1

Ans: (c) 1:4

Expln:-

F = ma............(1); F = qE............(2)

Equating both, ma = qE; a α q

$$\therefore \frac{a_1}{a_2} = \frac{q_1}{q_2} = \frac{1}{4}; \; a_1 : a_2 = 1 : 4.$$

4) In a CE amplifier, the input ac signal to be amplified is applied across

a) Forward biased emitter base junction
b) Reverse biased collector base junction
c) Reverse biased emitter-base junction
d) Forwared biased collector base junction

Ans:- a

Expln:- Emitter Basejunction should be forward biased. But Collector-Base junction should be reverse biased

5) A stone weighs 100 N on the surface of the earth. The ratio of its weight at a height of half the radius of the earth to a depth of half the radius of the earth will be approximately

a) 3.6 b) 2.2
c) 1.8 d) 0.9

Ans: (d) 0.9

Expln:-

Acceleration due to gravity at $h = \frac{R}{2}$:

$$g_h = g\left(\frac{R}{R+h}\right)^2 = g\left(\frac{R}{R+\frac{R}{2}}\right)^2 = g\left(\frac{R}{\frac{3R}{2}}\right)^2 = \frac{4g}{9}.$$

Acceleration due to gravity at $d = \frac{R}{2}$:

$$g_d = g\left(1-\frac{d}{R}\right) = g\left(1-\frac{R/2}{R}\right) = \frac{g}{2}$$

Ratio of weight :

$$\frac{W_h}{W_d} = \frac{m\,g_h}{m\,g_d}$$

$$= \frac{g_h}{g_d} = \frac{\frac{4g}{9}}{\frac{g}{2}} = \frac{8}{9} = 0.9$$

6) The gravitational field strength at the surface of a certain planet is g. which of the following is the gravitational field strength at the surface of a planet with twice the radius and twice the mass?

(a) g/2 (b) g
(c) 2g (d) 4g

Ans: (a) g/2

On planet 1, $E_1 = \frac{GM}{R^2} = g$ ...(1)

On another planet $E_2 = \frac{G \times 2M}{4R^2} = \frac{GM}{2R^2}$ ...(2)

Using equations (1) and (2)


$E_2 = \frac{g}{2}$.

7) Vector A has a magnitude of 10 units and makes an angle of 30^0 with the positive x-axis. Vector B has a magnitude of 20 units and makes an angle of 30^0 with the negative x-axis. What is the magnitude of the resultant between these two vectors?

(a) $20\sqrt{3}$ (b) 35
(c) $15\sqrt{3}$ (d) $10\sqrt{3}$

Ans : (d) $10\sqrt{3}$

Expln



$$\theta = 120^0; \; \vec{A} = 10; \; \vec{B} = 20$$

$$R = \sqrt{A^2 + B^2 + 2AB\cos\theta}$$

$$R = \sqrt{100 + 400 - 2 \times 10 \times 20 \times 1/2}$$

$$R = \sqrt{300} = \sqrt{3} \times 10.$$

ಒಂದು ತಿಂಗಳು 'ಜೈ ಭಾರತ ಸತ್ಯಾಗ್ರಹ', ಬ್ಲಾಕ್ ಮಟ್ಟದಿಂದ ರಾಷ್ಟ್ರ ಮಟ್ಟದ ಕಾರ್ಯಕ್ರಮಗಳು

ಕಾಂಗ್ರೆಸ್ ಪ್ರತಿಭಟನೆ ನೀಲ ನಕ್ಷೆ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಾನಿ ಸಮೂಹದ ಪ್ರಕರಣ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಿದ ಪ್ರಕರಣದ ವಿರುದ್ಧ ಮುಂದಿನ ಒಂದು ತಿಂಗಳ ಹೋರಾಟದ ನೀಲನಕ್ಷೆಯನ್ನು ಕಾಂಗ್ರೆಸ್ ಮಂಗಳವಾರ ಪ್ರಕಟಿಸಿದೆ. ದೇಶದಾದ್ಯಂತ ಇರುವ ಗಾಂಧೀಜಿ ಮತ್ತು ಅಂಬೇಡ್ಕರ್ ಪ್ರತಿಮೆಗಳ ಮುಂದೆ ಇಡೀ ತಿಂಗಳು 'ಜೈ ಭಾರತ ಸತ್ಯಾಗ್ರಹ' ನಡೆಸಲಾಗುವುದು ಎಂದು ಪಕ್ಷವು ಹೇಳಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ಜೈರಾಮ್ ರಮೇಶ್ ಅವರು ಪ್ರತಿಭಟನಾ ಯೋಜನೆಯನ್ನು ಪ್ರಕಟಿಸಿದರು. ಪ್ರಜಾಪ್ರಭುತ್ವದ ರಕ್ಷಣೆಯ ಕರ್ತವ್ಯದಿಂದ ವಿಮುಖವಾಗುವುದು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಿಲ್ಲ, ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಎದುರಾಗಿದೆ ಎಂದರು.

ಸಂಸತ್‌ನ ಒಳಗೆ ಮತ್ತು ಹೊರಗೆ ಹೋರಾಟ ಮುಂದುವರಿಯಲಿದೆ. ಸದಸ್ಯತ್ವದಿಂದ ರಾಹುಲ್ ಅವರನ್ನು ಅನರ್ಹಗೊಳಿಸಿದ ಕಳೆದ ಶುಕ್ರವಾರವೇ ಹೋರಾಟ ಆರಂಭವಾಗಿದೆ. ದೇಶದ ವಿವಿಧ ಭಾಗಗಳಲ್ಲಿ ಬುಧವಾರ ಮಾಧ್ಯಮಗೋಷ್ಠಿ ನಡೆಸುವಂತೆ ಪಕ್ಷದ ಮುಖಂಡರಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಜೈ ಭಾರತ ಸತ್ಯಾಗ್ರಹದ ಜೊತೆಗೆ, ರಾಷ್ಟ್ರ ಮಟ್ಟದ ಮಹಾರ್‍ಯಾಲಿಯೊಂದನ್ನು ದೆಹಲಿಯಲ್ಲಿ ಏಪ್ರಿಲ್ ಎರಡನೇ ವಾರದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಬುಧವಾರದಿಂದ ಏಪ್ರಿಲ್ 8ರವರೆಗೆ ಪ್ರತಿಭಟನೆಯ ಮೊದಲ ಹಂತ ನಡೆಯಲಿದೆ. ಕಾಂಗ್ರೆಸ್ ಪಕ್ಷದ ಬ್ಲಾಕ್ ಮತ್ತು ಮಂಡಲ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ಉದ್ದೇಶಿಸಲಾಗಿದೆ ಎಂದು ವೇಣುಗೋಪಾಲ್ ಮತ್ತು ಜೈರಾಮ್ ರಮೇಶ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ನಡೆಸಿ ರಾಹುಲ್ ಅವರ ಸಂದೇಶ ಮತ್ತು ಮನವಿಯನ್ನು ಜನರಿಗೆ ತಲುಪಿಸಲಾಗುವುದು. ಭ್ರಷ್ಟಾಚಾರ ವಿರೋಧಿ ಮತ್ತು ಲೋಪದಿಂದ ಕೂಡಿದ ತೀರ್ಪು ವಿರುದ್ಧದ ಅಭಿಯಾನಕ್ಕೆ ಬೆಂಬಲ ನೀಡುವಂತೆ ಜನರನ್ನು ಕೋರಲಾಗುವುದು. ಇದೇ 31ರಂದು ಎಲ್ಲ ಜಿಲ್ಲೆಗಳಲ್ಲಿ ಮಾಧ್ಯಮಗೋಷ್ಠಿ ನಡೆಸಲಾಗುವುದು.

ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ ಇರುವ ಗಾಂಧೀಜಿ ಮತ್ತು ಅಂಬೇಡ್ಕರ್ ಪ್ರತಿಮೆಗಳ ಮುಂದೆ ಕಾಂಗ್ರೆಸ್‌ನ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತ ವಿಭಾಗಗಳು ಏ.1ರಂದು ಪ್ರತಿಭಟನೆ ನಡೆಸಲಿವೆ. ಇಂತಹುದೇ ಪ್ರತಿಭಟನೆ ಜಿಲ್ಲಾ ಕೇಂದ್ರಗಳಲ್ಲಿ ಬುಧವಾರ ನಡೆಯಲಿದೆ ಎಂದು ಪಕ್ಷವು ತಿಳಿಸಿದೆ.

ಯುವ ಕಾಂಗ್ರೆಸ್, ಎನ್‌ಎಸ್‌ಯುಐ ಮತ್ತು ಕಾಂಗ್ರೆಸ್‌ನ ಇತರ ಘಟಕಗಳು ಏಪ್ರಿಲ್ 3ರಂದು ಮೋದಿ ಅವರನ್ನು ಪ್ರಶ್ನಿಸಿ ಅಂಚೆ ಕಾರ್ಡ್ ಕಳುಹಿಸಲಿವೆ. ಮಹಿಳಾ ಕಾಂಗ್ರೆಸ್ ವತಿಯಿಂದ ಏಪ್ರಿಲ್ 3ರಂದು ದೆಹಲಿಯಲ್ಲಿ ರ್‍ಯಾಲಿ ನಡೆಯಲಿದೆ. ಎರಡನೇ ಹಂತದ ಸತ್ಯಾಗ್ರಹವು ಏಪ್ರಿಲ್ 15ರಿಂದ 20ರ ವರೆಗೆ ನಡೆಯಲಿದೆ. ಜಿಲ್ಲಾಡಳಿತ ಕೇಂದ್ರಗಳಿಗೆ ಮುತ್ತಿಗೆ ಹಾಕಲಾಗುವುದು, ರಾಜ್ಯ ಮಟ್ಟದ ಮುಖಂಡರು ಭಾಗಿಯಾಗಲಿದ್ದಾರೆ. ಇದಕ್ಕೆ ಕೈಜೋಡಿಸುವಂತೆ ಮಿತ್ರಪಕ್ಷಗಳು ಮತ್ತು ಸಂಘಟನೆಗಳನ್ನು ಕೋರಲಾಗುವುದು. ರಾಜ್ಯ ಮಟ್ಟದ ಕಾರ್ಯಕ್ರಮಗಳು ಏಪ್ರಿಲ್ 20 ಮತ್ತು 30ರ ನಡುವೆ ನಡೆಯಲಿವೆ. ಮುಖಂಡರು ಒಂದು ದಿನದ ಉಪವಾಸ ಸತ್ಯಾಗ್ರಹವನ್ನೂ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ.



ರಾಹುಲ್ ಗಾಂಧಿ ಅವರನ್ನು ಲೋಕಸಭೆ ಸದಸ್ಯತ್ವದಿಂದ ಅನರ್ಹಗೊಳಿಸಿರುವುದನ್ನು ವಿರೋಧಿಸಿ ತಿರುವನಂತಪುರದಲ್ಲಿ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್‌ನ ಮುಖಂಡರು ಮಂಗಳವಾರ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

> **ನಮ್ಮ ಹೋರಾಟವು ರಾಹುಲ್‌ಗಾಗಿ ಅಲ್ಲ; ಪ್ರಜಾಪ್ರಭುತ್ವದ ರಕ್ಷಣೆಗಾಗಿ. ಭ್ರಷ್ಟಾಚಾರದ ವಿರುದ್ಧ ಮತ್ತು ಜನರ ಹಿತಾಸಕ್ತಿ ರಕ್ಷಣೆಯ ಹೋರಾಟ ಮುಂದುವರಿಸುತ್ತೇವೆ**
> **ಅಜಯ್ ಮಾಕನ್,** ಕಾಂಗ್ರೆಸ್ ಮುಖಂಡ

> **ಇದು (ರಾಹುಲ್ ಅನರ್ಹತೆ) ನಮ್ಮ ಆಂತರಿಕ ವಿಚಾರ. 'ಸುಪ್ರೀಂ'ಗಿಂತ ಯಾರೂ ದೊಡ್ಡವರಲ್ಲ. ಅವರು (ಅಮೆರಿಕ) ಸಾರ್ವತ್ರಿಕ ಎನಿಸುವ ಹೇಳಿಕೆ ನೀಡಿದ್ದಾರೆ**
> **ಅನುರಾಗ್ ಠಾಕೂರ್,** ಕೇಂದ್ರ ಸಚಿವ

ಪ್ರಕರಣ ದಾಖಲಿಸಲು ಮುಂದಾದ ಸಾವರ್ಕರ್ ಮೊಮ್ಮಗ


ಮುಂಬೈ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಇನ್ನೊಂದು ಸಂಕಷ್ಟ ಎದುರಾಗಿದೆ. 'ನಾನು ಸಾವರ್ಕರ್ ಅಲ್ಲ, ನನ್ನ ಹೆಸರು ಗಾಂಧಿ, ಗಾಂಧಿ ಯಾವತ್ತೂ ಕ್ಷಮೆ ಕೇಳುವುದಿಲ್ಲ' ಎಂಬ ಹೇಳಿಕೆಗಾಗಿ ಕ್ಷಮೆ ಯಾಚಿಸಬೇಕು ಎಂದು ಸಾವರ್ಕರ್ ಅವರ ಮೊಮ್ಮಗ, ಸ್ವಾತಂತ್ರ್ಯವೀರ ಸಾವರ್ಕರ್ ರಾಷ್ಟ್ರೀಯ ಸ್ಮಾರಕದ ಅಧ್ಯಕ್ಷ ರಂಜಿತ್ ಸಾವರ್ಕರ್ ಹೇಳಿದ್ದಾರೆ.

ಅಂಡಮಾನ್‌ನ ಜೈಲಿನಿಂದ ಹೊರಬರುವುದಕ್ಕಾಗಿ ಸಾವರ್ಕರ್ ಕ್ಷಮೆ ಕೇಳಿದ್ದರು ಎಂಬುದನ್ನು ಸಾಬೀತು ಪಡಿಸುವಂತೆ ರಾಹುಲ್ ಗಾಂಧಿಗೆ ರಂಜಿತ್ ಸಾವರ್ಕರ್ ಅವರು ಸವಾಲೆಸೆದಿದ್ದಾರೆ.

ರಾಹುಲ್ ಕ್ಷಮೆ ಕೇಳುವಂತೆ ಒತ್ತಡ ಹೇರಬೇಕು ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ರಂಜಿತ್ ಕೋರಿದ್ದಾರೆ.

> **ಸಾವರ್ಕರ್‌ಗೆ ಅಪಮಾನ ಸ್ವೀಕಾರಾರ್ಹವಲ್ಲ ಎನ್ನುತ್ತೀರಿ. ಹಾಗಿದ್ದರೆ ಮೈತ್ರಿಕೂಟ ಬಿಡುವುದಿಲ್ಲೇಕೆ? ಈ ವಿಚಾರದಲ್ಲಿ ರಾಹುಲ್ ಫೋಟೊಕ್ಕೆ ಬಾರಿಸುವ ಧೈರ್ಯ ತೋರುವಂತೆ ಉದ್ಧವ್‌ಗೆ ಸವಾಲೆಸೆಯುತ್ತೇನೆ**
> **ಚಂದ್ರಶೇಖರ್ ಭವಂಕುಲೆ,** ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ

ಕಲಾಪಕ್ಕೆ ಕುತ್ತು



- ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಮಂಗಳವಾರವೂ ಯಾವುದೇ ಕಲಾಪ ನಡೆಯಲಿಲ್ಲ. ಎರಡೂ ಸದನಗಳನ್ನು ಬುಧವಾರಕ್ಕೆ ಮುಂದೂಡಲಾಗಿದೆ
- ಮಹಾರಾಷ್ಟ್ರದ ಮಹಾ ವಿಕಾಸ ಆಘಾಡಿ ಮೈತ್ರಿಕೂಟದಲ್ಲಿ ಸಾವರ್ಕರ್ ವಿರುದ್ಧದ ಟೀಕೆಯ ಕಾರಣದಿಂದ ಅತೃಪ್ತಿ ಕಾಣಿಸಿಕೊಂಡಿದೆ. ಹಾಗಾಗಿ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆದಿದೆ. ಹೀಗಾಗಿ, ಟೀಕೆಯ ತೀವ್ರತೆ ಕಡಿಮೆಗೊಳಿಸಲು ಕಾಂಗ್ರೆಸ್ ನಿರ್ಧರಿಸಿದೆ ಎನ್ನಲಾಗಿದೆ
- ಸದಸ್ಯತ್ವದಿಂದ ರಾಹುಲ್ ಅನರ್ಹತೆಯಿಂದಾಗಿ ವಿರೋಧ ಪಕ್ಷಗಳ ಒಗ್ಗಟ್ಟಿಗೆ ವೇದಿಕೆ ಸಿದ್ಧವಾಗಿದೆ. ಇದು ಸುಸ್ಥಿರವಾದ ಸಹಕಾರಯುಗದ ಆರಂಭ. ರಾಹುಲ್ ಅವರು ನ್ಯಾಯಾಂಗ ಪ್ರಕ್ರಿಯೆ ಮೂಲಕ ಸಂಸತ್ತಿಗೆ ಶೀಘ್ರವೇ ಬರಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಸಲ್ಮಾನ್ ಖುರ್ಷಿದ್ ಹೇಳಿದ್ದಾರೆ

ಸ್ಮೃತಿ ಕುರಿತು ಹೇಳಿಕೆ: ಬಿಜೆಪಿ–ಕಾಂಗ್ರೆಸ್ ಜಟಾಪಟಿ

ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಬಿ.ವಿ. ಅವರು ಆಡಿದ ಮಾತೊಂದರ ಕುರಿತು ಕೇಂದ್ರ ಸಚಿವೆ ಸ್ಮೃತಿ ಇರಾನಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಹುಲ್ ಅವರ ಮಾತು ಶ್ರೀನಿವಾಸ್ ಬಾಯಿಯಲ್ಲಿ ಬಂದಿದೆ. ಇದು ಸೋನಿಯಾ ಗಾಂಧಿ ಅವರ ಸಂಸ್ಕಾರ ಎಂದು ಸ್ಮೃತಿ ಆರೋಪಿಸಿದ್ದಾರೆ.

ಸೋನಿಯಾ ಮತ್ತು ರಾಹುಲ್ ಗಾಂಧಿ ಅವರು ಪಕ್ಷದಲ್ಲಿ ಇರುವವರೆಗೆ, ಬಡ್ತಿ ಬೇಕಿರುವವರು ತಮ್ಮ ವಿರುದ್ಧ ಇಂತಹ ಹೇಳಿಕೆಗಳನ್ನು ನೀಡುತ್ತಿರುತ್ತಾರೆ ಎಂದು ಸ್ಮೃತಿ ಹೇಳಿದ್ದಾರೆ.

ಶ್ರೀನಿವಾಸ್ ಅವರ ಹೇಳಿಕೆಯನ್ನು ಬಿಜೆಪಿ ಸೋಮವಾರವೇ ಖಂಡಿಸಿತ್ತು. ಕಾಂಗ್ರೆಸ್ ಪಕ್ಷವು ಸ್ತ್ರೀದ್ವೇಷದ ಬಚ್ಚಲುಗುಂಡಿಯಾಗಿದೆ ಎಂದು ಬಿಜೆಪಿ ಹೇಳಿತ್ತು.


'ಬಿಜೆಪಿ ಎಂದರೆ, ಹಣದುಬ್ಬರ. ಹಣದುಬ್ಬರದ ಮಾಟಗಾತಿಯನ್ನು ಇರಿಸಿಕೊಳ್ಳಲಾಗಿದೆ ಎಂದು 2014ರಲ್ಲಿ ಇದೇ ಜನಗಳು ಹೇಳುತ್ತಿದ್ದರು.... ಸ್ಮೃತಿ ಅವರು ಸ್ವಲ್ಪ ಮೂಕಿ ಮತ್ತು ಸ್ವಲ್ಪ ಕಿವುಡಿ. ಆ ಮಾಟಗಾತಿ... ಹಣದುಬ್ಬರದ ಮಾಟಗಾತಿಯನ್ನು ಪ್ರಿಯೆಯನ್ನಾಗಿ ಮಾಡಿ ಮಲಗುವ ಕೋಣೆಯಲ್ಲಿಯೇ ಕೂರಿಸಲಾಗಿದೆ' ಎಂದು ಶ್ರೀನಿವಾಸ್ ಹೇಳಿದ್ದಾರೆ ಎಂಬುದನ್ನು ಬಿಂಬಿಸುವ ವಿಡಿಯೊಗಳು ಇವೆ. ಕಾಂಗ್ರೆಸ್‌ನ 'ಸಂಕಲ್ಪ ಸತ್ಯಾಗ್ರಹ'ದಲ್ಲಿ ಶ್ರೀನಿವಾಸ್ ಮಾತನಾಡಿದ್ದರು ಎನ್ನಲಾಗಿದೆ.

ಸ್ಮೃತಿ ಹೇಳಿಕೆಗೆ ಕಾಂಗ್ರೆಸ್ ಮಂಗಳವಾರ ತಿರುಗೇಟು ನೀಡಿದೆ. ಅವರು ಉಲ್ಲೇಖಿಸಿದ ಮಾತುಗಳನ್ನು ಆಡಿದವರು ಪ್ರಧಾನಿ ನರೇಂದ್ರ ಮೋದಿ ಎಂದು ಹೇಳಿದೆ. ಇದು ಆರ್‌ಎಸ್‌ಎಸ್ ಸಂಸ್ಕಾರ ಎಂದಿದೆ.

ಶ್ರೀನಿವಾಸ್ ಅವರ ತಿರುಚಿದ ವಿಡಿಯೊವನ್ನು ಬಿಜೆಪಿ ಹರಿಬಿಟ್ಟಿದೆ. ಕಾಂಗ್ರೆಸ್ ಪಕ್ಷ ಮತ್ತು ಶ್ರೀನಿವಾಸ್ ಅವರ ವರ್ಚಸ್ಸಿಗೆ ಮಸಿ ಬಳಿಯುವುದು ಅವರ ಉದ್ದೇಶ. ಇದು ಸುಳ್ಳು ಸುದ್ದಿ ಹರಡುವಿಕೆ ಎಂದು ಯುವ ಕಾಂಗ್ರೆಸ್ ಘಟಕವು ಸೋಮವಾರವೇ ಹೇಳಿತ್ತು.

ಯುಪಿಎ ಅಧಿಕಾರದಲ್ಲಿ ಇದ್ದಾಗ ಹಣದುಬ್ಬರ ಮತ್ತು ದರ ಏರಿಕೆ ಕುರಿತು ಬಿಜೆಪಿ ಮುಖಂಡರು ಹೇಗೆ ಮಾತನಾಡಿದ್ದರು ಎಂಬುದನ್ನು ಶ್ರೀನಿವಾಸ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದರು ಎಂದು ಯುವ ಕಾಂಗ್ರೆಸ್ ಪ್ರತಿಪಾದಿಸಿದೆ.

ಸದಸ್ಯತ್ವ ಮರುಸ್ಥಾಪನೆಯಲ್ಲಿ ವಿಳಂಬ: 'ಸುಪ್ರೀಂ' ವಿಚಾರಣೆ



ನವದೆಹಲಿ: 'ನನ್ನ ಲೋಕಸಭಾ ಸದಸ್ಯತ್ವವನ್ನು ಮರುಸ್ಥಾಪಿಸಲು ಲೋಕಸಭೆಯ ಕಾರ್ಯದರ್ಶಿ ವಿಳಂಬ ಮಾಡುತ್ತಿದ್ದಾರೆ. ಆದ್ದರಿಂದ ನನ್ನ ಸದಸ್ಯತ್ವವನ್ನು ಮರುಸ್ಥಾಪಿಸಲು ನಿರ್ದೇಶಿಸಬೇಕು' ಎಂದು ಕೋರಿ ಲಕ್ಷದ್ವೀಪದ ಅನರ್ಹ ಸಂಸದ ಮೊಹಮ್ಮದ್ ಫೈಝಲ್ ಪಿ.ಪಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಆರಂಭಿಸಿದೆ.

'ನನ್ನ ಸದಸ್ಯತ್ವ ಮರುಸ್ಥಾಪನೆ ಆಗಿಲ್ಲ. ಈ ಮೂಲಕ ನನ್ನ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ' ಎಂದು ಫೈಝಲ್ ಪರ ವಕೀಲ ಕೆ. ಆರ್. ಸಸಿಪ್ರಭು ಅವರು ವಾದಿಸಿದರು.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ. ನಾಗರತ್ನ ಅವರಿದ್ದ ಪೀಠವು, 'ಯಾವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ' ಎಂದು ಪ್ರಶ್ನಿಸಿತು.

'ಕ್ಷೇತ್ರವನ್ನು ಪ್ರತಿನಿಧಿಸುವ ಹಕ್ಕನ್ನು ಉಲ್ಲಂಘಿಸಲಾಗಿದೆ' ಎಂದು ವಕೀಲರು ಹೇಳಿದರು. ನಂತರ, 'ಈ ಕುರಿತು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ' ಎಂದು ಸುಪ್ರೀಂ ಕೋರ್ಟ್ ಸೂಚಿಸಿತು.

ನ್ಯಾಯಾಲಯವು ಹೀಗೆ ಹೇಳುತ್ತಿದ್ದಂತೆಯೇ ಫೈಝಲ್ ಅವರ ಪರ ವಕೀಲರು ಕೆಲವು ಅಂಶಗಳನ್ನು ನ್ಯಾಯಾಲಯದ ಗಮನಕ್ಕೆ ತಂದರು. 'ಕೊಲೆ ಪ್ರಕರಣವೊಂದರಲ್ಲಿ 10 ವರ್ಷ ಜೈಲು ಶಿಕ್ಷೆ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು. ಈ ತಡೆಯನ್ನು ಪ್ರಶ್ನಿಸಿ ಕೇಂದ್ರಾಡಳಿತ ಪ್ರದೇಶದ ಆಡಳಿತವು ಸಲ್ಲಿಸಿದ್ದ ಅರ್ಜಿಯು ಸುಪ್ರೀಂ ಕೋರ್ಟ್‌ನಲ್ಲಿಯೇ ಇದೆ' ಎಂದು ಹೇಳಿದರು. ಈ ಬಳಿಕ ನ್ಯಾಯಾಲಯವು, ಅರ್ಜಿಯ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡುವುದಾಗಿ ಹೇಳಿತು.

'ಸದಸ್ಯತ್ವವನ್ನು ಮರುಸ್ಥಾಪಿಸುವ ಸಂಬಂಧ ಏಳು ಬಾರಿ ಪತ್ರ ಬರೆಯಲಾಗಿದೆ. ಆದರೆ, ಲೋಕಸಭಾ ಕಾರ್ಯದರ್ಶಿಯು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು.

'ಕೈ' ಸಂಸದರೆಲ್ಲರ ರಾಜೀನಾಮೆ?

ಒಂದನೇ ಪುಟದಿಂದ...

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಭಾಗವಹಿಸಿದ್ದರು.

ಸಂಸದೀಯ ಪಕ್ಷದ ಸಭೆಯಲ್ಲಿ ಈ ವಿಚಾರ ಇನ್ನೂ ಚರ್ಚೆಗೆ ಬಂದಿಲ್ಲ ಎಂದು ಪ್ರಧಾನ ಕಾರ್ಯದರ್ಶಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. ಈ ವಿಚಾರದ ಚರ್ಚೆ ಶೀಘ್ರದಲ್ಲಿಯೇ ನಡೆಯುವ ಸಂಭವವೂ ಇಲ್ಲ ಎಂದು ಅವರು ಹೇಳಿದ್ದಾರೆ. ಸಾಮೂಹಿಕ ರಾಜೀನಾಮೆಯ ವಿಚಾರವು ಕಾಂಗ್ರೆಸ್‌ನ 10ಕ್ಕೂ ಹೆಚ್ಚು ಸಂಸದರು ನಡೆಸಿದ ಅನೌಪಚಾರಿಕ ಸಭೆಯಲ್ಲಿ ಮುನ್ನೆಲೆಗೆ ಬಂದಿದೆ. ಬಳಿಕ ಅದಕ್ಕೆ ಒಂದಷ್ಟು ಬೆಂಬಲವೂ ವ್ಯಕ್ತವಾಗಿದೆ.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಸದಸ್ಯರು ಸೋಮವಾರ ಮತ್ತು ಮಂಗಳವಾರ ಸಭೆ ನಡೆಸಿದ್ದಾರೆ. ಆದರೆ, ಸಾಮೂಹಿಕ ರಾಜೀನಾಮೆ ವಿಚಾರವು ಚರ್ಚೆಗೆ ಬಂದಿಲ್ಲ. ಸಾಮೂಹಿಕ ರಾಜೀನಾಮೆಯು ರಾಜಕೀಯವಾಗಿ ಚಾತುರ್ಯದ ನಡೆ ಅಲ್ಲ ಎಂದು ಪಕ್ಷದ ನಾಯಕತ್ವವು ಹೇಳಿದೆ ಎನ್ನಲಾಗಿದೆ.

ರಾಹುಲ್ ಅವರಿಗೆ ಬೆಂಬಲವಾಗಿ ಸಂಸತ್ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದೇವೆ. ಆದರೆ, ಈ ದಿಸೆಯಲ್ಲಿ ಒತ್ತಡ ಹೆಚ್ಚಿಸಿದರೆ ಪಕ್ಷಕ್ಕೆ ಮುಜುಗರವಾಗಬಹುದು ಎಂದು ಪಕ್ಷದ ನಾಯಕರು ಹೇಳಿದ್ದಾರೆ ಎಂದು ಆ ಸಂಸದ ತಿಳಿಸಿದ್ದಾರೆ.

ಗಾಂಧಿ ಕುಟುಂಬದವರು ಹಿನ್ನೆಲೆಗೆ ಸರಿದಿರುವ ಕಾರಣ ಭಿನ್ನಮತ ಕಾಣಿಸಿಕೊಂಡಿದೆ ಮತ್ತು ಉತ್ತರದಾಯಿತ್ವದ ಕೊರತೆ ಇದಕ್ಕೆ ಕಾರಣ ಎಂದು ರಾಹುಲ್ ಅವರಿಗೆ ಆಪ್ತರಾಗಿರುವ ಸಂಸದರೊಬ್ಬರು ಹೇಳಿದ್ದಾರೆ. 'ಪಕ್ಷದ ವ್ಯವಹಾರಗಳಲ್ಲಿ ರಾಹುಲ್ ಅವರು ನೇರವಾಗಿ ಭಾಗಿಯಾಗದೇ ಇದ್ದರೆ ಹೆಚ್ಚಿನ ಚಟುವಟಿಕೆ ಕಷ್ಟ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ರಾಜ್‌ಘಾಟ್‌ನಲ್ಲಿ ನಡೆದ ಸಂಕಲ್ಪ ಸತ್ಯಾಗ್ರಹದಲ್ಲಿ ಕಾರ್ಯಕರ್ತರ ಸಂಖ್ಯೆ ಕಡಿಮೆ ಇದ್ದುದಕ್ಕೂ ಇದೇ ಕಾರಣ ಎಂದು ಅವರು ಹೇಳಿದ್ದಾರೆ. ರಾಜ್‌ಘಾಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 500ಕ್ಕೂ ಕಡಿಮೆ ಜನರಿದ್ದರು.

8ನೇ ಪರಿಚ್ಛೇದಕ್ಕೆ ತುಳು, ಬಂಜಾರ ಭಾಷೆ ಸೇರ್ಪಡೆ ಬೇಡಿಕೆ

'ನಿಗದಿತ ಮಾನದಂಡಗಳಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಸೇರಿದಂತೆ ಹಲವು ಭಾಷೆಗಳ ಸೇರ್ಪಡೆಗೆ ಬೇಡಿಕೆ ಇದೆ. ಆದರೂ, ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಯಾವುದೇ ಭಾಷೆಯನ್ನು ಪರಿಗಣಿಸಲು ನಿಗದಿತ ಮಾನದಂಡಗಳಿಲ್ಲ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಲೋಕಸಭೆಗೆ ಮಂಗಳವಾರ ತಿಳಿಸಿದರು.

ತುಳು ಹಾಗೂ ಬಂಜಾರ ಭಾಷೆಗಳನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಕಲಬುರ್ಗಿಯ ಬಿಜೆಪಿ ಸಂಸದ ಡಾ. ಉಮೇಶ ಜಾಧವ್ ಕೇಳಿರುವ ಪ್ರಶ್ನೆಗೆ ಮಂಗಳವಾರ ಲಿಖಿತ ಉತ್ತರ ನೀಡಿರುವ ಸಚಿವರು, 'ಎಂಟನೇ ಪರಿಚ್ಛೇದಕ್ಕೆ ಭಾಷೆಗಳ ಸೇರ್ಪಡೆಗೆ ಕಾಲ ಕಾಲಕ್ಕೆ ಬೇಡಿಕೆಗಳು ಬಂದಿವೆ' ಎಂದಿದ್ದಾರೆ.

'ಸಂಸ್ಕೃತ-ಅಧಿಕೃತ ಭಾಷೆಯನ್ನಾಗಿಸುವ ಪ್ರಸ್ತಾವ ಇಲ್ಲ': 'ಸಂಸ್ಕೃತವನ್ನು ಸಂವಹನ ಮತ್ತು ಅಧಿಕೃತ ಭಾಷೆಯನ್ನಾಗಿ ಮಾಡುವ ಯಾವುದೇ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿಲ್ಲ' ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ ಲೋಕಸಭೆಯಲ್ಲಿ ಮಂಗಳವಾರ ತಿಳಿಸಿದ್ದಾರೆ.

ಬಿಜೆಪಿ ಸದಸ್ಯ ಸುಬ್ರತ್ ಪಾಠಕ್ ಅವರು, 'ಹಿಂದಿ ಭಾಷೆಯ ಜೊತೆಗೆ ಸಂಸ್ಕೃತವನ್ನೂ ಸಂವಹನ ಮತ್ತು ಅಧಿಕೃತ ಭಾಷೆಯನ್ನಾಗಿ ಮಾಡಲು ಸರ್ಕಾರ ಚಿಂತಿಸುತ್ತಿದೆಯೇ' ಎಂದು ಕೇಳಿದ ಪ್ರಶ್ನೆಗೆ ಮಿಶ್ರಾ ಅವರು ನೀಡಿರುವ ಲಿಖಿತ ಉತ್ತರದಲ್ಲಿ ಈ ವಿಷಯ ತಿಳಿಸಿದ್ದಾರೆ.

ಸಂಸತ್ತು ಅಧಿವೇಶನ

ಸ್ವಾಮಿತ್ವ: 3,223 ಹಳ್ಳಿಗಳಲ್ಲಿ ಆಸ್ತಿಗಳ ಸಮೀಕ್ಷೆ

ನವದೆಹಲಿ: ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆಯಡಿ ಕರ್ನಾಟಕದ 3,223 ಹಳ್ಳಿಗಳಲ್ಲಿ ಈ ವರೆಗೆ ಡ್ರೋನ್ ಮೂಲಕ ಆಸ್ತಿಗಳ ಸಮೀಕ್ಷೆ ನಡೆಸಲಾಗಿದೆ ಎಂದು ಕೇಂದ್ರ ಪಂಚಾಯತ್‌ರಾಜ್ ಸಚಿವ ಗಿರಿರಾಜ್ ಸಿಂಗ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರ ಪ್ರಶ್ನೆಗೆ ಮಂಗಳವಾರ ಲಿಖಿತ ಉತ್ತರ ನೀಡಿರುವ ಅವರು, 'ಕೇಂದ್ರ ಪಂಚಾಯತ್‌ರಾಜ್, ರಾಜ್ಯ ಕಂದಾಯ, ರಾಜ್ಯ ಪಂಚಾಯತ್‌ರಾಜ್ ಇಲಾಖೆ ಹಾಗೂ ಸರ್ವೆ ಆಫ್ ಇಂಡಿಯಾದ ಸಹಯೋಗದಲ್ಲಿ ತಂತ್ರಜ್ಞಾನದ ನೆರವಿನಿಂದ ಆಸ್ತಿಗಳ ಸಮೀಕ್ಷೆ ನಡೆಸಲಾಗುತ್ತಿದೆ. ಈ ಯೋಜನೆಯ ಅನುಷ್ಠಾನಕ್ಕೆ 31 ರಾಜ್ಯಗಳ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಕರ್ನಾಟಕದ ಎಲ್ಲ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ 2025ರೊಳಗೆ ಸಮೀಕ್ಷೆ ನಡೆಸುವ ಗುರಿ ಇರಿಸಿಕೊಳ್ಳಲಾಗಿದೆ. ಈ ಯೋಜನೆಗೆ 2020ರಿಂದ 2025ರ ವರೆಗೆ ₹566 ಕೋಟಿ ಮೀಸಲಿಡಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ದೆಹಲಿಯ ಮಾರುಕಟ್ಟೆಯೊಂದರಲ್ಲಿ ನಡೆದು ಹೋಗುತ್ತಿರುವಾಗ ಸಿಸಿಟಿವಿ ದೃಶ್ಯದಲ್ಲಿ ಸೆರೆ

ಸಿಖ್ ಪೇಟ ಇಲ್ಲದೆ ಅಮೃತ್‌ಪಾಲ್ ಪ್ರತ್ಯಕ್ಷ

ಚಂಡೀಗಢ (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತಪಾಲ್ ಸಿಂಗ್ ಮತ್ತು ಆತನ ಸಹಾಯಕ ಪಾಪಲ್‌ಪ್ರೀತ್ ಸಿಂಗ್ ಜತೆಗಿರುವ ವಿಡಿಯೊವೊಂದು ಮಂಗಳವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಸಿಖ್ ಪೇಟ ತೊಡದ ಹಾಗೂ ಮಾಸ್ಕ್ ಧರಿಸಿರುವ ಅಮೃತ್‌ಪಾಲ್, ಸಿ.ಸಿ.ಟಿ.ವಿ ದೃಶ್ಯಾವಳಿಯಲ್ಲಿ ಕಾಣಿಸಿಕೊಂಡಿದ್ದಾರೆ.


ಅಮೃತಪಾಲ್ ಸಿಂಗ್

ದಿನಾಂಕ ನಮೂದಾಗದ ಸಿಸಿಟಿವಿಯ ದೃಶ್ಯವೊಂದರಲ್ಲಿ ಅಮೃತ್‌ಪಾಲ್, ಕಣ್ಣಿಗೆ ತಂಪು ಕನ್ನಡಕ ಹಾಕಿಕೊಂಡು ದೆಹಲಿಯ ಮಾರುಕಟ್ಟೆಯೊಂದರಲ್ಲಿ ನಡೆದುಕೊಂಡು ಹೋಗುತ್ತಿದ್ದು, ಹೆಗಲಿಗೆ ಬ್ಯಾಗ್ ಹಾಕಿಕೊಂಡಿರುವ ಪಾಪಲ್‌ಪ್ರೀತ್ ಆತನನ್ನು ಹಿಂಬಾಲಿಸುತ್ತಿರುವ ದೃಶ್ಯ ಸೆರೆಯಾಗಿದೆ.

ಈ ಕುರಿತು ಪಂಜಾಬ್ ಪೊಲೀಸಲು ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಅಮೃತ್‌ಪಾಲ್ ಮತ್ತು ಪಾಪಲ್ ಪ್ರೀತ್ ಅವರ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರವಾದ ಒಂದು ದಿನದ ಬಳಿಕ ಹೊಸ ವಿಡಿಯೊ ಬೆಳಕಿಗೆ ಬಂದಿದೆ. ಈ ವಿಡಿಯೊದಲ್ಲಿ ಇಬ್ಬರೂ ಆರಾಮವಾಗಿ ನಡೆದುಕೊಂಡು ಹೋಗುತ್ತಿದ್ದಾರೆ. ಅಮೃತ್‌ಪಾಲ್ ಕೈಯಲ್ಲಿ ಪಾನೀಯದ ಡಬ್ಬಿಯೊಂದನ್ನು ಹಿಡಿದಿರುವುದೂ ಕಾಣಿಸುತ್ತದೆ.

ಪಾಪಲ್‌ಪ್ರೀತ್, ಅಮೃತ್‌ಪಾಲ್ ಸಿಂಗ್‌ನ ಮಾರ್ಗದರ್ಶಕ ಎನ್ನಲಾಗುತ್ತಿದ್ದು, ಈತ ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಐಎಸ್‌ಐ ಜತೆಗೆ ನಂಟು ಹೊಂದಿದ್ದ ಎನ್ನುವ ಆರೋಪವಿದೆ.

'ವಾರಿಸ್ ಪಂಜಾಬ್ ದೇ' ಸಂಘಟನೆಯ ಮುಖ್ಯಸ್ಥನಾಗಿರುವ ಅಮೃತ್‌ಪಾಲ್ ಮತ್ತು ಆತನ ಸಹಚರರಿಗಾಗಿ ಪಂಜಾಬ್ ಪೊಲೀಸರು ಮಾರ್ಚ್ 18ರಿಂದ ಹುಡುಕಾಟ ನಡೆಸುತ್ತಿದ್ದಾರೆ.

ತೀವ್ರ ಹುಡುಕಾಟದ ಪ್ರಯತ್ನದ ನಡುವೆಯೇ ಜಲಂಧರ್‌ನಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳುವಲ್ಲಿ ಅಮೃತ್‌ಪಾಲ್ ಯಶಸ್ವಿಯಾಗಿದ್ದ. ಹಲವು ಬಾರಿ ತನ್ನ ವೇಷಭೂಷಣ ಬದಲಾಯಿಸಿಕೊಂಡ ವಿವಿಧ ವಾಹನಗಳಲ್ಲಿ ಆತ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾರ್ಚ್ 19ರಂದು ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಶಹಾಬಾದ್‌ನಲ್ಲಿ ಮಹಿಳೆಯೊಬ್ಬರು ತಮ್ಮ ಮನೆಯಲ್ಲಿ ಅಮೃತ್‌ಪಾಲ್ ಹಾಗೂ ಪಾಪಲ್ ಪ್ರೀತ್‌ಗೆ ಆಶ್ರಯ ನೀಡಿದ್ದರು. ಮಾರ್ಚ್ 25ರಂದು ಅಮೃತ್‌ಪಾಲ್ ಮೊಬೈಲ್‌ನಲ್ಲಿ ಮಾತನಾಡುತ್ತಿರುವ ವಿಡಿಯೊವೊಂದು ಬಿತ್ತರವಾಗಿತ್ತು ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

ಬಂಧಿತ ವ್ಯಕ್ತಿಯೊಬ್ಬರ ಬಿಡುಗಡೆಗಾಗಿ ಅಮೃತ್‌ಪಾಲ್ ಮತ್ತು ಆತನ ಬೆಂಬಲಿಗರು ಅಮೃತಸರ ಬಳಿಯ ಅಜ್ನಾಲಾ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದರು. ಈ ವೇಳೆ ನಡೆದ ಘರ್ಷಣೆಯಲ್ಲಿ ಆರು ಮಂದಿ ಪೊಲೀಸರು ಗಾಯಗೊಂಡಿದ್ದರು.

ಅಮೃತ್‌ಪಾಲ್ ಸಿಂಗ್ ಬಂಧನಕ್ಕೆ ಕ್ರಮ: ಪಂಜಾಬ್

ಚಂಡೀಗಢ: 'ಅಮೃತ್‌ಪಾಲ್ ಸಿಂಗ್ ಬಂಧನಕ್ಕಾಗಿ ಹಲವು ತನಿಖಾ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ' ಎಂದು ಪಂಜಾಬ್ ಸರ್ಕಾರವು, ಇಲ್ಲಿನ ಹೈಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ವಕೀಲ ಇಮಾನ್ ಸಿಂಗ್ ಖಾರಾ ಅವರು ಸಲ್ಲಿಸಿದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಮಂಗಳವಾರ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ವಿಚಾರಣೆ ನಡೆಸಿತು. ಅಮೃತ್‌ಪಾಲ್ ಸಿಂಗ್ ಅವರು ಪೊಲೀಸರ ಅಕ್ರಮ ಬಂಧನದಲ್ಲಿದ್ದಾರೆ ಎಂದು ಖಾರಾ ಅರ್ಜಿಯಲ್ಲಿ ಆರೋಪಿಸಿದ್ದಾರೆ.

ಪಂಜಾಬ್ ಅಡ್ವೊಕೇಟ್ ಜನರಲ್ ವಿನೋದ್ ಘಾಯ್ ಅವರು, 'ಅಮೃತ್‌ಪಾಲ್ ಸಿಂಗ್ ಅವರನ್ನು ಇನ್ನೂ ಬಂಧಿಸಲಾಗಿಲ್ಲ ಮತ್ತು ಅವರ ಬಂಧನಕ್ಕಾಗಿ ತನಿಖಾ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ' ಎಂದು ನ್ಯಾಯಾಲಯಕ್ಕೆ ಮಾಹಿತಿ ನೀಡಿದರು.

ಬಳಿಕ ಅರ್ಜಿದಾರ ಖಾರಾ ಸುದ್ದಿಗಾರರದೊಂದಿಗೆ ಮಾತನಾಡಿ, 'ಅಮೃತ್‌ಪಾಲ್ ಸಿಂಗ್ ಅವರನ್ನು ಶೀಘ್ರದಲ್ಲೇ ಬಂಧಿಸಲಾಗುವುದು ಎಂದು ಅಡ್ವೊಕೇಟ್ ಜನರಲ್ ಅವರು ನ್ಯಾಯಾಲಯದಲ್ಲಿ ಹೇಳಿದ್ದಾರೆ' ಎಂದು ತಿಳಿಸಿದರು.

ನ್ಯಾಯಮೂರ್ತಿ ಎನ್.ಎಸ್. ಶೇಖಾವತ್ ಅವರು, 'ಅಮೃತ್‌ಪಾಲ್ ಸಿಂಗ್ ಅವರನ್ನು ಇನ್ನೂ ಬಂಧಿಸಿಲ್ಲ ಎಂದು ಪಂಜಾಬ್ ಸರ್ಕಾರ ತಿಳಿಸಿದೆ. ಅವರು ಪೊಲೀಸರ ಅಕ್ರಮ ಬಂಧನದಲ್ಲಿದ್ದಾರೆ ಎಂದು ಸಾಬೀತುಪಡಿಸಲು ಸಾಕ್ಷ್ಯವನ್ನು ಒದಗಿಸಿದಲ್ಲಿ ವಾರಂಟ್ ಅಧಿಕಾರಿಯನ್ನು ನೇಮಿಸಲಾಗುವುದು' ಎಂದು ಅರ್ಜಿದಾರ ಇಮಾನ್ ಸಿಂಗ್ ಖಾರಾ ಅವರಿಗೆ ಸೂಚಿಸಿದರು.

ಮಾರ್ಚ್ 21ರಂದು ಅಮೃತ್‌ಪಾಲ್ ಸಿಂಗ್ ಪೊಲೀಸರಿಂದ ತಪ್ಪಿಸಿಕೊಂಡಿದ್ದು, ಇದರಲ್ಲಿ ಗುಪ್ತಚರ ಇಲಾಖೆಯ ವೈಫಲ್ಯವಿದೆ ಎಂದು ಪಂಜಾಬ್ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತು.

ಪ್ರಕರಣದ ಮುಂದಿನ ವಿಚಾರಣೆಯನ್ನು ಮಾರ್ಚ್ 29ರಂದು ನಡೆಸಲಾಗವುದು ಎಂದೂ ನ್ಯಾಯಾಲಯವು ತಿಳಿಸಿತು.

ರಾಮೋಜಿ ರಾವ್, ಶೈಲಜಾಗೆ ಆಂಧ್ರ ಸಿಐಡಿ ಸಮನ್ಸ್

ಅಮರಾವತಿ (ಪಿಟಿಐ): ಮಾರ್ಗದರ್ಶಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ರಾಮೋಜಿ ರಾವ್ ಮತ್ತು ಅವರ ಸೊಸೆ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಚೆರುಕುರಿ ಶೈಲಜಾ ಹಾಗೂ ಉನ್ನತ ಅಧಿಕಾರಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ಆಂಧ್ರ ಪ್ರದೇಶದ ಸಿಐಡಿ, ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ತನಿಖೆಗೆ ಸಿಐಡಿ ಅಧಿಕಾರಿಗಳು ನಾಲ್ಕು ದಿನಗಳ ಆಯ್ಕೆಯನ್ನು ನೀಡಿದ್ದು, ಬುಧವಾರ, ಶುಕ್ರವಾರ, ಸೋಮವಾರ ಅಥವಾ ಮಂಗಳವಾರದಂದು ಹಾಜರಾಗುವಂತೆ ಸೂಚಿಸಿದ್ದಾರೆ.

'ಪ್ರಕರಣದ ಸತ್ಯಾಸತ್ಯತೆ ಗಮನದಲ್ಲಿಟ್ಟುಕೊಂಡು, ಪರಿಣಾಮಕಾರಿ ತನಿಖೆಗಾಗಿ ಮತ್ತು ಉತ್ತಮ ನಿರ್ಣಯಕ್ಕೆ ಬರಲು ನಿಮ್ಮ ವಿಚಾರಣೆಯ ಅಗತ್ಯವಿದೆ ಎಂದು ಭಾವಿಸುತ್ತೇನೆ' ಎಂದು ಡಿವೈಎಸ್‌ಪಿ ಶ್ರೇಣಿಯ ಸಿಐಡಿ ಅಧಿಕಾರಿ ನೀಡಿರುವ ಸಮನ್ಸ್‌ನಲ್ಲಿ ತಿಳಿಸಲಾಗಿದೆ.

ಐಪಿಸಿ ಸೆಕ್ಷನ್ 420, 120 - ಬಿ, 477 (ಎ), ಸೆಕ್ಷನ್ 34 ಮತ್ತು ಆಂಧ್ರ ಪ್ರದೇಶ ಠೇವಣಿದಾರರ ಹಣಕಾಸು ಹಿತರಕ್ಷಣಾ ಕಾಯಿದೆ, 1999ರ ಸೆಕ್ಷನ್ 5ರ ಅಡಿಯಲ್ಲಿ ದಾಖಲಿಸಲಾದ ಪ್ರಕರಣಗಳನ್ನು ಉಲ್ಲೇಖಿಸಿ ತನಿಖೆಗೆ ಸಹಕರಿಸುವಂತೆ ರಾಮೋಜಿ ರಾವ್ ಮತ್ತು ಶೈಲಜಾ ಅವರನ್ನು ವಿನಂತಿಸಿರುವ ಅಧಿಕಾರಿ, ಅವರಿಗೆ ಅನುಕೂಲಕರವಾದ ದಿನಾಂಕವನ್ನು ತಿಳಿಸಲು ಕೇಳಿದ್ದಾರೆ.

ಸಿಐಡಿ ಪೊಲೀಸ್ ಠಾಣೆಯಲ್ಲಿ, ಚಿಟ್ ಫಂಡ್ ಕಾಯಿದೆ–1982ರ ಸೆಕ್ಷನ್ 76 ಮತ್ತು 79ರ ಅಡಿಯಲ್ಲಿ ದಾಖಲಿಸಲಾದ ಪ್ರಕರಣಗಳನ್ನು ಸಹ ಅಧಿಕಾರಿ ಉಲ್ಲೇಖಿಸಿದ್ದಾರೆ.

ಇತ್ತೀಚೆಗೆ, ಸಿಐಡಿಯು ಕಂಪನಿಯ ಕೆಲವು ಉದ್ಯೋಗಿಗಳನ್ನು ಬಂಧಿಸಿತ್ತು. ವೈಯಕ್ತಿಕ ಲಾಭಕ್ಕಾಗಿ ಠೇವಣಿದಾರರ ಹಣವನ್ನು ಮ್ಯೂಚುವಲ್ ಫಂಡ್‌ಗಳು ಮತ್ತು ಷೇರು ಮಾರುಕಟ್ಟೆಗಳಿಗೆ ತಿರುಗಿಸುವುದು ಸೇರಿದಂತೆ ಹಲವು ಅಕ್ರಮಗಳ ಆರೋಪದಲ್ಲಿ ಮಾರ್ಗದರ್ಶಿ ವಿರುದ್ಧ ಅನೇಕ ಎಫ್‌ಐಆರ್‌ಗಳನ್ನು ದಾಖಲಿಸಿತ್ತು.

ಸಂಕ್ಷಿಪ್ತ ಸುದ್ದಿಗಳು

ಜಾಮಿಯಾ ನಗರ ಹಿಂಸಾಚಾರ: 11 ಮಂದಿ ಬಿಡುಗಡೆಗೆ ಭಾಗಶಃ ತಡೆ

ನವದೆಹಲಿ: 2019ರ ಜಾಮಿಯಾ ನಗರ ಹಿಂಸಾಚಾರ ಪ್ರಕರಣದಲ್ಲಿ ಜೆಎನ್‌ಯು ವಿದ್ಯಾರ್ಥಿ ಶಾರ್ಜೀಲ್ ಇಮಾಮ್, ಸಾಮಾಜಿಕ ಕಾರ್ಯಕರ್ತರಾದ ಆಸಿಫ್ ಇಕ್ಬಾಲ್ ತನ್ಹಾ ಮತ್ತು ಸಫೂರಾ ಜರ್ಗರ್ ಸೇರಿದಂತೆ ಒಟ್ಟು 11 ಜನರ ಬಿಡುಗಡೆಗೆ ಹೊರಡಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ದೆಹಲಿ ಹೈಕೋರ್ಟ್ ಮಂಗಳವಾರ ಭಾಗಶಃ ರದ್ದುಗೊಳಿಸಿದೆ.

ವಿಚಾರಣಾ ನ್ಯಾಯಾಲಯವು ಫೆಬ್ರವರಿ 4ರ ತನ್ನ ಆದೇಶದಲ್ಲಿ 11 ಜನರನ್ನು ಪ್ರಕರಣದಿಂದ ಬಿಡುಗಡೆ ಮಾಡಿತ್ತು.

ಇಮಾಮ್, ತನ್ಹಾ ಮತ್ತು ಜರ್ಗರ್ ಸೇರಿದಂತೆ 11 ಆರೋಪಿಗಳ ಪೈಕಿ 9 ಮಂದಿಯ ವಿರುದ್ಧ ಗಲಭೆ ಮತ್ತು ಕಾನೂನುಬಾಹಿರ ಸಭೆಯ ಪ್ರಾಥಮಿಕ ಆರೋಪಗಳನ್ನು ಮಾಡಲಾಗಿದೆ ಎಂದೂ ಹೈಕೋರ್ಟ್ ಹೇಳಿದೆ.

ಗಡ್ಕರಿಗೆ ಬೆದರಿಕೆ ಕರೆ ನಾಗ್ಪುರ ಪೊಲೀಸರ ವಶಕ್ಕೆ ಪೂಜಾರಿ

ನಾಗ್ಪುರ (ಪಿಟಿಐ): ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಕಚೇರಿಗೆ ಎರಡು ಪ್ರತ್ಯೇಕ ಸಂದರ್ಭಗಳಲ್ಲಿ ಬೆದರಿಕೆ ಕರೆಗಳು ಬಂದ ಪ್ರಕರಣಕ್ಕೆ ಸಂಬಂಧಿಸಿ ಬೆಳಗಾವಿ ಜೈಲಿನಲ್ಲಿ ಶಿಕ್ಷೆಗೆ ಗುರಿಯಾಗಿರುವ ಕೊಲೆ ಪ್ರಕರಣವೊಂದರ ದೋಷಿಯನ್ನು ನಾಗ್ಪುರ ಪೊಲೀಸರು ಮಂಗಳವಾರ ವಶಕ್ಕೆ ಪಡೆದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಯೇಶ್ ಪೂಜಾರಿ ಎಂದು ಗುರುತಿಸಲಾಗಿರುವ ದೋಷಿಯನ್ನು ಹಿಂಡಲಗಾ ಜೈಲಿನಿಂದ ವಶಕ್ಕೆ ಪಡೆದು ಬೆಳಿಗ್ಗೆಯೇ ವಿಮಾನದ ಮೂಲಕ ನಾಗ್ಪುರಕ್ಕೆ ಕರೆದೊಯ್ಯಲಾಯಿತು. ಸಚಿವರ ಕಚೇರಿಗೆ ಬೆದರಿಕೆ ಕರೆ ಮಾಡಿರುವುದರ ಹಿಂದೆ ಆತನಿಗಿದ್ದ ಉದ್ದೇಶ ತಿಳಿದುಕೊಳ್ಳುವ ಸಲುವಾಗಿ ಆತನನ್ನು ವಿಚಾರಣೆಗೆ ಒಳಪಡಿಸಲಾಗುವುದು. ಮಧ್ಯಾಹ್ನ ಆತನನ್ನು ಸ್ಥಳೀಯ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಜಯೇಶ್ ವಿರುದ್ಧ ನಾಗ್ಪುರದ ದಾಂತೋಳಿ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ. ಆದರೆ, ಈ ಆರೋಪವನ್ನು ಪೂಜಾರಿ ತಳ್ಳಿಹಾಕಿದ್ದಾನೆ.

'ಚಾಟ್‌ಜಿಪಿಟಿ' ನೆರವು ಪಡೆದ ನ್ಯಾಯಮೂರ್ತಿ

ಚಂಡೀಗಢ (ಪಿಟಿಐ): ಕ್ರೌರ್ಯದಿಂದ ಕೂಡಿದ ದಾಳಿ ಪ್ರಕರಣದ ಆರೋಪಿಗೆ ಜಾಮೀನು ನೀಡುವ ವಿಚಾರದಲ್ಲಿ ಜಗತ್ತಿನಾದ್ಯಂತ ಅನುಸರಿಸಲಾಗುತ್ತಿರುವ ಕ್ರಮದ ಕುರಿತ ಮಾಹಿತಿಗಾಗಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ 'ಚಾಟ್‌ಜಿಪಿಟಿ'ಯ (ಕೃತಕ ಬುದ್ಧಿಮತ್ತೆ) ನೆರವು ಪಡೆದಿದೆ. ಭಾರತದ ನ್ಯಾಯಾಂಗ ವ್ಯವಸ್ಥೆಯ ಮಟ್ಟಿಗೆ ಇದು ಹೊಸ ಪ್ರಯತ್ನವಾಗಿದೆ.

ಕೊಲೆ ಪ್ರಕರಣದ ಆರೋಪಿಯೊಬ್ಬ ಸಲ್ಲಿಸಿದ್ದ ಅರ್ಜಿಯನ್ನು ಸೋಮವಾರ ವಿಚಾರಣೆಗೆ ಕೈಗೆತ್ತಿಕೊಂಡಿದ್ದ ನ್ಯಾಯಮೂರ್ತಿ ಅನೂಪ್ ಚಿತ್ಕಾರ್, 'ಇಂತಹ ಪ್ರಕರಣದಲ್ಲಿ ವಿಶ್ವದ ಇತರೆ ದೇಶಗಳಲ್ಲಿ ಅನುಸರಿಸುವ ಕ್ರಮದ ಕುರಿತ ವಿವರವಾದ ಮಾಹಿತಿ ಪಡೆಯುವುದಕ್ಕಾಗಿ 'ಚಾಟ್‌ಜಿಪಿಟಿ'ಯ ಮೊರೆ ಹೋಗಲಾಯಿತು' ಎಂದಿದ್ದಾರೆ.

ಆರೋಪಿಯ ಜಾಮೀನು ಅರ್ಜಿಯನ್ನೂ ಅವರು ವಜಾಗೊಳಿಸಿದ್ದಾರೆ.

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿಯಾಗಿ ಪಳನಿಸ್ವಾಮಿ

ಚೆನ್ನೈ (ಪಿಟಿಐ): ತನ್ನ ನಾಯಕತ್ವಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಅನುಮತಿ ದೊರೆತ ತಿಂಗಳ ಬಳಿಕ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಅವರು ಎಐಎಡಿಎಂಕೆಯ ಪ್ರಧಾನ ಕಾರ್ಯದರ್ಶಿಯಾಗಿ ಮಂಗಳವಾರ ಔಪಚಾರಿಕವಾಗಿ ಅಧಿಕಾರ ಪಡೆದರು.

2022ರ ಜುಲೈ 11ರಂದು ಎಐಎಡಿಎಂಕೆ ಜನರಲ್ ಕೌನ್ಸಿಲ್ ನಿರ್ಣಯಗಳು, ಪ್ರಧಾನ ಕಾರ್ಯದರ್ಶಿ ಚುನಾವಣೆಯ ವಿರುದ್ಧ ಇಪಿಎಸ್‌ನ ಪ್ರತಿಸ್ಪರ್ಧಿ ನಾಯಕ ಓ. ಪನ್ನೀರಸೆಲ್ವಂ ಮತ್ತು ಅವರ ಆಪ್ತರು ಸಲ್ಲಿಸಿದ್ದ ಅರ್ಜಿಗಳನ್ನು ಮದ್ರಾಸ್ ಹೈಕೋರ್ಟ್ ತಿರಸ್ಕರಿಸಿತು.

ಅಪಹರಣ ಪ್ರಕರಣ: ಅತೀಕ್ ಅಹ್ಮದ್ ಸೇರಿದಂತೆ ಮೂವರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಲಖನೌ: ಪ್ರಯಾಗ್‌ರಾಜ್‌ನಲ್ಲಿ 2005ರಲ್ಲಿ ನಡೆದ ಬಿಎಸ್‌ಪಿ ಶಾಸಕ ರಾಜು ಪಾಲ್ ಅವರ ಹತ್ಯೆಯ ಪ್ರಮುಖ ಸಾಕ್ಷಿಯಾಗಿದ್ದ ಉಮೇಶ್ ಪಾಲ್ ಅವರ ಅಪಹರಣ ಪ್ರಕರಣದಲ್ಲಿ ಮಾಫಿಯಾ ಡಾನ್, ಮಾಜಿ ಸಂಸದ ಅತೀಕ್ ಅಹ್ಮದ್ ಅಪರಾಧಿ ಎಂದು ಸಾಬೀತಾಗಿದ್ದು, ಅವರಿಗೆ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮಂಗಳವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಪ್ರಕರಣದಲ್ಲಿ ಅತೀಕ್ ಸಹಚರರಾದ ದಿನೇಶ್ ಪಾಲ್ ಮತ್ತು ಖಾನ್ ಶೌಕತ್ ಹನೀಫ್ ಕೂಡಾ ಅಪರಾಧಿಗಳೆಂದು ಸಾಬೀತಾಗಿದ್ದು, ಇತರ ಏಳು ಜನರನ್ನು ನ್ಯಾಯಾಲಯವು ಖುಲಾಸೆಗೊಳಿಸಿದೆ. ಮೂವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯ ಜತೆಗೆ ತಲಾ ₹ 1ಲಕ್ಷ ದಂಡವನ್ನೂ ವಿಧಿಸಲಾಗಿದೆ.



2005ರಲ್ಲಿ ಬಿಎಸ್‌ಪಿ ಶಾಸಕ ರಾಜು ಪಾಲ್ ಅವರನ್ನು ಹತ್ಯೆ ಮಾಡಲಾಗಿತ್ತು. ಇದಕ್ಕೆ ಸಾಕ್ಷಿಯಾಗಿದ್ದ ಉಮೇಶ್ ಪಾಲ್ ಅವರನ್ನು ಅತೀಕ್ ಅಹ್ಮದ್ 2006ರಲ್ಲಿ ಅಪಹರಣ ಮಾಡಿದ್ದ. ಅತೀಕ್ ಬಂದೂಕು ತೋರಿಸಿ ತಮ್ಮನ್ನು ಅಪಹರಿಸಿದ್ದು ರಾಜುಪಾಲ್ ಪ್ರಕರಣವನ್ನು ಹಿಂಪಡೆಯುವಂತೆ ಒತ್ತಾಯಿಸಿ ಹಿಂಸೆ ನೀಡಿದ್ದಾನೆ ಎಂದು ಉಮೇಶ್ ಆರೋಪಿಸಿದ್ದರು.

ರಾಜುಹತ್ಯೆಯಾದ ಸ್ಥಳದಲ್ಲಿ ತಾನು ಇಲ್ಲ ಎಂದು ಅಫಿಡವಿಟ್‌ಗೆ ಸಹಿ ಹಾಕುವಂತೆ ಮಾಡಲಾಗಿತ್ತು ಎಂದು ಆರೋಪಿಸಿದ್ದ ಉಮೇಶ್, ನ್ಯಾಯಾಲಯದ ಮುಂದೆ ಹಾಜರಾಗಿ ಅಫಿಡವಿಟ್ ಕೂಡಾ ಸಲ್ಲಿಸಿದ್ದರು. ಇದಾದ ಒಂದು ವರ್ಷದ ಬಳಿಕ ಉಮೇಶ್ ಅಫಿಡವಿಟ್‌ಗೆ ಸಹಿ ಹಾಕುವಂತೆ ಒತ್ತಾಯಿಸಿ, ಅತೀಕ್‌ನ ಗೂಂಡಾಗಳು ತನ್ನನ್ನು ಅಪಹರಿಸಿದ್ದಾರೆ ಎಂದು ಆರೋಪಿಸಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು.

ಪ್ರಯಾಗ್‌ರಾಜ್‌ನಲ್ಲಿ ಕಳೆದ ತಿಂಗಳು ಉಮೇಶ್ ಪಾಲ್ ಮೇಲೆ ಅಪರಿಚಿತರು ಗುಂಡಿನ ದಾಳಿ ನಡೆಸಿ ಹತ್ಯೆ ಮಾಡಿದ್ದರು. ಅದೇ ವೇಳೆಯಲ್ಲಿ ಗುಜರಾತ್‌ನ ಸಾಬರಮತಿ ಜೈಲಿನಲ್ಲಿದ್ದ ಅತೀಕ್ ಮತ್ತು ಆತನ ಸಹಚರರ ವಿರುದ್ಧ ಹತ್ಯೆಯ ಸಂಚಿನ ಆರೋಪದಲ್ಲಿ ಪ್ರಕರಣ ದಾಖಲಾಗಿತ್ತು.

ಉತ್ತರಪ್ರದೇಶದ ಪೊಲೀಸರು ನಡೆಸಿದ ಎನ್‌ಕೌಂಟರ್‌ನಲ್ಲಿ ಉಮೇಶ್ ಹತ್ಯೆಯ ಇಬ್ಬರು ಶೂಟರ್‌ಗಳು ಸಾವಿಗೀಡಾಗಿದ್ದರು. ಈ ಪ್ರಕರಣದಲ್ಲಿ ಆರೋಪಿಯಾಗಿದ್ದ ಅತೀಕ್ ಅವರ ಪತ್ನಿ ಇನ್ನೂ ತಲೆಮರೆಸಿಕೊಂಡಿದ್ದಾರೆ.

'ನಾನು ನ್ಯಾಯಾಲಯದ ಮೊರೆ ಹೋಗುವುದಿಲ್ಲ. ಆದರೆ, ನನ್ನ ಪತಿಯನ್ನು ಕೊಂದ ಅತೀಕ್ ಅಹ್ಮದ್‌ಗೆ ಮರಣದಂಡನೆ ವಿಧಿಸಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ಉಮೇಶ್ ಪಾಲ್ ಅವರ ಪತ್ನಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಅತೀಕ್ ಪ್ರಮುಖ ಆರೋಪಿಯಾಗಿರುವ ರಾಜುಪಾಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವೇ ತಿಂಗಳುಗಳಲ್ಲಿ ತೀರ್ಪು ಪ್ರಕಟವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಅತೀಕ್ ಮನವಿ ವಜಾ


ಅತೀಕ್ ಅಹ್ಮದ್

ಉಮೇಶ್ ಪಾಲ್ ಹತ್ಯೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ಅತೀಕ್ ಅಹ್ಮದ್ ಉತ್ತರ ಪ್ರದೇಶ ಪೊಲೀಸರ ಕಸ್ಟಡಿಯಲ್ಲಿ ರಕ್ಷಣೆ ನೀಡುವಂತೆ ಕೋರಿ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಸುಭಾಷಿತ

ನೀವು ಬಲಶಾಲಿಯಾಗಿದ್ದರೆ, ದುರ್ಬಲರಂತೆ ಕಾಣಿಸಿಕೊಳ್ಳಿ. ಆದರೆ ನೀವು ದುರ್ಬಲರಾಗಿದ್ದರೆ, ಬಲಶಾಲಿಯಂತೆ ತೋರ್ಪಡಿಸಿಕೊಳ್ಳಿ.

-ಸನ್ ಝು

ಭಾರತದ ಬಾಕ್ಸಿಂಗ್‌ಗೆ ಚಿನ್ನದ ಮೆರುಗು ತುಂಬಿದ ಮಹಿಳೆಯರು

ಭಾರತದ ಮಹಿಳಾ ಬಾಕ್ಸಿಂಗ್ ಕ್ರೀಡಾಪಟುಗಳು ವಿಶ್ವ ಚಾಂಪಿಯನ್‌ಷಿಪ್ ಕಣದಲ್ಲಿ ಚಿನ್ನದ ಹೊನಲು ಹರಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಮಹಿಳೆಯರ ವಿಶ್ವ ಬಾಕ್ಸಿಂಗ್‌ನಲ್ಲಿ ಆತಿಥೇಯ ವನಿತೆಯರು ನಾಲ್ಕು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ನೀತು ಗಂಗಾಸ್, ಸ್ವೀಟಿ ಬೂರಾ, ನಿಖತ್ ಜರೀನ್ ಮತ್ತು ಲವ್ಲಿನಾ ಬೊರ್ಗೊಹೈನ್ ಅವರು ಈ ಸಾಧನೆ ಮಾಡಿದ್ದಾರೆ. ಇದೇ ವರ್ಷ ನಡೆಯಲಿರುವ ಏಷ್ಯನ್ ಕ್ರೀಡಾಕೂಟ ಹಾಗೂ ಮುಂದಿನ ವರ್ಷ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕೂಟಕ್ಕೂ ಮುನ್ನ ಈ ಸಾಧನೆ ದಾಖಲಾಗಿರುವುದು ಹೊಸ ಭರವಸೆ ಮೂಡಿಸಿದೆ. ಇದರೊಂದಿಗೆ ವಿಶ್ವ ಬಾಕ್ಸಿಂಗ್‌ನಲ್ಲಿ ಭಾರತವು ಎರಡೂ ವಿಭಾಗಗಳಲ್ಲಿ ಸೇರಿ ಗೆದ್ದಿರುವ ಪದಕಗಳ ಸಂಖ್ಯೆಯು ಐವತ್ತಕ್ಕೇರಿದೆ. ಇದರಲ್ಲಿ ಮಹಿಳೆಯರದ್ದೇ ಸಿಂಹಪಾಲು. 14 ಚಿನ್ನ, 8 ಬೆಳ್ಳಿ ಮತ್ತು 21 ಕಂಚಿನ ಪದಕಗಳ ಕಾಣಿಕೆಯನ್ನು ವನಿತೆಯರು ನೀಡಿದ್ದಾರೆ. ಇದರೊಂದಿಗೆ ಭಾರತ ಮಹಿಳಾ ತಂಡವು ವಿಶ್ವ ಬಾಕ್ಸಿಂಗ್‌ನಲ್ಲಿ ರಷ್ಯಾ ಹಾಗೂ ಚೀನಾ ನಂತರದ ಸ್ಥಾನ ಪಡೆದುಕೊಂಡಿದೆ. ಪುರುಷರ ವಿಭಾಗದಲ್ಲಿ ಇನ್ನೂ ಚಿನ್ನದ ಸಾಧನೆ ಮೂಡಿಬಂದಿಲ್ಲ. ಒಂದು ಬೆಳ್ಳಿ ಮತ್ತು ಆರು ಕಂಚಿನ ಪದಕಗಳನ್ನು ಮಾತ್ರ ಗೆದ್ದಿದ್ದಾರೆ.



ಏಷ್ಯನ್ ಕ್ರೀಡಾಕೂಟ ಹಾಗೂ ಒಲಿಂಪಿಕ್ ಕೂಟಕ್ಕೂ ಮುನ್ನ ಈ ಸಾಧನೆ ದಾಖಲಾಗಿರುವುದು ಹೊಸ ಭರವಸೆ ಮೂಡಿಸಿದೆ

ಉಕ್ರೇನ್ ವಿರುದ್ಧ ಯುದ್ಧ ಸಾರಿರುವ ರಷ್ಯಾ ಮತ್ತು ಬೆಲಾರೂಸ್ ದೇಶಗಳ ಬಾಕ್ಸಿಂಗ್‌ಪಟುಗಳಿಗೆ ತಮ್ಮದೇ ದೇಶದ ಧ್ವಜದಡಿ ಸ್ಪರ್ಧಿಸಲು ಅವಕಾಶ ಕೊಟ್ಟಿದ್ದನ್ನು ವಿರೋಧಿಸಿ ಅಮೆರಿಕ, ಬ್ರಿಟನ್ ಮತ್ತು ಐರ್ಲೆಂಡ್ ಸೇರಿದಂತೆ ಹತ್ತು ದೇಶಗಳು ಈ ವಿಶ್ವ ಚಾಂಪಿಯನ್‌ಷಿಪ್ ಅನ್ನು ಬಹಿಷ್ಕರಿಸಿದ್ದವು. ಆದರೆ ಚೀನಾ, ಬ್ರೆಜಿಲ್, ವಿಯೆಟ್ನಾಂ ಸ್ಪರ್ಧಿಗಳ ಸವಾಲು ಮೀರಿ ನಿಲ್ಲುವುದು ಕೂಡ ಸುಲಭದ್ದಾಗಿರಲಿಲ್ಲ. ಒಟ್ಟು 65 ದೇಶಗಳ 324 ಸ್ಪರ್ಧಿಗಳು 12 ವಿಭಾಗಗಳಲ್ಲಿ ಸ್ಪರ್ಧಿಸಿದ್ದರು. ಈ ಪೈಪೋಟಿಯಲ್ಲಿ ಆತಿಥೇಯ ವನಿತೆಯರು ಮಾಡಿರುವ ಸಾಧನೆ ಶ್ಲಾಘನೀಯ. ಬೇರೆ ಬೇರೆ ರಾಜ್ಯಗಳು ಹಾಗೂ ವಿಭಿನ್ನ ಕೌಟುಂಬಿಕ ಹಿನ್ನೆಲೆಯಿಂದ ಬಂದಿರುವ ಈ ಬಾಕ್ಸಿಂಗ್ ಪಟುಗಳ ಸಾಧನೆಯು ಯುವಪೀಳಿಗೆಗೆ ಪ್ರೇರಣೆಯಾಗಿದೆ. ದೇಶದ ಬಾಕ್ಸಿಂಗ್ ಕ್ಷೇತ್ರದಲ್ಲಿ ಇಂತಹ ಯಶೋಗಾಥೆ ಆರಂಭವಾಗಿದ್ದು ಮೇರಿ ಕೋಮ್ ಅವರಿಂದ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ಆರು ಚಿನ್ನ, ಒಂದು ಬೆಳ್ಳಿ ಮತ್ತು ಒಂದು ಕಂಚು ಗೆದ್ದಿರುವ 'ಸೂಪರ್ ಮಾಮ್' ಖ್ಯಾತಿಯ ಮೇರಿ ಖಾತೆಯಲ್ಲಿ ಒಲಿಂಪಿಕ್ ಕೂಟದ ಪದಕವೂ ಇದೆ. ಅವರ ಸ್ಫೂರ್ತಿಯಿಂದ ದೇಶದಲ್ಲಿ ಹೆಣ್ಣುಮಕ್ಕಳು ಬಾಕ್ಸಿಂಗ್ ಕೈಗವಸುಗಳನ್ನು ಧರಿಸಲು ಆರಂಭಿಸಿದ್ದರ ಫಲ ಈಗ ಕಾಣುತ್ತಿದೆ. ತೆಲಂಗಾಣದ 26 ವರ್ಷದ ನಿಖತ್ ಸತತ ಎರಡನೇ ಬಾರಿ ಪ್ರಶಸ್ತಿ ಸಾಧನೆ ಮಾಡಿ ಮೇರಿ ಕೋಮ್ ಹಾದಿಯಲ್ಲಿ ದೃಢವಾದ ಹೆಜ್ಜೆ ಇಟ್ಟಿದ್ದಾರೆ. ಎರಡು ಬಾರಿಯೂ ಅವರು 52 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದರು. ಅಸ್ಸಾಂನ ಲವ್ಲಿನಾ ಬೊರ್ಗೊಹೈನ್ ಅವರು 2020ರ ಟೋಕಿಯೊ ಒಲಿಂಪಿಕ್‌ನಲ್ಲಿ ಕಂಚು ಗೆದ್ದಿದ್ದರು. ವಿಶ್ವ ಚಾಂಪಿಯನ್ ಆಗುವ ಅವರ ಕನಸು ಈಗ ಈಡೇರಿದೆ. ಕಳೆದ ಎರಡು ವರ್ಷಗಳಲ್ಲಿ ಕೆಲವು ವಿವಾದಾತ್ಮಕ ಹೇಳಿಕೆಗಳಿಂದಲೂ ಅವರು ಗಮನ ಸೆಳೆದಿದ್ದರು. ಇದೀಗ ಮತ್ತೆ ತಮ್ಮ ಸಾಧನೆಯಿಂದ ಮನೆಮಾತಾಗಿದ್ದಾರೆ. 75 ಕೆ.ಜಿ. ವಿಭಾಗದಲ್ಲಿ ಅವರ ಬಿರುಸಿನ ಪಂಚ್‌ಗಳಿಗೆ ಆಸ್ಟ್ರೇಲಿಯಾದ ಕೈಟ್ಲಿನ್ ಪಾರ್ಕರ್ ಶರಣಾದರು. ಲವ್ಲಿನಾ ಫಿಟ್‌ನೆಸ್ ಕೂಡ ಉತ್ತಮಗೊಂಡಿದೆ. ಹರಿಯಾಣದ ಗ್ರಾಮೀಣ ಪ್ರತಿಭೆಗಳಾದ ನೀತು ಗಂಗಾಸ್ ಮತ್ತು ಸ್ವೀಟಿ ಬೂರಾ ಅವರು ಕ್ರಮವಾಗಿ 48 ಕೆ.ಜಿ. ಹಾಗೂ 81 ಕೆ.ಜಿ. ವಿಭಾಗಗಳಲ್ಲಿ ಸ್ವರ್ಣ ಸಾಧನೆ ಮಾಡಿ ತಮ್ಮ ಮೇಲಿನ ವಿಶ್ವಾಸ ಉಳಿಸಿಕೊಂಡರು. ಹೋದ ವರ್ಷದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ನೀತು ಹಾಗೂ ಏಷ್ಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸ್ವೀಟಿ ಚಾಂಪಿಯನ್ ಆಗಿದ್ದರು. ಭಾರತದ ಬಾಕ್ಸರ್‌ಗಳ ಸಾಧನೆಯ ಹಿಂದೆ ತರಬೇತುದಾರರು, ಕ್ರೀಡಾವಿಜ್ಞಾನ ಪರಿಣತರು ಹಾಗೂ ತಂತ್ರಜ್ಞರ ತಂಡದ ಶ್ರಮವೂ ಇದೆ. ಈ ಚಾಂಪಿಯನ್‌ಷಿಪ್‌ಗಾಗಿ ನಡೆದ ತಂಡದ ಆಯ್ಕೆಯು ವಿವಾದ ಹುಟ್ಟುಹಾಕಿತ್ತು. ರಾಷ್ಟ್ರೀಯ ಪದಕವಿಜೇತರಾಗಿದ್ದ ಮೂವರು ಬಾಕ್ಸರ್‌ಗಳು ತಮ್ಮನ್ನು ಆಯ್ಕೆ ಮಾಡದಿರುವುದನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಆದರೆ ನ್ಯಾಯಾಲಯವು ಅವರ ಪರವಾಗಿ ತೀರ್ಪು ನೀಡಿರಲಿಲ್ಲ. ಇದರಿಂದಾಗಿ ಎಲ್ಲರ ಕಣ್ಣುಗಳೂ ಆಯ್ಕೆ ಸಮಿತಿಯ ಮೇಲೆ ನೆಟ್ಟಿದ್ದವು. ಆದರೆ ಈಗ ನಾಲ್ಕು ಚಿನ್ನದ ಪದಕಗಳ ಮೆರುಗಿನಲ್ಲಿ ವಿವಾದ ಮರೆಯಾಗಿದೆ. ದೇಶದ ಕ್ರೀಡಾಕ್ಷೇತ್ರದಲ್ಲಿ ಮಹಿಳೆಯರು ಐತಿಹಾಸಿಕ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ದಿನದ ಟ್ವೀಟ್


ಬೇಕಾಗಿದೆ ಪರಿಹಾರ



ಭಾರತದಲ್ಲಿ ಒಬಿಸಿ, ಎಸ್‌ಸಿ ಮತ್ತು ಎಸ್‌ಟಿ ಒಟ್ಟು ಜನಸಂಖ್ಯೆ ಶೇ 75ರಷ್ಟಿದ್ದರೂ ಹಿಂದಿನ ಐದು ವರ್ಷಗಳಲ್ಲಿ ಅಖಿಲ ಭಾರತ ಮಟ್ಟದ ಸರ್ಕಾರಿ ನೇಮಕಾತಿಗಳಲ್ಲಿ ಇವರ ಪ್ರಾತಿನಿಧ್ಯದ ಪ್ರಮಾಣ ಕ್ರಮವಾಗಿ ಶೇ 15.92, ಶೇ 7.65 ಮತ್ತು ಶೇ 3.80ರಷ್ಟು ಮಾತ್ರ ಇರುವುದು ಎಚ್ಚರಿಕೆಯ ಕರೆಗಂಟೆ. ಇಷ್ಟೊಂದು ಕಡಿಮೆ ಪ್ರಾತಿನಿಧ್ಯವು ವ್ಯವಸ್ಥೆಯಲ್ಲೇ ಇರುವ ತಾರತಮ್ಯವನ್ನು ಸ್ಪಷ್ಟವಾಗಿ ತೋರಿಸುತ್ತದೆ! ಪರಿಹಾರ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕಾದ ಅಗತ್ಯವಿದೆ.

ಜಾನ್ ಬ್ರಿಟ್ಟಾಸ್, ರಾಜ್ಯಸಭಾ ಸದಸ್ಯ

ಕಿಡಿನುಡಿ



ನನ್ನ ಅಭಿವೃದ್ಧಿ ಕೆಲಸ ಹಾಗೂ ಸಾಮಾಜಿಕ ನ್ಯಾಯದ ನಡೆ ಕಾಂಗ್ರೆಸ್ಸಿಗರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಹೀಗಾಗಿ ಶಕುನಿ, ನಾಯಿ ಎಂದು ನನ್ನನ್ನು ಬೈಯ್ಯುತ್ತಿದ್ದಾರೆ. ಹೌದು, ನಾನು ಕರ್ನಾಟಕದ ಏಳು ಕೋಟಿ ಜನರ ನಿಯತ್ತಿನ ನಾಯಿ. ಆದರೆ ಅವರೆಲ್ಲ ಗೋಮುಖ ವ್ಯಾಘ್ರರು ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 29-3-1998

• **ರಾಜ್ಯ ಆಡಳಿತ ನ್ಯಾಯಮಂಡಳಿ ರದ್ದು**

ಬೆಂಗಳೂರು, ಮಾರ್ಚ್ 28– ಕರ್ನಾಟಕ ಆಡಳಿತ ನ್ಯಾಯಮಂಡಳಿಯನ್ನು ರದ್ದು ಮಾಡಲು ಇಂದು ನಡೆದ ಸಚಿವ ಸಂಪುಟ ಸಭೆಯು ನಿರ್ಧರಿಸಿತು. ಸುಪ್ರೀಂ ಕೋರ್ಟ್‌ನ ಈಚಿನ ತೀರ್ಪಿನ ಹಿನ್ನೆಲೆಯಲ್ಲಿ ತೆಗೆದುಕೊಂಡಿರುವ ಈ ನಿರ್ಧಾರ ಈ ವರ್ಷದ ಆಗಸ್ಟ್ ಒಂದರಿಂದ ಜಾರಿಗೆ ಬರಲಿದೆ.

ಸಂಪುಟ ಸಭೆಯ ನಂತರ ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದ ವಾರ್ತಾ ಸಚಿವ ಎಂ.ಸಿ.ನಾಣಯ್ಯ, ಇನ್ನು ಮುಂದೆ ಸರ್ಕಾರಿ ಸೇವಾ ವಿಷಯದ ವ್ಯಾಜ್ಯಗಳ ಸಂಬಂಧದಲ್ಲಿ ನೇರವಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ಹೇಳಿದರು.

ಆಡಳಿತ ನ್ಯಾಯಮಂಡಳಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಹೈಕೋರ್ಟ್‌ಗೆ ವರ್ಗಾಯಿಸಲಾಗುವುದು. ನ್ಯಾಯಮಂಡಳಿ ರದ್ದು ತೀರ್ಮಾನವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದು ಎಂದು ಅವರು ವಿವರಿಸಿದರು.

• **ಟಿಡಿಪಿ ಬೆಂಬಲ: ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ವಿಶ್ವಾಸಮತ**

ನವದೆಹಲಿ, ಮಾರ್ಚ್ 28– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಸಮ್ಮಿಶ್ರ ಸರ್ಕಾರ ಇಂದು ರಾತ್ರಿ 274 ಮತಗಳನ್ನು ಗಳಿಸುವ ಮೂಲಕ ವಿಶ್ವಾಸಮತವನ್ನು ಪಡೆಯಿತು.

ಲೋಕಸಭೆಯ ಒಟ್ಟು 535 ಸದಸ್ಯರು ಮತದಾನದಲ್ಲಿ ಭಾಗವಹಿಸಿದ್ದರು. ವಿಶ್ವಾಸ ಮತವನ್ನು ವಿರೋಧಿಸಿ 261 ಮತಗಳು ಬಿದ್ದವು.

ಕೊನೇ ಗಳಿಗೆಯಲ್ಲಿ ತೆಲುಗುದೇಶಂ ಪಕ್ಷ ಸರ್ಕಾರದ ಪರವಾಗಿ ತಳೆದ ನಿಲುವು ಮತ್ತು ಮತದಾನದಲ್ಲಿ ತಟಸ್ಥವಾಗಿ ಉಳಿಯಲು ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಕೈಗೊಂಡ ನಿರ್ಧಾರದಿಂದ ಸರ್ಕಾರ ವಿಶ್ವಾಸಮತ ಪಡೆಯಲು ಸಾಧ್ಯವಾಯಿತು.

50 ವರ್ಷಗಳ ಹಿಂದೆ

ಗುರುವಾರ, 29-3-1973

• **ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿ**

ನವದೆಹಲಿ, ಮಾರ್ಚ್ 28– ಮಣಿಪುರದ ಆಡಳಿತವನ್ನು ರಾಷ್ಟ್ರಪತಿ ಶ್ರೀ ವಿ.ವಿ.ಗಿರಿ ಅವರು ಇಂದು ವಹಿಸಿಕೊಂಡರು.

ಮಣಿಪುರದ ರಾಜ್ಯಪಾಲ ಶ್ರೀ ಬಿ.ಕೆ. ನೆಹರೂ ಅವರ ಶಿಫಾರಸಿನಂತೆ ವಿಧಾನ ಸಭೆಯನ್ನು ಸಸ್ಪೆನ್ಷನ್‌ನಲ್ಲಿಡುವುದರ ಬದಲು ಅದನ್ನು ರಾಷ್ಟ್ರಪತಿ ಅವರು ವಿಸರ್ಜಿಸಿದರು.

ರಾಷ್ಟ್ರಪತಿ ಆಡಳಿತ ಜಾರಿಗೆ ಬರುವಂತೆ ಕೇಂದ್ರ ಸಚಿವ ಸಂಪುಟ ಈ ಬೆಳಿಗ್ಗೆ ನಿರ್ಧರಿಸಿದ ತತ್‌ಕ್ಷಣವೇ ರಾಷ್ಟ್ರಪತಿ ಅವರು ಆಡಳಿತ ವಹಿಸಿಕೊಳ್ಳುವ ಬಗ್ಗೆ ಸಂವಿಧಾನದ 356ನೇ ವಿಧಿ ಮೇರೆಗೆ ಘೋಷಣೆ ಹೊರಡಿಸಿದರು.

• **ಡಿ.ವಿ.ಜಿ.ಗೆ ಲಘು ಹೃದಯಾಘಾತ**

ಬೆಂಗಳೂರು, ಮಾರ್ಚ್ 28– ಸುಪ್ರಸಿದ್ಧ ಸಾಹಿತಿ ಡಾ. ಡಿ.ವಿ.ಗುಂಡಪ್ಪ ಅವರು ಕಳೆದ ಎರಡು ದಿನಗಳ ಹಿಂದೆ ಮತ್ತೆ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ರಿಪಬ್ಲಿಕ್ ನರ್ಸಿಂಗ್ ಹೋಮ್ ಸೇರಿದ್ದಾರೆ.

ಲಘು ಹೃದಯಾಘಾತದ ಕಾರಣ ಚಿಕಿತ್ಸೆ ಪಡೆಯುತ್ತಿರುವ ಶ್ರೀಯುತರ ಸ್ಥಿತಿ ಈಗ ಉತ್ತಮಗೊಂಡಿದೆ.

ಡಾ. ಗುಂಡಪ್ಪ ಅವರು ಪೊಲೀಸ್ ಕಮಿಷನರ್ ಅವರಿಗೆ ಪತ್ರ ಬರೆದು, ತಮ್ಮ ವೃದ್ಧಾಪ್ಯದಲ್ಲಿ ತಮಗೆ ವಾಹನಗಳ ಹಾರನ್‌ಗಳಿಂದ ತೊಂದರೆಯಾಗಿದೆಯೆಂದು ತಿಳಿಸಿದ್ದಾರೆಂದೂ ಗೊತ್ತಾಗಿದೆ.

ಮುಖ್ಯವಾಹಿನಿ ಚಲನಚಿತ್ರಗಳೂ 'ಸಿನಿಮಾ ಸಂಸ್ಕೃತಿ'ಯ ಸಂರಕ್ಷಣೆಗೆ ಮುಂದಾಗಬೇಕು

ಸಮಸ್ಯೆಯ ಸುಳಿಯಲ್ಲಿ ಸಿನಿಮಾ ಸಂಸ್ಕೃತಿ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ನಮ್ಮ ನಡುವಿನ ಮಾಧ್ಯಮಗಳಲ್ಲಿ ಅತಿ ಹೆಚ್ಚು ಜನರಿಗೆ ತಲುಪುತ್ತಿರುವುದು ಸಿನಿಮಾ. ಹೆಚ್ಚು ಜನರನ್ನು ತಲುಪುತ್ತಿರುವ ಮತ್ತು ಹೆಚ್ಚು ಜನರು ಇಷ್ಟಪಡುವ ಯಾವುದೇ ಮಾಧ್ಯಮದ ಹೊಣೆಗಾರಿಕೆಯೂ ಹೆಚ್ಚಾಗಿರಬೇಕು. ಆದರೆ ಈಗ ಹೊಣೆಗಾರಿಕೆಯೊ ಲಾಭಕೋರತನ ಹೆಚ್ಚಾಗಿದೆಯೊ ಎಂಬುದೇ ಮುಖ್ಯ ಪ್ರಶ್ನೆ.

ಸಿನಿಮಾದಿಂದ ಲಾಭ ಮಾಡಬಾರದೆಂದು ಹೇಳುವುದು ತಪ್ಪಾಗುತ್ತದೆಯಷ್ಟೇ ಅಲ್ಲ, ಅದೊಂದು ಅವಾಸ್ತವಿಕ ಅಪೇಕ್ಷೆ. ಲಾಭಾಕಾಂಕ್ಷೆಯೇ ಮಾಧ್ಯಮವೊಂದರ ಘನತೆ, ಗೌರವ ಗೌಣವಾಗಬಾರದೆಂಬುದು ನಿರೀಕ್ಷೆ. ಹಾಗೆ ನೋಡಿದರೆ ಇಂದು ಸಿನಿಮಾವು ಒಂದು ಮಾಧ್ಯಮ ಮಾತ್ರವಾಗಿ ಉಳಿದಿಲ್ಲ. ಎಲ್ಲೆಲ್ಲಿ ಬಂಡವಾಳ ತೊಡಗಿರುತ್ತದೆಯೋ ಅಲ್ಲೆಲ್ಲ ಉದ್ಯಮದ ಲಕ್ಷಣಗಳೇ ಮೇಲುಗೈ ಪಡೆಯುತ್ತವೆ. ಇದೊಂದು ಸ್ವಾಭಾವಿಕ ಹಾಗೂ ವಾಸ್ತವಿಕ ಸಂಗತಿ.

ನಾನು ಮೂರು ದಶಕಗಳ ಹಿಂದೆಯೇ ಸಿನಿಮಾವನ್ನು 'ಕಲೋದ್ಯಮ' ಎಂದು ನಿರ್ವಚಿಸಿದ್ದೆ. ಸಿನಿಮಾ ಕಲೆಯೂ ಹೌದು, ಉದ್ಯಮವೂ ಹೌದು. ಆದ್ದರಿಂದ ಅದೊಂದು 'ಕಲೋದ್ಯಮ'ವಾಗಿರುವುದು ಕಟು ಸತ್ಯ. ಇನ್ನೊಂದು ಸತ್ಯವೆಂದರೆ, ಸಿನಿಮಾವನ್ನು ಆರಂಭಿಕ ದಿನಗಳಲ್ಲಿ 'ಕಲೆ' ಎಂದೇ ಒಪ್ಪಲಿಲ್ಲ. ಅದೊಂದು ಉದ್ಯಮ ಮಾತ್ರವೆಂಬ ಭಾವನೆಯೇ ಬಲವಾಗಿತ್ತು. ಸಾಂಸ್ಕೃತಿಕ ವಲಯವು ಸಿನಿಮಾವನ್ನು ಒಂದು ಕಲಾಪ್ರಕಾರವೆಂದು ಒಪ್ಪಿಕೊಳ್ಳತೊಡಗಿದಾಗ 1940ರಲ್ಲಿ ಆಂದ್ರೆ ಬ್ಯಾಜಿನ್ ತನ್ನ 'The evolution of the language of cinema' ಎಂಬ ಪುಸ್ತಕದಲ್ಲಿ 'ಕಡೆಗೂ ಚಲನಚಿತ್ರ ನಿರ್ದೇಶಕರು ಕಾದಂಬರಿಕಾರರಿಗೆ ಸಮಾನರೆಂದು ಪರಿಗಣಿತರಾದರು' ಎಂದು ನಿಟ್ಟುಸಿರುಬಿಟ್ಟದ್ದು ಇಲ್ಲಿ ಉಲ್ಲೇಖನೀಯ.

ನನ್ನ ದೃಷ್ಟಿಯಲ್ಲಿ ಸಿನಿಮಾ ಎನ್ನುವುದು ಮೂಲತಃ ಒಂದು ಒಕ್ಕೂಟ ಕಲೆ. ಇದು ಅನೇಕ ಕಲೆಗಳ ಒಂದು ಒಕ್ಕೂಟ. ಸಿನಿಮಾಕ್ಕೆ ಸಾಹಿತ್ಯ, ಛಾಯಾಗ್ರಹಣ, ಸಂಕಲನ, ಸಂಗೀತ, ನೃತ್ಯ, ಕಲೆ- ಹೀಗೆ ವಿವಿಧ ಪ್ರಕಾರಗಳ ಪರಿಣತರು ಬೇಕು. ಈ ಎಲ್ಲರ ನಿರ್ದೇಶಕರ ಕ್ಯಾಪ್ಟನ್ ಆಗಿ ತನ್ನ ಒಲವು ನಿಲುವುಗಳಿಗೆ ಅನುಗುಣವಾಗಿ ಸಿನಿಮಾ ಸೃಷ್ಟಿ ಮಾಡುತ್ತಾರೆ. ಸಿನಿಮಾಕ್ಕೆ ಲೈಟ್‌ಬಾಯ್, ಸೆಟ್‌ಬಾಯ್‌ನಂತಹ ಶ್ರಮಜೀವಿ ಪರಿಣತರೂ ಬೇಕು. ಶ್ರಮ ಮತ್ತು ಸೃಜನಶೀಲತೆಗಳೊಂದಾಗಿ ರೂಪುಗೊಳ್ಳುವ ಒಕ್ಕೂಟ ಕಲೆಯೆಂದರೆ ಸಿನಿಮಾ.

ಇಂಥ ಒಕ್ಕೂಟ ಕಲೆಯು ಇಂದಿನ ದಿನಮಾನದಲ್ಲಿ ಉದ್ಯಮವಾಗಿ ವಿಜೃಂಭಿಸುತ್ತಿರುವುದೇ ಹೆಚ್ಚು. ಇದರ ಫಲವಾಗಿ ಸಿನಿಮಾ ಉದ್ಯಮ ಮತ್ತು ಸಿನಿಮಾ ಸಂಸ್ಕೃತಿಯ ನಡುವಿನ ಸಮತೋಲನ ತಪ್ಪಿಹೋಗಿ ಆರ್ಥಿಕ ಹೂಡಿಕೆ ಹಾಗೂ ಆರ್ಥಿಕ ಗಳಿಕೆಗಳೇ ಮೌಲ್ಯಮಾಪನದ ಮಾನದಂಡಗಳಾಗಿವೆ. ಹೀಗಾಗಿ ಸಿನಿಮಾ ಸಂಸ್ಕೃತಿಗೆ ಹಿನ್ನಡೆಯಾಗಿದೆ.

ಈಗ ಕನ್ನಡ ಸಿನಿಮಾಗಳ ಮೂಲಕವೇ ನೋಡೋಣ. ಎಪ್ಪತ್ತು, ಎಂಬತ್ತರ ದಶಕದಲ್ಲಿ ಬಂದ ಕಲಾತ್ಮಕ ಅಥವಾ ಪ್ರಯೋಗಾತ್ಮಕ ಹೊಸ ಅಲೆ ಸಿನಿಮಾಗಳು ಅಂತರರಾಷ್ಟ್ರೀಯವಾಗಿ ಕನ್ನಡಕ್ಕೆ ಮನ್ನಣೆ ತಂದುಕೊಟ್ಟವು. ಆದರೆ ಈಗ ಬರುತ್ತಿರುವ ಬೃಹತ್ ಬಂಡವಾಳದ ಸಿನಿಮಾಗಳಿಂದಲೇ ವಿಶ್ವಮಾನ್ಯತೆ ಬಂದಿರುವಂತೆ ಪ್ರಚಾರ ಕೊಡಲಾಗುತ್ತಿದೆ. ಅಂದು ಹೊಸ ಅಲೆ ಸಿನಿಮಾಗಳಲ್ಲಿ ಹೊಂದಾಣಿಕೆಯೂ ಮುಖ್ಯವಾಹಿನಿ ಸಿನಿಮಾಗಳಲ್ಲಿ ಸದಭಿರುಚಿ ಮತ್ತು ಸಾಮಾಜಿಕ ಜವಾಬ್ದಾರಿಯಿತ್ತು. ಹೊಸ ಅಲೆ ಸಿನಿಮಾಗಳು ವಸ್ತುವಿನ ಸೂಕ್ಷ್ಮ ಶೋಧಕ್ಕೆ ಆದ್ಯತೆ ನೀಡಿ ಹೊಸ ವಿನ್ಯಾಸ ಕಟ್ಟುವ ಹೊಸ ಹಾದಿ ಹುಡುಕುತ್ತಿದ್ದರೆ, ಮುಖ್ಯವಾಹಿನಿಯ ಅನೇಕ ಸಿನಿಮಾಗಳು ಸಾಮಾಜಿಕ ಸಮಸ್ಯೆ, ಸನ್ನಿವೇಶಗಳನ್ನು ಜನಪ್ರಿಯ ಮಾದರಿಯಲ್ಲಿ ಅನಾವರಣಗೊಳಿಸುತ್ತಿದ್ದವು.

ಈ ಜನಪ್ರಿಯ ಸಿನಿಮಾಗಳ ನಿರ್ಮಾಪಕ- ನಿರ್ದೇಶಕರಿಗೂ ಸದಭಿರುಚಿಯ ಸಿನಿಮಾಗಳ ಒಲವಿತ್ತು, ನೈತಿಕತೆಯ ನಿಯಂತ್ರಣವೂ ಇತ್ತು. ಇದರ ಫಲವಾಗಿ ಹಾಸ್ಯ, ಪ್ರೇಮ, ಫೈಟ್‌ಗಳೂ ನಿಯಂತ್ರಿತ ನೈತಿಕ ಪರಿಧಿಯೊಳಗೆ ಪ್ರಕಟವಾಗುತ್ತಿದ್ದವು. ಈಗ ಇಂಥ ಸಿನಿಮಾಗಳು ಬರುತ್ತಿಲ್ಲವೆಂದರೆ ತಪ್ಪಾಗುತ್ತದೆ. ಆದರೆ ಪ್ರಚಾರ ವೈಭವ, ಪ್ರಸಿದ್ಧಿಯ ಸುದ್ದಿಗಳು ಬೃಹತ್ ಬಂಡವಾಳದ ಅನಿಯಂತ್ರಿತ ಮುಕ್ತ ಮಾರಾಟಗಳಿಗೆ ಮಾತ್ರ ಮೀಸಲಾಗಿದೆ. ಇದು ಬಹುಶಃ ಇತರೆ ಭಾರತೀಯ ಭಾಷಾ ಸಿನಿಮಾಗಳಿಗೂ ಅನ್ವಯಿಸುತ್ತದೆ.

ಮುಕ್ತ ಮಾರಾಟ ಸಿನಿಮಾಗಳ ಪ್ರಸಿದ್ಧಿ ಪ್ರಚಾರಗಳಿಗೆ ಜಾಗತೀಕರಣದ ಫಲವಾದ ಮುಕ್ತ ಆರ್ಥಿಕ ನೀತಿಯ ಮುಕ್ತ ಮಾರುಕಟ್ಟೆ ಮಾದರಿಗಳಿಗೂ ಒಂದು ಅಂತರಿಕ ಸಂಬಂಧವಿದೆ. ಬೃಹತ್ ಬಂಡವಾಳಶಾಹಿ ಬಲಗೊಂಡಂತೆ ಎಲ್ಲವನ್ನೂ ಬೃಹತ್ತಾಗಿ ನೋಡುವ ಮನಸ್ಥಿತಿ ರೂಪುಗೊಳ್ಳುತ್ತ ಬಂದಿದೆ. ಮುಕ್ತ ಮಾರುಕಟ್ಟೆ ನೀತಿಗಳು ಮೌಲ್ಯಕಟ್ಟೆ ನೀತಿಗಳನ್ನು ಕುಸಿಯುವಂತೆ ಮಾಡುತ್ತಿವೆ. ಅಷ್ಟೇ ಅಲ್ಲ ಸಿನಿಮಾ ಸಂಸ್ಕೃತಿಗೆ ಘನತೆ ತರುವ ಪ್ರಯತ್ನಗಳಿಗೆ ನ್ಯಾಯಯುತ ಪ್ರಚಾರವೂ ಸಿಗುತ್ತಿಲ್ಲ. ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆದ ಸಿನಿಮಾಗಳಿಗೂ ಸುದ್ದಿಮೌಲ್ಯ ಇಲ್ಲ. ಸುದ್ದಿಮೌಲ್ಯ ಮತ್ತು ಹಣಮೌಲ್ಯಗಳ ಸಂಬಂಧ ಗಾಢವಾಗುವುದು ಬಂಡವಾಳಶಾಹಿ ಆರ್ಥಿಕ ನೀತಿಯ ಒಂದು ಗುಣಲಕ್ಷಣವೂ ಹೌದು. ಇದನ್ನೇ ಚಿಂತಕ ಕುರ್ಕಿನ್ ಅವರು ತಮ್ಮ 'The passing Age' ಪುಸ್ತಕದಲ್ಲಿ ಬಂಡವಾಳಶಾಹಿ ಆರ್ಥಿಕ ನೀತಿಯ ಪರಿಣಾಮಗಳನ್ನು ವಿಶ್ಲೇಷಿಸುತ್ತ, 'ಸುದ್ದಿಮಾಧ್ಯಮಗಳನ್ನೂ ಒಳಗೊಂಡಂತೆ ಜನಪ್ರಿಯ ಮಾದರಿಯ ಎಲ್ಲ ಕಲಾಮಾಧ್ಯಮಗಳೂ ವ್ಯಾಪಾರಿ ಕಾರ್ಯನೀತಿಗಳಿಗಾಗಿ ದುಡಿಯುತ್ತವೆ. ಉದ್ಯಮ ಮತ್ತು ಲಾಭಕೋರತನವೇ ಈ ಕಾರ್ಯನೀತಿ' ಎಂದಿರುವುದು ನಮ್ಮ ವಸ್ತುಸ್ಥಿತಿಗೆ ಅನ್ವಯಿಸುತ್ತದೆ.

ಸಿನಿಮಾಕ್ಕೆ ಬಂಡವಾಳ ಬೇಕೇ ಬೇಕಾದ್ದರಿಂದ ಉದ್ಯಮದ ಆದ್ಯತೆಗಳನ್ನು ಪೂರ್ಣ ನಿರಾಕರಿಸಲಾಗದು. ಅದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ. ಆದರೆ ಉದ್ಯಮದ ಆದ್ಯತೆಗಳು ಅನಿಯಂತ್ರಿತ ಹಾಗೂ ವೈಭವೀಕೃತ (ಅ)ನೀತಿಯಾಗಬಾರದು. ಈ ದೃಷ್ಟಿಯಿಂದ ಕಲಾತ್ಮಕ ಸಿನಿಮಾಗಳಷ್ಟೇ ಅಲ್ಲ ಮುಖ್ಯವಾಹಿನಿ ಚಲನಚಿತ್ರಗಳು ಕೂಡ 'ಸಿನಿಮಾ ಸಂಸ್ಕೃತಿ'ಯ ಸಂರಕ್ಷಣೆ ಮತ್ತು ವಿಸ್ತರಣೆಗೆ ಕಾರಣವಾಗಬೇಕು.



ಬೆಂಗಳೂರನ್ನು ಒಳಗೊಂಡಂತೆ ದೇಶದ ವಿವಿಧ ಕಡೆ ನಡೆಯುವ ಅಂತರರಾಷ್ಟ್ರೀಯ ಚಿತ್ರೋತ್ಸವಗಳು 'ಸಿನಿಮಾ ಸಂಸ್ಕೃತಿ'ಗೆ ಎಷ್ಟು ಪೂರಕವೆಂಬ ಪ್ರಶ್ನೆಯೂ ಮುಖ್ಯ. ಇಂಥ ಚಿತ್ರೋತ್ಸವಗಳು ಹೆಸರೇ ಹೇಳುವಂತೆ ವರ್ಷಕ್ಕೊಮ್ಮೆ ನಡೆಯುವ 'ಉತ್ಸವ'ಗಳು. ಈ ಉತ್ಸವಗಳ ಸಿನಿಮಾ ವೀಕ್ಷಣೆಗೆ ಈಗಾಗಲೇ ಸಿನಿಮಾ ಸಂಸ್ಕೃತಿಯ ಬಗ್ಗೆ ಆಸಕ್ತವಾದ ವರ್ಗದವರು ಬರುವುದೇ ಹೆಚ್ಚು. ಇದರಿಂದ ಈ ವರ್ಗ ಸಮುದಾಯದಲ್ಲಿರುವ ಸಿನಿಮಾ ಸಂಸ್ಕೃತಿಯ ಆಸಕ್ತಿಗೊಂದು ಅವಕಾಶ ಒದಗುತ್ತದೆ. ಇದೊಂದು ಸೀಮಿತ ವಲಯದ ಸೀಮಿತ ಕ್ರಿಯೆ. ಅಷ್ಟರಮಟ್ಟಿಗೆ ಇದು ಸ್ವಾಗತಾರ್ಹ. ಆದರೆ ಅದರಾಚೆಗೆ ಏನು? 'ಕ್ರಿಯೆ'ಯು 'ಪ್ರಕ್ರಿಯೆ' ಆಗಬೇಕು. ಬೆಂಗಳೂರಿನಿಂದ ಹೋಗಿರುವ ಆಸಕ್ತರಿಗೆ ಮತ್ತು ಆಸಕ್ತಿ ಬೆಳೆಸುವ ಒತ್ತಾಸೆಗೆ ಒಂದು ನಿರ್ದಿಷ್ಟ ಕ್ರಿಯಾ ಯೋಜನೆಯನ್ನು ಸರ್ಕಾರ ಮತ್ತು ಚಲನಚಿತ್ರ ಅಕಾಡೆಮಿ ಸಿದ್ಧ ಮಾಡಿ ಕಾರ್ಯರೂಪಕ್ಕೆ ತರಬೇಕು.

ವಿದೇಶಿ ಸಿನಿಮಾಗಳನ್ನು ನೋಡುವುದು ಒಂದು ವರ್ಗದ ಪ್ರತಿಷ್ಠೆಯಾಗದೆ ಕನ್ನಡವನ್ನು ಒಳಗೊಂಡಂತೆ ಎಲ್ಲ ಭಾರತೀಯ ಸಿನಿಮಾಗಳ ಸದಭಿರುಚಿ ಹಾಗೂ ಪ್ರಯೋಗಗಳನ್ನು ಒಳಗೊಳ್ಳುವ ಪ್ರಕ್ರಿಯೆಯಾಗಬೇಕು. ಕಲೆ ಮತ್ತು ಪ್ರಯೋಗ ಪ್ರಧಾನವಾದ ಸಿನಿಮಾಗಳ ಪ್ರದರ್ಶನಕ್ಕೆ 'ಆದ್ಯತೆ' ನೀಡುವ ಮಿನಿ ಚಿತ್ರಮಂದಿರಗಳನ್ನು ಕಡೇಪಕ್ಷ ಜಿಲ್ಲೆಗೊಂದರಂತೆ ಸರ್ಕಾರ ನಿರ್ಮಿಸಬೇಕು. ಸುಮಾರು 250 ಆಸನಗಳ ಮಿನಿ ಚಿತ್ರಮಂದಿರಗಳನ್ನು ಈಗ ಅಸ್ತಿತ್ವದಲ್ಲಿರುವ ಜಿಲ್ಲಾ ರಂಗಮಂದಿರಗಳ ಆವರಣದಲ್ಲಿ ನಿರ್ಮಿಸಲು ಸಾಧ್ಯವೆ ಎಂದು ಪರಿಶೀಲಿಸಬೇಕು. ಅಕಾಡೆಮಿಯಂಥ ಸಂಸ್ಥೆಗಳು ಮತ್ತು ಆಸಕ್ತರು 'ಸಿನಿಮಾ ಸಮಾಜ'ಗಳನ್ನು (ಫಿಲ್ಮ್ ಸೊಸೈಟಿ) ಸ್ಥಾಪಿಸಬೇಕು. ಸಿನಿಮಾ ಸಂಸ್ಕೃತಿ ವಿಸ್ತರಣೆಯು ನಿಗದಿತ ಸಮಯದ ಕ್ರಿಯೆ ಮಾತ್ರವಾಗದೆ ಒಂದು ನಿರಂತರ ಪ್ರಕ್ರಿಯೆಯಾಗಬೇಕು. ಮೊತ್ತಮೊದಲಿಗೆ ಬೌದ್ಧಿಕ ಹುಸಿ ಪ್ರತಿಷ್ಠೆಗೆ ಹೊರತಾದ ಸ್ಥಳೀಯ ಸಿನಿಮಾ ಸಂಸ್ಕೃತಿ ಉಳಿಯಬೇಕು, ಬೆಳೆಯಬೇಕು.

ಚುರುಮುರಿ



ಎಲೆಕ್ಷನ್ ದುಡಿಮೆ

• ಮಣ್ಣೆ ರಾಜು

ವಾರದಿಂದ ನಾಪತ್ತೆಯಾಗಿದ್ದ ಮನೆಕೆಲಸದ ಮಂಗಳಾ ಬಂದಳು. 'ಇಷ್ಟು ದಿನ ಎಲ್ಲಿ ಹೋಗಿದ್ದೆ ಮಂಗಳಾ? ಫೋನ್ ಮಾಡಿದ್ರೂ ರಿಸೀವ್ ಮಾಡ್ತಿಲ್ಲೀಲ್ಲ...' ಸುಮಿಗೆ ಸಿಟ್ಟು ಬಂದಿತ್ತು.

'ಕಂಡೋರ ಮನೆಯ ಕಸಮುಸುರೆ ಕೆಲಸ ಮಾಡಿ ನನಗೂ ಸಾಕಾಗಿದೆ ಅಮ್ಮಾವ್ರೆ. ಮನೆ ಕೆಲಸಕ್ಕೆ ರಾಜೀನಾಮೆ ಕೊಡು ಅಂತ ನನ್ನ ಗಂಡ ಹೇಳ್ತಾವ್ನೆ...' ಎಂದು ಸುಮಿಗೆ ಒಂದು ಪತ್ರ ಕೊಟ್ಟಳು ಮಂಗಳಾ.

'ರಾಜೀನಾಮೆ ಪತ್ರನಾ?!'

'ಅಲ್ಲಾ, ಲೀವ್ ಲೆಟರ್ ಅಮ್ಮಾವ್ರೆ, ಎಲೆಕ್ಷನ್ ಮುಗಿಯೋವರೆಗೂ ರಜೆ ಹಾಕಿದ್ದೀನಿ'.

'ಎಲೆಕ್ಷನ್‌ನಲ್ಲಿ ನಿನಗೇನು ಕೆಲಸ?'

'ಮಾರಮ್ಮನ ಜಾತ್ರೆ ಥರಾ ಅಪರೂಪಕ್ಕೆ ಎಲೆಕ್ಷನ್ ಬಂದ್ಯೆತೆ, ನಾವೂ ಅದರಲ್ಲಿ ಸೇರಿಕೊಂಡು ಆನಂದಪಡೋದು ಬ್ಯಾಡ್ವಾ?'

'ಚುನಾವಣೆ ಪ್ರಚಾರ ಮಾಡ್ತೀಯಾ?'

'ಹೌದು, ಪಕ್ಷಗಳ ಸಮಾವೇಶಕ್ಕೆ ನಮ್ಮನ್ನು ಕರಕೊಂಡು ಹೋಗ್ತಾರೆ, ಹೋಗಿಬರಲು ಬಸ್ ವ್ಯವಸ್ಥೆ ಮಾಡ್ತಾರೆ, ಊಟ-ತಿಂಡಿ ಕೊಟ್ಟು ಕೈಗೆ ಐನೂರು, ಸಾವಿರ ಕೊಡ್ತಾರೆ, ಅದೃಷ್ಟವಿದ್ದರೆ ಬಿರ್ಯಾನಿ ಊಟವೂ ಸಿಗ್ತದೆ'.

'ಸಮಾವೇಶಗಳು ದಿನಾ ಇರೊಲ್ಲ'.

'ಇಲ್ಲದ ದಿನ ತಂಡ ಮಾಡ್ಕೊಂಡು ಮನೆಮನೆಗೆ ಹೋಗಿ ಪಾಂಪ್ಲೆಟ್ ಕೊಟ್ಟು ಪ್ರಚಾರ ಮಾಡ್ತೀವಿ, ಪಕ್ಷದವರು ಸೀರೆಗೀರೆ ಕೊಟ್ಟರೆ ಹಂಚ್ತೀವಿ, ಊಟ-ತಿಂಡಿ ಕೊಟ್ಟು ಒಬ್ಬೊಬ್ಬರಿಗೆ ದಿನಕ್ಕೆ ಐನೂರು, ಸಾವಿರ ಕೊಡ್ತಾರೆ, ಮುಖ್ಯವಾಗಿ ನಮಗೆ ಗೌರವ ಕೊಡ್ತಾರೆ'.

'ನಿನ್ನ ಗಂಡನೂ ಪ್ರಚಾರಕ್ಕೆ ಬರ್ತಾನಾ?'

'ಬರ್ತಾನೆ, ಹಳ್ಳಿಯಲ್ಲಿದ್ದ ಅತ್ತೆ, ಮಾವನನ್ನೂ ಕರೆಸಿಕೊಂಡು ಎಲೆಕ್ಷನ್ ಡ್ಯೂಟಿಗೆ ಸೇರಿಸಿದ್ದೀನಿ, ಎಲ್ರೂ ಸೇರಿ ದಿನಕ್ಕೆ ನಾಕ್ಕೈದು ಸಾವಿರ ಸಂಪಾದನೆ ಮಾಡ್ತೀವಿ'.

'ಒಳ್ಳೇ ಸಂಪಾದನೆ ಮಾಡ್ತಿದ್ದೀರಿ...'

'ಎಷ್ಟು ಜನ ಬಂದರೂ ಸೇರಿಸಿಕೊಳ್ತೀವಿ, ಮನೆಯಲ್ಲಿ ಕಾಲ ಕಳೆಯೋ ಬದಲು ನನ್ನ ಜೊತೆ ನೀವೂ ಬನ್ನಿ, ಕೈ ತುಂಬಾ ಸಂಪಾದನೆ ಮಾಡಬಹುದು' ಎಂದು ಹೇಳುತ್ತಾ ಮಂಗಳಾ ಹೊರಟಳು.

ಸಂಗತ

ಭೂಮಿಯ ಬಿಸಿಗೆ ತಂಪೆರೆವವರಾರು?

ಭವಿಷ್ಯದ ಪೀಳಿಗೆಗೆ ಭೂಮಿಯನ್ನು ಉಳಿಸಲು ಎಲ್ಲ ರಾಷ್ಟ್ರಗಳೂ ಜೊತೆಗೂಡಿ ಕಾರ್ಯನಿರ್ವಹಿಸುವ ತುರ್ತು ಇದೆ

• ಡಾ. ಎಚ್.ಬಿ.ಚಂದ್ರಶೇಖರ್

ಬೇಸಿಗೆಯ ಬಿಸಿ ದಿನೇ ದಿನೇ ಏರುತ್ತಿದೆ. ಇದೇ ಸಮಯಕ್ಕೆ, ವಾತಾವರಣದಲ್ಲಿ ಆಗುತ್ತಿರುವ ಬದಲಾವಣೆಯ ಕಾರಣದಿಂದ ಭೂಮಿಯು ತೀವ್ರ ಅಪಾಯದಲ್ಲಿರುವ ಕುರಿತಂತೆ ಪ್ರಪಂಚದ ಖ್ಯಾತ ವಿಜ್ಞಾನಿಗಳು ವರದಿಯೊಂದನ್ನು ಬಿಡುಗಡೆ ಮಾಡಿದ್ದಾರೆ. ಈ ವರದಿಯನ್ನು ಅಮೆರಿಕದ ಹೆಚ್ಚಿನ ಜನರು ಅರ್ಥ ಮಾಡಿಕೊಳ್ಳಲು ಕಷ್ಟಪಡುತ್ತಿದ್ದಾರೆ ಎನ್ನಲಾದ ಸುದ್ದಿಯು ಕುತೂಹಲಕ್ಕೆ ಕಾರಣವಾಗಿದೆ.

ತಮಗೆ ಚಿರಪರಿಚಿತವಾದ ಉಷ್ಣಾಂಶ ಮಾಪನವಾದ ಫ್ಯಾರನ್‌ಹೀಟ್ ಬದಲು ಸೆಲ್ಸಿಯಸ್ ಅನ್ನು ಉಲ್ಲೇಖಿಸಿ ವಿಶ್ಲೇಷಣೆ ಮಾಡಿರುವ ಕಾರಣ, ವರದಿಯನ್ನು ಅರ್ಥೈಸಿಕೊಳ್ಳುವುದು ಕಠಿಣವಾಗುತ್ತಿದೆ ಎಂಬುದು ಬಹುತೇಕ ಅಮೆರಿಕನ್ನರ ಅಂಬೋಣ.

ವಿಶ್ವದಲ್ಲಿ ಅಮೆರಿಕ ಸೇರಿ ಬೆರಳೆಣಿಕೆಯಷ್ಟು ದೇಶಗಳು ಮಾತ್ರ ಉಷ್ಣಾಂಶವನ್ನು ಫ್ಯಾರನ್‌ಹೀಟ್‌ನಲ್ಲಿ ಸೂಚಿಸುತ್ತವೆ. ಉಳಿದಂತೆ ಹೆಚ್ಚಿನ ದೇಶಗಳು ಫ್ಯಾರನ್‌ಹೀಟ್ ಬಳಕೆ ಬಿಟ್ಟು ಸೆಲ್ಸಿಯಸ್ ಅನ್ನು ಬಳಕೆ ಮಾಡಲು ರೂಢಿ ಮಾಡಿಕೊಂಡರೂ ಅಮೆರಿಕವು ತನ್ನ ಜಡತ್ವದ ಕಾರಣದಿಂದ ಫ್ಯಾರನ್‌ಹೀಟ್ ಬಳಕೆಯೇ ಸುಲಭ ಎನ್ನುತ್ತಿದೆ.

ವಿದ್ಯಾರ್ಥಿಗಳಿಗೆ ಉಷ್ಣಾಂಶ ಮಾಪನದ ಬಗ್ಗೆ ಪಾಠವಿದೆ. ಆದರೆ ಫ್ಯಾರನ್‌ಹೀಟ್ ಮತ್ತು ಸೆಲ್ಸಿಯಸ್ ಕುರಿತ ವಿಷಯ ಜನಸಾಮಾನ್ಯರಿಗೂ ಕುತೂಹಲ ಹುಟ್ಟಿಸುತ್ತದೆ. 1724ರಲ್ಲಿ ಜರ್ಮನಿಯ ಡೇನಿಯಲ್ ಗೇಬ್ರಿಯಲ್ ಫ್ಯಾರನ್‌ಹೀಟ್ ಎಂಬ ವಿಜ್ಞಾನಿ ಉಷ್ಣಾಂಶವನ್ನು ಅಳೆಯಲು ಅನ್ವೇಷಿಸಿದ ಮಾಪನವು ಫ್ಯಾರನ್‌ಹೀಟ್ ಎಂದೇ ಹೆಸರಾಯಿತು. 1742ರಲ್ಲಿ ಸ್ವೀಡನ್ ದೇಶದ ಅಂಡ್ರೆಸ್ ಸೆಲ್ಸಿಯಸ್ ಎಂಬ ವಿಜ್ಞಾನಿ ಉಷ್ಣಾಂಶವನ್ನು ಅಳೆಯಲು ಫ್ಯಾರನ್‌ಹೀಟ್‌ಗಿಂತಲೂ ಸುಧಾರಿತ ಮಾಪನವನ್ನು ಕಂಡುಹಿಡಿದ. ಆತನದೇ ಹೆಸರಿನಲ್ಲಿ ಅದು ಸೆಲ್ಸಿಯಸ್ ಎಂದೇ ಖ್ಯಾತವಾಯಿತು.

ಫ್ಯಾರನ್‌ಹೀಟ್ ಪದ್ಧತಿಯಲ್ಲಿ ನೀರಿನ ಘನೀಕರಿಸುವ (ಮಂಜುಗಡ್ಡೆಯಾಗುವ) ಬಿಂದು 32 ಡಿಗ್ರಿಯಾದರೆ ಕುದಿಯುವ ಬಿಂದು 212 ಡಿಗ್ರಿ. ಸೆಲ್ಸಿಯಸ್ ಪದ್ಧತಿಯಲ್ಲಿ ನೀರಿನ ಘನೀಕರಿಸುವ ಬಿಂದು 0 ಡಿಗ್ರಿಯಾದರೆ ಕುದಿಯುವ ಬಿಂದು 100 ಡಿಗ್ರಿ ಎಂದು ಬಳಕೆ ಮಾಡಿದ್ದು ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತಿದ್ದ ಕಾರಣ ಸೆಲ್ಸಿಯಸ್ ಪದ್ಧತಿ ವಿಶ್ವದೆಲ್ಲೆಡೆ ಮಾನ್ಯತೆ ಪಡೆದು ಸ್ಟ್ಯಾಂಡರ್ಡ್ ಮಾಪನವಾಗಿ ಮಾನ್ಯವಾಯಿತು.

ವಿಶ್ವದ ಹೆಚ್ಚಿನ ದೇಶಗಳು ಸೆಲ್ಸಿಯಸ್ ಮತ್ತು ಫ್ಯಾರನ್‌ಹೀಟ್ ಎರಡೂ ಪದ್ಧತಿಗೆ ಹೊಂದಿಕೊಂಡಿವೆ. ವಾತಾವರಣದ ಬದಲಾವಣೆಗೆ ಸಂಬಂಧಿಸಿದ ವರದಿಯಲ್ಲಿ ಎರಡೂ ಮಾಪನಗಳನ್ನು ಬಳಕೆ ಮಾಡಿದರೆ ಅಮೆರಿಕದ ಎಲ್ಲಾ ಜನರಿಗೆ ತಿಳಿಯುತ್ತದೆ ಮತ್ತು ಇದರಿಂದ ಪರಿಸರ ಸಂರಕ್ಷಣೆಗೆ ಸಹಾಯವಾಗುತ್ತದೆ ಎಂದು 'ದಿ ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ವರದಿ ಮಾಡಿದೆ.

ಇನ್ನು ನಮ್ಮ ನಿಮ್ಮ ಅಳಿವು ಉಳಿವಿನ ಪ್ರಶ್ನೆಯಾದ ಭೂಮಿಯ ತಾಪಮಾನ ಏರಿಕೆಗೆ ಸಂಬಂಧಿಸಿದ ವಿಷಯಕ್ಕೆ ಬಂದರೆ, ವಿಶ್ವದ ಎಲ್ಲ ರಾಷ್ಟ್ರಗಳೂ ತಕ್ಷಣದ ತುರ್ತು ಕ್ರಮಗಳನ್ನು ತೆಗೆದುಕೊಂಡರೆ ಭೂಮಿಯನ್ನು ರಕ್ಷಿಸಲು ಸಾಧ್ಯ ಎನ್ನುತ್ತದೆ ಹವಾಮಾನ ಬದಲಾವಣೆ ಕುರಿತ ಇಂಟರ್‌ಗವರ್ನಮೆಂಟಲ್ ಪ್ಯಾನಲ್ (ಐಪಿಸಿಸಿ) ವರದಿ. ಈ ದೃಷ್ಟಿಯಿಂದ ಮುಂದಿನ ದಶಕವು ನಿರ್ಣಾಯಕವಾದುದಾಗಿದೆ. ಎಲ್ಲ ರಾಷ್ಟ್ರಗಳೂ ಮೀಥೇನ್, ಇಂಗಾಲಾಮ್ಲ, ನೈಟ್ರಸ್ ಆಕ್ಸೈಡ್ ಮತ್ತು ಕೈಗಾರಿಕಾ ಅನಿಲಗಳಾದ ಹೈಡ್ರೊಫ್ಲೋರೊ ಕಾರ್ಬನ್‌ನಂತಹ ಹಸಿರುಮನೆ ಅನಿಲಗಳನ್ನು ದಾಖಲೆ ಪ್ರಮಾಣದಲ್ಲಿ ವಾತಾವರಣಕ್ಕೆ ಸೇರಿಸುತ್ತಿರುವುದು ನಿಸ್ಸಂದೇಹವಾಗಿದೆ ಎಂದು ವರದಿ ತಿಳಿಸುತ್ತದೆ.



ಪ್ರಸ್ತುತ ಜಾಗತಿಕ ಉಷ್ಣಾಂಶವು ಕೈಗಾರಿಕಾಪೂರ್ವ ಅವಧಿಗಿಂತ 1.1 ಡಿಗ್ರಿ ಸೆಲ್ಸಿಯಸ್ ಹೆಚ್ಚು ಇದ್ದು, 2030ಕ್ಕಿಂತ ಮುಂಚೆ ಈ ಪ್ರಮಾಣವು 1.5 ಡಿಗ್ರಿ ಸೆಲ್ಸಿಯಸ್ ಆಗಲಿದೆ. ಈ ಪ್ರಮಾಣವನ್ನು 2 ಡಿಗ್ರಿ ಸೆಲ್ಸಿಯಸ್ ಒಳಗೆ ಇಡಲು, ಪ್ರಸ್ತುತ ವಾತಾವರಣಕ್ಕೆ ಸೇರಿಸುತ್ತಿರುವ ಹಸಿರುಮನೆ ಅನಿಲಗಳನ್ನು 2030ರೊಳಗೆ ಶೇ 21 ಹಾಗೂ 2035ರೊಳಗೆ ಶೇ 35ರಷ್ಟು ತಗ್ಗಿಸಬೇಕು ಎಂದು ವರದಿ ತಿಳಿಸುತ್ತದೆ.

ಭೂಮಿಯ ತಾಪಮಾನ ಏರಿಕೆಯಿಂದ ಕಂಡು ಕೇಳರಿಯದಂತಹ ಚಂಡಮಾರುತ, ಬಿಸಿಗಾಳಿ, ಬರ, ಬಿಸಿಯಾದ ವಾತಾವರಣ, ವಾತಾವರಣದಲ್ಲಿ ತೀವ್ರ ಏರುಪೇರುಗಳು ಸಂಭವಿಸುತ್ತಿವೆ. ಯಾವುದೇ ತಪ್ಪುಗಳನ್ನು ಮಾಡಿರದ, ಪ್ರಸ್ತುತ ಜಗತ್ತಿಗೆ ಕಾಲಿಡುತ್ತಿರುವ ಕಂದಮ್ಮಗಳು ಹಾಗೂ ಭವಿಷ್ಯದ ಜನಾಂಗವು ಭೂಮಿಯ ಬಿಸಿಯೇರಿಕೆಯ ಘೋರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ವಾರ್ಷಿಕ 30 ಗಿಗಾ ಟನ್‌ನಷ್ಟು (ಒಂದು ಗಿಗಾ ಟನ್ 100 ಕೋಟಿ ಟನ್‌ಗೆ ಸಮ) ಇಂಗಾಲಾಮ್ಲವನ್ನು ವಾತಾವರಣಕ್ಕೆ ಸೇರಿಸಲಾಗುತ್ತಿದೆ. ಇದರಲ್ಲಿ ಅಗ್ರಸ್ಥಾನ ಪಡೆದ ಚೀನಾದ ಪಾಲು ಶೇ 30, ಅಮೆರಿಕದ ಪಾಲು ಶೇ 14 ಹಾಗೂ ಭಾರತದ ಪಾಲು ಶೇ 7ರಷ್ಟು ಆಗಿದೆ.

ಭವಿಷ್ಯದ ಜನಾಂಗಕ್ಕೆ ಭೂಮಿಯನ್ನು ಉಳಿಸುವ ಹೊಣೆ ಎಲ್ಲರದ್ದೂ ಆಗಿದೆ. ಈ ದಿಸೆಯಲ್ಲಿ ಎಲ್ಲ ರಾಷ್ಟ್ರಗಳೂ ಜೊತೆಗೂಡಿ ಕಾರ್ಯನಿರ್ವಹಿಸುವ ತುರ್ತು ಇದೆ.

ವಾಚಕರ ವಾಣಿ

ರೈಲ್ವೆ ಇಲಾಖೆ: ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಲಿ

ಮೈಸೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ಎರಡು ಗಂಟೆ ಪ್ರಯಾಣ. ಆದರೆ ರೈಲು ಕೆಂಗೇರಿ ನಿಲ್ದಾಣದಿಂದ ಸಿಟಿ ರೈಲು ನಿಲ್ದಾಣ ತಲುಪಲು ಗಂಟೆಗಟ್ಟಲೆ ಸಮಯ ತೆಗೆದುಕೊಳ್ಳುತ್ತದೆ. ಹಾಗೆಯೇ ಬೆಂಗಳೂರಿನಿಂದ ತುಮಕೂರು ಕಡೆಗೆ ಹೋಗುವ ಅನೇಕ ರೈಲುಗಳು ಇತ್ತೀಚೆಗೆ ನಿರಂತರವಾಗಿ ತಡವಾಗಿ ನಿಲ್ದಾಣವನ್ನು ತಲುಪುತ್ತಿವೆ. ರೈಲುಗಾಡಿಗಳು ಈ ಪರಿ ವಿಳಂಬವಾದರೆ ಪ್ರಯಾಣಿಕರು ಸಮಯಕ್ಕೆ ಸರಿಯಾಗಿ ತಲುಪಲು ಹೇಗೆ ಸಾಧ್ಯ?

ಜಪಾನಿನಲ್ಲಿ ರೈಲುಗಳು ಇಂತಿಷ್ಟೇ ಸಮಯಕ್ಕೆ ನಿಲ್ದಾಣ ತಲುಪುವಂತೆ ಮಾಡುವಲ್ಲಿ ಅಲ್ಲಿನ ರೈಲ್ವೆ ಇಲಾಖೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುತ್ತದೆ. ಜನರು ರೈಲು ನಿಲ್ದಾಣಗಳನ್ನು ಬಳಸಲು ಉತ್ತಮವಾದ ಅನುಕೂಲಗಳು ಇರುವುದರಿಂದ ಅವರು ಹಳಿ ದಾಟುವುದನ್ನು ಕಾಣಲು ಸಾಧ್ಯವಿಲ್ಲ. ನಮ್ಮ ಜನಪ್ರತಿನಿಧಿಗಳು, ಅಧಿಕಾರಿಗಳು ಜಪಾನ್‌ಗೆ ಭೇಟಿ ಕೊಡುತ್ತಾರೆ. ಅಲ್ಲಿನ ಆಡಳಿತವು ಉತ್ತಮವಾದ ರೈಲ್ವೆ ವ್ಯವಸ್ಥೆ ಹೊಂದಿರುವುದನ್ನು ನೋಡಿಬಂದಿರುವ ಅನೇಕ ನಾಗರಿಕರೂ ನಮ್ಮಲ್ಲಿ ಇದ್ದಾರೆ. ಆದರೆ, ಅಂತಹ ವ್ಯವಸ್ಥೆ ಭಾರತದಲ್ಲಿ ಸಾಧ್ಯವಿಲ್ಲ ಏಕೆ? ರೈಲುಗಳ ಸಂಚಾರವನ್ನು ನಿರ್ವಹಿಸುವಲ್ಲಿ ಇಲಾಖೆಯು ಅಸಮರ್ಥವಾಗಿದೆಯೇ? ಅಥವಾ ಅಗತ್ಯ ಸೌಕರ್ಯಗಳ ಕೊರತೆಯೇ? ರೈಲ್ವೆ ಇಲಾಖೆಯು ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ತನ್ನ ಕಾರ್ಯಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬೇಕು ಮತ್ತು ಅಗತ್ಯ ಸೌಕರ್ಯಗಳನ್ನು ಒದಗಿಸಲು ಸರ್ಕಾರವೂ ಮುಂದಾಗಬೇಕು.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಪರೀಕ್ಷಾ ಕೇಂದ್ರ: ನಡೆಯಲಿ ಮೌಲ್ಯಮಾಪನ

ರಾಜ್ಯದ ಪ್ರಮುಖ ನಗರಗಳಲ್ಲಿ ಯುಪಿಎಸ್‌ಸಿ ಪರೀಕ್ಷೆ ನಡೆಯುವ ಹೆಚ್ಚಿನ ಕೇಂದ್ರಗಳು ಮೂಲ ಸೌಲಭ್ಯ ಇಲ್ಲದ ಶಾಲಾ ಕಾಲೇಜು ಕಟ್ಟಡಗಳಾಗಿರುತ್ತವೆ. ಇಂತಹ ಕೇಂದ್ರಗಳು ಬೆಂಗಳೂರು ನಗರದಾದ್ಯಂತ ಬಹಳಷ್ಟಿವೆ. ಪಾಠ ಪ್ರವಚನ ನಡೆಯುತ್ತದೆ ಎಂಬ ಕಾರಣಕ್ಕೆ ಹಿಂದುಮುಂದು ಯೋಚಿಸದೆ ಇವುಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ಆಯ್ಕೆ ಮಾಡಲಾಗುತ್ತದೆ. ಆದರೆ ಪಾಠ ಪ್ರವಚನಗಳೇ ಬೇರೆ, ಜೀವನ ರೂಪಿಸುವ ಪರೀಕ್ಷೆಗಳೇ ಬೇರೆ.

ಕಳೆದ ಮಾರ್ಚ್‌ನಲ್ಲಿ ನನ್ನ ಮಗಳು ಬೆಂಗಳೂರಿನ ಜಯನಗರದ ಇಂಥದ್ದೇ ಒಂದು ಕೇಂದ್ರದಲ್ಲಿ ಪರೀಕ್ಷೆಗೆ ಹಾಜರಾದಳು. ಅವಳ ಅನುಭವದ ಪ್ರಕಾರ, ಈ ಕೇಂದ್ರದ ಸಮೀಪ ಒಂದೆಡೆ ಬಸ್ ನಿಲ್ದಾಣ, ಇನ್ನೊಂದೆಡೆ ಭಯಂಕರ ಶಬ್ದ ಉಂಟುಮಾಡುವ ವಾಹನ ರಿಪೇರಿ ಅಂಗಡಿ ಇತ್ತು. ಪರೀಕ್ಷಾ ಕೊಠಡಿಯ ಪಕ್ಕದಲ್ಲಿ ಇದ್ದ ಶೌಚಾಲಯದ ದುರ್ನಾತ ಮೂಗಿಗೆ ಬಡಿಯುತ್ತಿತ್ತು. ಇಡೀ ಕೊಠಡಿಗೆ ಇದ್ದುದು ಒಂದೇ ಫ್ಯಾನು. ಅವಳ ಕೊಠಡಿ ನಾಲ್ಕನೇ ಅಂತಸ್ತಿನಲ್ಲಿದ್ದು, ಅಲ್ಲಿಗೆ ಲಿಫ್ಟ್ ಕೂಡ ಇರಲಿಲ್ಲ. ಶಾಲಾ ಮುಖ್ಯಸ್ಥರನ್ನು ಈ ಬಗ್ಗೆ ಪ್ರಶ್ನಿಸಿದಾಗ, 'ನೋಡಿ, ನಿಮ್ಮನ್ನು ನೋಡಿದರೆ ನೀವು ಉತ್ತರ ಕರ್ನಾಟಕದವರು ಎನಿಸುತ್ತದೆ. ಅಲ್ಲಿ ಎಲ್ಲ ರೀತಿಯ ಸೌಲಭ್ಯ ಇರುವ ಶಾಲೆಗಳು ಇವೆಯೇ? ಇಲ್ಲಿ ಪ್ರತೀ ರವಿವಾರ ಒಂದಿಲ್ಲೊಂದು ಪರೀಕ್ಷೆ ನಡೆಸುತ್ತೇವೆ. ಯಾರೂ ದೂರು ನೀಡಿಲ್ಲ, ನಿಮ್ಮದೇನು? ಸುಮ್ಮನೆ ಪರೀಕ್ಷೆ ಬರೆದು ಹೋಗಿ, ಮೊದಲು ಪರೀಕ್ಷೆ ಕಡೆ ಗಮನ ಕೊಡಿ' ಎಂದು ದಬಾಯಿಸುವ ರೀತಿಯ ಉತ್ತರ ಬಂತು! ಇದರಿಂದ ಅವಳಿಗೆ ಮುಜುಗರವಾಗಿದ್ದಷ್ಟೇ ಅಲ್ಲ ಅಲ್ಲಿದ್ದ ನೂರಾರು ಅಭ್ಯರ್ಥಿಗಳಲ್ಲಿ ಒಬ್ಬರೂ ಅವಳಿಗೆ ಬೆಂಬಲವಾಗಿ ಮಾತನಾಡಲಿಲ್ಲವಂತೆ. ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಯಾರಿಗೆ ದೂರು ನೀಡಬೇಕು? ಸ್ಥಳೀಯ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ, ಉತ್ತಮ ಸೌಲಭ್ಯ ಇರುವ ಕೇಂದ್ರಗಳನ್ನು ಮಾತ್ರ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಬೇಕು. ಪರೀಕ್ಷೆ ಮುಗಿದ ನಂತರ ಪರೀಕ್ಷಾರ್ಥಿಗಳಿಗೆ ಆ ಕೇಂದ್ರದಲ್ಲಿನ ವ್ಯವಸ್ಥೆ ಬಗ್ಗೆ ಅಭಿಪ್ರಾಯ ಸಲ್ಲಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು.

ಎಸ್.ಆರ್.ಬಿರಾದಾರ, ವಿಜಯಪುರ

ರಾಹುಲ್ ಅಲ್ಲ 'ರಾಹು' ಸವಾಲು!

'ರಾಹುಲ್ ಗಾಂಧಿ ಒಬ್ಬ ಗೊಂದಲದ ಮನಃಸ್ಥಿತಿಯ ವ್ಯಕ್ತಿ. ಅಂತಹವರು 2024ರ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಗೆ ಸವಾಲು ಒಡ್ಡಬಲ್ಲರು' ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಪ್ರಶ್ನಿಸಿದ್ದಾರೆ. ಹೌದು, ಅವರ ಅಭಿಪ್ರಾಯವನ್ನು ಒಪ್ಪಬಹುದು. ರಾಹುಲ್ ಗಾಂಧಿ ಸವಾಲೇ ಅಲ್ಲ. ಆದರೆ ಸಚಿವೆ ಬಹುಶಃ ಮರೆತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಮೋದಿಯವರಿಗೆ ಸವಾಲಾಗುವುದಕ್ಕೆ ರಾಹುಲ್ ಗಾಂಧಿ ಅಥವಾ ವಿರೋಧಪಕ್ಷಗಳೇ ಅಲ್ಲದೆ ಅನೇಕ ಪ್ರಮುಖ ಅಂಶಗಳಿವೆ. ಭರಿಸಲಾಗದ ಇಂಧನದ ಬೆಲೆ, ಅತ್ಯಗತ್ಯವಾದ ಅಡುಗೆ ಸಿಲಿಂಡರ್ ಬೆಲೆ, ನಿತ್ಯೋಪಯೋಗಿ ಪದಾರ್ಥಗಳ ಹೆಚ್ಚುತ್ತಿರುವ ಬೆಲೆಯು ಸವಾಲೇ ಸರಿ.

ಇವಿಷ್ಟೇ ಅಲ್ಲದೆ ಶೇಕಡ 40ರಷ್ಟು ಕಮಿಷನ್, ಭ್ರಷ್ಟ ಅಧಿಕಾರಿಗಳು ಪಡೆಯುವ ಲಂಚ, ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣ, ಸಿ.ಡಿ ಹಗರಣ, ನಾಲಿಗೆ ಹೊರಳಿದಂತೆ ಮಾತನಾಡುವ ನಾಯಕರು, ಕುಲಗೆಟ್ಟ ರಸ್ತೆಗಳು, ಕಳಪೆ ಕಾಮಗಾರಿಗಳು, ಕೆಟ್ಟ ರಸ್ತೆಗೂ ದುಬಾರಿ ಟೋಲು... ಹೀಗೆ ಸವಾಲೆಸೆಯುವ ಪಟ್ಟಿ ಹನುಮಂತನ ಬಾಲವನ್ನೂ ನಾಚಿಸುವಂತೆ ಬೆಳೆಯುತ್ತದೆ. ಸಚಿವೆ ಇದನ್ನಾಕೆ ಗಮನಿಸಲಿಲ್ಲವೋ... ಮಾನ್ಯ ಪ್ರಧಾನಿಯವರಿಗೆ ರಾಹುಲ್ ಸವಾಲಾಗದಿದ್ದರೂ ಇಂತಹ 'ರಾಹು'ಗಳ ಕಾಟ ಇರುವುದಂತೂ ಖಚಿತ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಹುಮಾನದ ಮೊತ್ತ: ಲಿಂಗ ತಾರತಮ್ಯವೇಕೆ?

ಕ್ರೀಡಾಂಗಣವು ವಿಶ್ವಭ್ರಾತೃತ್ವದ ಪ್ರತೀಕವಾಗಿರುತ್ತದೆ. ಇಲ್ಲಿ ಯಾರೂ ತಮ್ಮ ಜಾತಿ, ಲಿಂಗ, ಧರ್ಮದ ಆಧಾರದ ಮೇಲೆ ಸ್ಪರ್ಧೆ ಮಾಡುವುದಿಲ್ಲ. ಕ್ರೀಡೆಯೇ ಅವರ ಧರ್ಮವಾಗಿರುತ್ತದೆ. ಆದರೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಾಸವಾದ ಈ ತಿಂಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಭಿಮಾನಿ ಬಳಗವು ಮುಖ್ಯಮಂತ್ರಿಯವರ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಸವಣೂರಿನಲ್ಲಿ ರಾಷ್ಟ್ರಮಟ್ಟದ ಸವಣೂರ ಕಬಡ್ಡಿ ಉತ್ಸವವನ್ನು ಮೂರು ದಿನಗಳ ಕಾಲ ಏರ್ಪಡಿಸಿತ್ತು.

ನೋವಿನ ಸಂಗತಿಯೆಂದರೆ, ಬಹುಮಾನದ ಮೊತ್ತದಲ್ಲಿ ಲಿಂಗ ತಾರತಮ್ಯ ಮಾಡಿದ್ದು. ಪುರುಷರ ತಂಡಕ್ಕೆ ಮೊದಲ ಬಹುಮಾನ ₹ 5 ಲಕ್ಷವಾದರೆ, ಮಹಿಳಾ ತಂಡಕ್ಕೆ ₹ 3 ಲಕ್ಷ. ದ್ವಿತೀಯ ಬಹುಮಾನ ಪುರುಷರ ತಂಡಕ್ಕೆ ₹ 3 ಲಕ್ಷವಾದರೆ, ಮಹಿಳಾ ತಂಡಕ್ಕೆ ₹ 2 ಲಕ್ಷ... ಬಹುಮಾನದ ಮೊತ್ತದಲ್ಲಿ ಹೀಗೆ ಲಿಂಗ ತಾರತಮ್ಯ ಮಾಡುವುದು ಎಷ್ಟು ಸರಿ?

ಎ.ಎಸ್.ಮಕಾನದಾರ, ಗದಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಸ್ಸಾಂ: ಕ್ಷೇತ್ರ ಮರುವಿಂಗಡಣೆ ಸುತ್ತ ಹಲವು ಪ್ರಶ್ನೆ



ಪ್ರಜಾವಾಣಿ ವಾರ್ತೆ

ಅಸ್ಸಾಂ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ನಡೆಯುತ್ತಿದೆ. ಕ್ಷೇತ್ರ ಮರುವಿಂಗಡಣೆಯು ಯಾವುದೇ ರಾಜ್ಯದ ಚುನಾವಣಾ ರಾಜಕೀಯದ ಅತ್ಯಂತ ಮಹತ್ವದ ಭಾಗ ಎಂದು ಪರಿಗಣಿಸಲಾಗುತ್ತದೆ. ಇದು ಅತ್ಯಂತ ಸೂಕ್ಷ್ಮ ಮತ್ತು ಹೆಚ್ಚು ಪರಿಣಾಮ ಬೀರುವಂತಹ ಪ್ರಕ್ರಿಯೆ. ಆಯಾ ರಾಜ್ಯದ ರಾಜಕೀಯ ಸಂಯೋಜನೆಯನ್ನೇ ಬದಲಿಸುವಷ್ಟು ಬಲಿಷ್ಠವಾದ ಪ್ರಕ್ರಿಯೆ ಇದು. ಹೀಗಾಗಿ ಕ್ಷೇತ್ರ ಮರುವಿಂಗಡಣೆಯು ಹಲವು ತಿಂಗಳು ನಡೆಯುತ್ತದೆ. ಅಸ್ಸಾಂನಲ್ಲಿ ನಡೆಯುತ್ತಿರುವ ಕ್ಷೇತ್ರ ಮರುವಿಂಗಡಣೆಯೂ ಬೇರೆ-ಬೇರೆ ಕಾರಣಗಳಿಗೆ ಸುದ್ದಿಯಾಗುತ್ತಿದೆ. ಎಲ್ಲಾ ಪಕ್ಷಗಳೂ ಮರುವಿಂಗಡಣೆಯನ್ನು ಸ್ವಾಗತಿಸಿವೆಯಾದರೂ, ಹಲವು ಆಕ್ಷೇಪಗಳನ್ನೂ ಎತ್ತಿವೆ. ಈ ಆಕ್ಷೇಪಗಳನ್ನು ಕಡೆಗಣಿಸಲಾಗುತ್ತಿದೆ ಎಂದೇ ಕ್ಷೇತ್ರ ಮರುವಿಂಗಡಣೆಗೆ ವಿರೋಧ ವ್ಯಕ್ತವಾಗುತ್ತಿದೆ.

ಇದು ಅತ್ಯಂತ ಸೂಕ್ಷ್ಮವಾದ ಪ್ರಕ್ರಿಯೆಯಾದ ಕಾರಣ, ಚುನಾವಣಾ ಆಯೋಗವು ನೇರವಾಗಿ ಈ ಕೆಲಸವನ್ನು ಮಾಡುವುದಿಲ್ಲ. ಬದಲಿಗೆ ಸಂವಿಧಾನದತ್ತವಾಗಿ ರಚನೆಯಾದ ಮರುವಿಂಗಡಣಾ ಆಯೋಗವು ಈ ಕೆಲಸ ಮಾಡುತ್ತದೆ. ಅಸ್ಸಾಂ ಕ್ಷೇತ್ರಗಳ ಮರುವಿಂಗಡಣೆಗೆ ಆಯೋಗವು ತನ್ನ ಪ್ರಕ್ರಿಯೆಯನ್ನು ಆರಂಭಿಸಿ ಹಲವು ತಿಂಗಳು ಕಳೆದಿವೆ. ಈ ಆಯೋಗವು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ನಿರ್ದೇಶಿಸಲು ಹಲವು ಕಾನೂನು ಮತ್ತು ನಿಯಮಗಳು ಇವೆ. ಈ ಕಾನೂನುಗಳನ್ನು ಪಾಲಿಸುತ್ತಿಲ್ಲ ಎಂಬ ಆರೋಪವೂ ಇದೆ.

ಕ್ಷೇತ್ರ ಮರುವಿಂಗಡಣೆಗೂ ಮುನ್ನ ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು, ಎಲ್ಲಾ ನೋಂದಾಯಿತ ಪಕ್ಷಗಳು, ರಾಜ್ಯದ ಎಲ್ಲಾ ಸಮುದಾಯಗಳನ್ನು ಪ್ರತಿನಿಧಿಸುವ ಸಂಘಟನೆಗಳು ಮತ್ತು ಗುಂಪುಗಳ ಜತೆಗೆ ಆಯೋಗವು ಸಮಾಲೋಚನೆ ನಡೆಸಬೇಕು. ಅವರು ನೀಡುವ ಸಲಹೆಗಳನ್ನು ಕೇಳಬೇಕು ಮತ್ತು ಪರಿಶೀಲಿಸಬೇಕು. ಮೊದಲ ಹಂತದ ಸಭೆಯಲ್ಲಿ ರಾಜ್ಯದ ಎಲ್ಲಾ ಪಕ್ಷಗಳೂ ಭಾಗಿಯಾಗಿದ್ದವು. ತಾವು ನೀಡಿದ್ದ ಸಲಹೆಗಳನ್ನು ಆಯೋಗವು ಪರಿಗಣಿಸಿಲ್ಲ ಎಂದು ಪಕ್ಷಗಳು ಆರೋಪಿಸಿವೆ. ಆಯೋಗವು ಈಚೆಗಷ್ಟೇ ಕರೆದಿದ್ದ ಸಭೆಗೆ ಕಾಂಗ್ರೆಸ್ ಗೈರುಹಾಜರಾಗಿದೆ.

ಈ ಆಕ್ಷೇಪ ಮತ್ತು ಆರೋಪಗಳನ್ನು ಆಯೋಗವು ತಿರಸ್ಕರಿಸುತ್ತಲೇ ಇದೆ. 'ಎಲ್ಲಾ ಸಲಹೆ ಮತ್ತು ಆಕ್ಷೇಪಗಳನ್ನು ಪರಿಗಣಿಸಿದ್ದೇವೆ. ಆಕ್ಷೇಪಗಳನ್ನು ದಾಖಲಿಸಲು ಏಪ್ರಿಲ್ 15ರವರೆಗೂ ಅವಕಾಶವಿದೆ. ಆನಂತರವಷ್ಟೇ ಕರಡು ಪಟ್ಟಿಯನ್ನು ಬಿಡುಗಡೆ ಮಾಡುತ್ತೇವೆ. ಅದಕ್ಕೆ ವ್ಯಕ್ತವಾಗುವ ಆಕ್ಷೇಪಗಳನ್ನೂ ಪರಿಗಣಿಸಿ, ಅಂತಿಮ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ' ಎಂದು ಆಯೋಗವು ಸ್ಪಷ್ಟನೆ ನೀಡಿದೆ.

2008ರಲ್ಲಿ ಅಸ್ಸಾಂನಲ್ಲಿ ಕ್ಷೇತ್ರ ಮರುವಿಂಗಡಣೆ ಯತ್ನ ನಡೆದಿತ್ತು. ರಾಜ್ಯದ ಉತ್ತರ ಭಾಗದ ಮೂರು ಕ್ಷೇತ್ರಗಳ ಗಡಿಗಳನ್ನು ಕಡಿತಗೊಳಿಸಲು ಕರಡು ವರದಿ ಪ್ರಸ್ತಾಪಿಸಿತ್ತು. ಉತ್ತರ ಭಾಗದಲ್ಲಿ ಅಹೋಮ್ ಸಮುದಾಯ ರಾಜಕೀಯವಾಗಿ ಪ್ರಭಾವಿಯಾಗಿತ್ತು. ಹೀಗಾಗಿ ಭಾರಿ ವಿರೋಧ ವ್ಯಕ್ತವಾಗಿತ್ತು. ತೀವ್ರ ಸ್ವರೂಪದ ಪ್ರತಿಭಟನೆಗಳು ನಡೆದಿದ್ದವು. ಕಾನೂನು ಸುವ್ಯವಸ್ಥೆ ಕಾರಣ ಮುಂದಿಟ್ಟುಕೊಂಡು, ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು. ಈಗಲೂ ಅಂಥದ್ದೇ ಸ್ಥಿತಿ ಎದುರಾಗುವ ಸಂದರ್ಭ ಬಂದೊದಗಿದೆ. ಕೆಲವು ರಾಜಕೀಯ ಪಕ್ಷಗಳು, ವಿದ್ಯಾರ್ಥಿ ಸಂಘಟನೆಗಳು ಈ ಪ್ರಕ್ರಿಯೆ ವಿರುದ್ಧ ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸಿವೆ.

1976ರಲ್ಲಿ ನಡೆದಿತ್ತು

1971ರ ಜನಗಣತಿ ಆಧಾರದಲ್ಲಿ ಅಸ್ಸಾಂನಲ್ಲಿ ಕೊನೆಯದಾಗಿ 1976ರಲ್ಲಿ ಕ್ಷೇತ್ರ ಮರುವಿಂಗಡಣೆ ನಡೆದಿತ್ತು. 2008ರಲ್ಲಿ ಇಂತಹ ಯತ್ನ ನಡೆದಿತ್ತಾದರೂ, ವಿರೋಧದಿಂದಾಗಿ ಅದು ಪೂರ್ಣಗೊಂಡಿರಲಿಲ್ಲ.

ಪ್ರತೀ ಜನಗಣತಿ ಬಳಿಕ ಕ್ಷೇತ್ರಗಳ ಮರುವಿಂಗಡಣೆ ಮಾಡಬೇಕು ಎಂಬ ನಿಯಮವಿದೆ. ಸಂವಿಧಾನದ 82ನೇ ವಿಧಿಯ ಅಡಿ ಕ್ಷೇತ್ರ ಮರುವಿಂಗಡಣೆ ಕಾಯ್ದೆಯನ್ನು ಸಂಸತ್ತು ಅಂಗೀಕರಿಸಿತ್ತು. ಈ ಪ್ರಕ್ರಿಯೆಯನ್ನು ಕೈಗೊಳ್ಳಲು ಕ್ಷೇತ್ರ ಮರುವಿಂಗಡಣೆ ಆಯೋಗ ಎಂಬ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗಿದೆ. ಈ ಆಯೋಗವು ತೆಗೆದುಕೊಳ್ಳುವ ಕ್ಷೇತ್ರ ಮರುವಿಂಗಡಣೆ ನಿರ್ಧಾರಗಳನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವಂತಿಲ್ಲ.

ಜಮ್ಮು-ಕಾಶ್ಮೀರದಲ್ಲೂ ವಿರೋಧ

ಜಮ್ಮು ಕಾಶ್ಮೀರದಲ್ಲಿ ವಿಧಾನಸಭೆ ಹಾಗೂ ಲೋಕಸಭೆ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ಇತ್ತೀಚೆಗೆ ನಡೆದಿತ್ತು. ಈ ಪ್ರಕ್ರಿಯೆಯನ್ನು ವಿರೋಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವರು ಅರ್ಜಿ ಸಲ್ಲಿಸಿದ್ದರು. ಆದರೆ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಕೇಂದ್ರ ಸರ್ಕಾರಕ್ಕೆ ಈ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿದೆ ಎಂದು ನ್ಯಾಯಮೂರ್ತಿಗಳು ಸ್ಪಷ್ಟಪಡಿಸಿದ್ದರು.

ಜಮ್ಮು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷಾಧಿಕಾರವನ್ನು 2019ರಲ್ಲಿ ಕೇಂದ್ರ ಸರ್ಕಾರ ರದ್ದುಪಡಿಸಿತ್ತು. ಅಲ್ಲದೇ ರಾಜ್ಯದ ಸ್ಥಾನಮಾನವನ್ನು ತೆಗೆದುಹಾಕಿ, ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಲಾಗಿತ್ತು. ಅಲ್ಲಿಂದ ಈವರೆಗೆ ಇಲ್ಲಿನ ವಿಧಾನಸಭೆಗೆ ಚುನಾವಣೆ ನಡೆದಿಲ್ಲ. ಚುನಾವಣೆಗೂ ಮುನ್ನ ಕ್ಷೇತ್ರಗಳನ್ನು ಪುನರ್‌ವಿಂಗಡಣೆ ಮಾಡಲು ಆಯೋಗವನ್ನು ರಚಿಸಲಾಗಿತ್ತು. ಆಯೋಗವು ವರದಿ ಸಲ್ಲಿಸಿದ್ದು, 83 ಕ್ಷೇತ್ರಗಳನ್ನು 90ಕ್ಕೆ ಹೆಚ್ಚಿಸಲಾಗಿದೆ. ಹೆಚ್ಚುವರಿಯಾಗಿ ಸೇರ್ಪಡೆಮಾಡಲಾಗಿರುವ ಏಳು ಕ್ಷೇತ್ರಗಳ ಪೈಕಿ ಜಮ್ಮುವಿಗೆ ಆರು ಹಾಗೂ ಕಾಶ್ಮೀರಕ್ಕೆ ಒಂದು ಕ್ಷೇತ್ರವನ್ನು ಹಂಚಿಕೆ ಮಾಡಲಾಗಿದೆ. ಈ ಪರಿಷ್ಕರಣೆಗೆ ವಿರೋಧ ವ್ಯಕ್ತವಾಗಿದೆ. ಕ್ಷೇತ್ರಗಳ ಸಂಖ್ಯೆ ಹೆಚ್ಚಿಸಲು ಅವಕಾಶ ಇಲ್ಲದಿದ್ದರೂ ಹೆಚ್ಚಿಸಿರುವುದಕ್ಕೆ ಆಕ್ಷೇಪ ಬಂದಿದೆ.

2001ರ ಜನಸಂಖ್ಯೆ ಆಧಾರ

ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಲು 2001ರ ಜನಸಂಖ್ಯೆಯನ್ನು ಆಧಾರವಾಗಿ ತೆಗೆದುಕೊಳ್ಳಲಾಗಿದೆ. 2022–23ರಲ್ಲಿ ನಡೆಯುತ್ತಿರುವ ಕ್ಷೇತ್ರಮರುವಿಂಗಡಣೆ ಕಾರ್ಯಕ್ಕೆ 20 ವರ್ಷಕ್ಕಿಂತಲೂ ಹಳೆಯ ಜನಸಂಖ್ಯಾ ದತ್ತಾಂಶಗಳನ್ನು ಬಳಸಿಕೊಳ್ಳುತ್ತಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ರಾಜ್ಯದ ಹಲವು ಪಕ್ಷಗಳು ಇದನ್ನು ವಿರೋಧಿಸಿವೆ.

ರಾಜ್ಯಗಳ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಅನುಕೂಲವಾಗುವಂತೆ 2002 ಮತ್ತು 2003ರಲ್ಲಿ ಸಂವಿಧಾನಕ್ಕೆ 84ನೇ ತಿದ್ದುಪಡಿ ಮತ್ತು 87ನೇ ತಿದ್ದುಪಡಿಗಳನ್ನು ತರಲಾಗಿತ್ತು. 2026ರ ಬಳಿಕ ನಡೆಯುವ ಮೊದಲ ಜನಗಣತಿಯ ನಂತರ ನಡೆಯುವ ಮರುವಿಂಗಡಣೆಯಲ್ಲಿ ಮಾತ್ರ ಕ್ಷೇತ್ರಗಳ ಒಟ್ಟು ಸಂಖ್ಯೆಯನ್ನು ಬದಲಾಯಿಸಲು ಅವಕಾಶವಿದೆ. ಅದಕ್ಕೂ ಮೊದಲು ನಡೆಯುವ ಯಾವುದೇ ಮರುವಿಂಗಡಣೆಯಲ್ಲಿ ಕ್ಷೇತ್ರಗಳ ಗಡಿಗಳನ್ನು ಮಾತ್ರ ಮಾರ್ಪಾಡು ಮಾಡಲು ಅವಕಾಶವಿದೆ. ಅಸ್ಸಾಂನಲ್ಲಿ ಈಗ ನಡೆಯುತ್ತಿರುವ ಮರುವಿಂಗಡಣೆಯೂ ಗಡಿ ಬದಲಾವಣೆಗಷ್ಟೇ ಸೀಮಿತವಾಗಿದೆ. ರಾಜ್ಯದಲ್ಲಿ ಈಗ 126 ವಿಧಾನಸಭಾ ಕ್ಷೇತ್ರಗಳು ಮತ್ತು 14 ಲೋಕಸಭಾ ಕ್ಷೇತ್ರಗಳು ಇವೆ. ಈ ಮರುವಿಂಗಡಣೆಯ ನಂತರ ಕ್ಷೇತ್ರಗಳ ಸಂಖ್ಯೆಯಲ್ಲಿ ಬದಲಾವಣೆ ಆಗುವುದಿಲ್ಲ ಎಂದು ಮರುವಿಂಗಡಣಾ ಆಯೋಗ ಈಗಾಗಲೇ ಹೇಳಿದೆ.

2001ರ ಜನಸಂಖ್ಯೆ ಮತ್ತು ಈಗಿನ ಜನಸಂಖ್ಯೆಗೆ ಭಾರಿ ವ್ಯತ್ಯಾಸವಿದೆ. ಈ 22 ವರ್ಷಗಳ ಅವಧಿಯಲ್ಲಿ ಜನಸಂಖ್ಯೆ ಹಲವು ಪಟ್ಟು ಏರಿಕೆಯಾಗಿದೆ. ಹೀಗಿದ್ದಾಗ ಹಳೆಯ ಜನಗಣತಿ ದತ್ತಾಂಶಗಳನ್ನೇ ಆಧಾರವಾಗಿಟ್ಟುಕೊಂಡು ಕ್ಷೇತ್ರ ಮರುವಿಂಗಡಣೆ ಮಾಡುವುದು ವೈಜ್ಞಾನಿಕವಾಗಿ ಸರಿಯಲ್ಲ ಎಂಬುದು ವಿರೋಧ ಪಕ್ಷಗಳ ಆಕ್ಷೇಪ.

ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ವೇಳೆ ರಾಜಕೀಯ ಪಕ್ಷಗಳು, ಸ್ಥಳೀಯ ಸಂಘಟನೆಗಳು ನೀಡುವ ಸಲಹೆ ಮತ್ತು ಆಕ್ಷೇಪಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಕ್ಷೇತ್ರಗಳ ಮರುವಿಂಗಡಣಾ ಮಾರ್ಗಸೂಚಿ ಹೇಳುತ್ತದೆ. ಆದರೆ, ಜನಗಣತಿ ದತ್ತಾಂಶಗಳ ಬಗ್ಗೆ ವ್ಯಕ್ತವಾಗಿರುವ ಆಕ್ಷೇಪಗಳನ್ನು ಪರಿಗಣಿಸದೆ, ಮರುವಿಂಗಡಣೆ ಪ್ರಕ್ರಿಯೆಯನ್ನು ಮುಂದುವರಿಸಲಾಗಿದೆ ಎಂಬುದು ವಿರೋಧ ಪಕ್ಷಗಳ ಕಳವಳ.

ಎನ್‌ಆರ್‌ಸಿ ಜಾರಿಗೆ ಪಟ್ಟು

ಅಸ್ಸಾಂನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ಸಿದ್ಧಪಡಿಸಲಾಗಿತ್ತು. ಆದರೆ, ಅದನ್ನು ಅಂತಿಮಗೊಳಿಸಿಲ್ಲ. ಇಲ್ಲಿನ ಸ್ಥಳೀಯ ಸಮುದಾಯಗಳ ಸಂಘಟನೆಗಳು ಎನ್‌ಆರ್‌ಸಿಯನ್ನು ಸಂಪೂರ್ಣವಾಗಿ ಜಾರಿಗೆ ತನ್ನಿ ಮತ್ತು ನಂತರ ಕ್ಷೇತ್ರಗಳ ಮರುವಿಂಗಡಣೆಯನ್ನು ಮಾಡಿ ಎಂದು ಒತ್ತಾಯಿಸಿವೆ.

ಎನ್‌ಆರ್‌ಸಿಯನ್ನು ಜಾರಿಗೆ ತಂದರೆ ಅಸ್ಸಾಂನಲ್ಲಿರುವ ಅಕ್ರಮ ವಲಸಿಗರು, ಬಂಗಾಳಿ ಹಿಂದೂಗಳು ಮತ್ತು ಮುಸ್ಲಿಮರು ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಆಗ ರಾಜ್ಯದ ಒಟ್ಟು ಮತದಾರರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ. ರಾಜ್ಯದ ರಾಜಕೀಯ ಸಂಯೋಜನೆಯೇ ಬದಲಾಗುತ್ತದೆ. ಇದು ಕೆಲವು ಪಕ್ಷಗಳಿಗೆ ಪ್ರತಿಕೂಲವಾಗಿ ಪರಿಣಮಿಸಬಹುದು. ಹೀಗಾಗಿಯೇ ಎನ್‌ಆರ್‌ಸಿಯನ್ನು ತಡೆ ಹಿಡಿಯಲಾಗಿದೆ ಎಂದು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘಟನೆ ಆರೋಪಿಸಿದೆ. ಕ್ಷೇತ್ರ ಮರುವಿಂಗಡಣೆಯನ್ನು ನಾವು ಬೆಂಬಲಿಸುತ್ತೇವೆ. ಆದರೆ, ಎನ್‌ಆರ್‌ಸಿ ಜಾರಿಯ ನಂತರವೇ ಅದನ್ನು ಮಾಡಬೇಕು. ಇಲ್ಲದೇ ಇದ್ದರೆ, ಸ್ಥಳೀಯ ಸಮುದಾಯಗಳು ಮೂಲೆಗುಂಪಾಗುತ್ತವೆ ಎಂದು ಸಂಘಟನೆಯು ಕಳವಳ ವ್ಯಕ್ತಪಡಿಸಿದೆ.

ಎನ್‌ಆರ್‌ಸಿಯನ್ನು ತರಾತುರಿಯಲ್ಲಿ ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿತ್ತು. ಅದು ತನಗೆ ಪ್ರತಿಕೂಲವಾಗುತ್ತದೆ ಎಂದು ಅರಿವಾದ ತಕ್ಷಣವೇ, ವರಸೆ ಬದಲಿಸಿತು. ಎನ್‌ಆರ್‌ಸಿ ಅನುಷ್ಠಾನಕ್ಕೆ ತಂದರೆ ಲಕ್ಷಾಂತರ ಸಂಖ್ಯೆಯಲ್ಲಿರುವ ಬಂಗಾಳಿ ಹಿಂದೂಗಳು ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಇದು ಬಿಜೆಪಿಗೆ ಪ್ರತಿಕೂಲವಾಗಿ ಪರಿಣಮಿಸುತ್ತದೆ. ಹೀಗಾಗಿಯೇ ರಾಜ್ಯ ಸರ್ಕಾರ ಎನ್‌ಆರ್‌ಸಿ ಜಾರಿಗೆ ತರುತ್ತಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ.

ಮುಸ್ಲಿಮರ ಪ್ರಾತಿನಿಧ್ಯ ಕಡಿತಕ್ಕೆ ಯತ್ನ: ಅಸ್ಸಾಂನಲ್ಲಿ ಈಗ 31 ಮುಸ್ಲಿಂ ಶಾಸಕರಿದ್ದಾರೆ. ಇನ್ನೂ ನಾಲ್ಕು ಕ್ಷೇತ್ರಗಳಲ್ಲಿ ಮುಸ್ಲಿಮರೇ ನಿರ್ಣಾಯಕ ಮತದಾರರಾಗಿದ್ದಾರೆ. ಕ್ಷೇತ್ರ ಮರುವಿಂಗಡಣೆ ಮೂಲಕ ಈ ಸಂಖ್ಯೆಯನ್ನು 26–28ಕ್ಕೆ ಇಳಿಸಲು ಯತ್ನ ನಡೆಯುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಮುಸ್ಲಿಂ ಪ್ರಾಬಲ್ಯವಿರುವ ಕ್ಷೇತ್ರಗಳನ್ನು ಬೇರೆ ಸಮುದಾಯಗಳ ಪ್ರಾಬಲ್ಯವಿರುವ ಹಲವು ಕ್ಷೇತ್ರಗಳ ಜತೆಗೆ ಹಂಚಲಾಗುತ್ತಿದೆ. ಬೇರೆ ಕ್ಷೇತ್ರಗಳಲ್ಲಿ ಮುಸ್ಲಿಮೇತರ ಸಮುದಾಯಗಳ ಮತದಾರರ ಪ್ರಾಬಲ್ಯಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆಯಿಂದ ಈ ಕೆಲಸ ಮಾಡಲಾಗುತ್ತಿದೆ. ಈ ಮೂಲಕ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಮುಸ್ಲಿಮೇತರ ಸಮುದಾಯಗಳು ನಿರ್ಣಾಯಕ ಸ್ಥಾನಕ್ಕೆ ಬರುವಂತೆ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಮತ್ತು ಸ್ಥಳೀಯ ಮುಸ್ಲಿಂ ಸಂಘಟನೆಗಳು ಆರೋಪಿಸಿವೆ.

ಆಡಳಿತ ಘಟಕಗಳ ಬದಲಾವಣೆಗೆ ಸಮರ್ಥನೆಗಳಿಲ್ಲ

'ಕ್ಷೇತ್ರ ಮರುವಿಂಗಡಣೆ ಸಂದರ್ಭದಲ್ಲಿ ಆಡಳಿತ ಘಟಕಗಳಾದ ಜಿಲ್ಲೆ, ಉಪವಿಭಾಗಗಳು, ತಾಲ್ಲೂಕುಗಳ ಗಡಿ ಮತ್ತು ವ್ಯಾಪ್ತಿ ಬದಲಾವಣೆಗೆ ಅವಕಾಶವಿಲ್ಲ' ಎಂದು ಕ್ಷೇತ್ರಗಳ ಮರುವಿಂಗಡಣಾ ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ. ಆದರೆ ಅನಿವಾರ್ಯವಾಗಿ ಬದಲಾವಣೆ ಮಾಡಲೇಬೇಕಿದ್ದರೆ, ಅಗತ್ಯ ಕಾರಣ ಮತ್ತು ಸಮರ್ಥನೆಗಳನ್ನು ನೀಡಬೇಕು ಎಂದು ಮಾರ್ಗಸೂಚಿ ಹೇಳುತ್ತದೆ.

ಈ ಮರುವಿಂಗಡಣೆ ಸಂದರ್ಭದಲ್ಲಿ ಅಸ್ಸಾಂನ ಹಲವು ಜಿಲ್ಲೆಗಳನ್ನು ವಿಲೀನ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಇದರಿಂದ ಒಂದೇ ಜಿಲ್ಲೆಯೊಳಗಿನ ಕ್ಷೇತ್ರಗಳ ಸಂಖ್ಯೆ ಹೆಚ್ಚು ಮಾಡಲು ಅಥವಾ ಕಡಿಮೆ ಮಾಡಲು ಅವಕಾಶ ದೊರೆಯುತ್ತದೆ. ಈ ಅವಕಾಶವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಆಡಳಿತಾರೂಢ ಬಿಜೆಪಿ ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಹಲವು ಜಿಲ್ಲೆಗಳನ್ನು ವಿಲೀನ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಘೋಷಿಸಿದ್ದರು. ಆದರೆ, ಕ್ಷೇತ್ರ ಮರುವಿಂಗಡಣಾ ಆಯೋಗವು ಈ ವಿಲೀನಕ್ಕೆ ಯಾವುದೇ ಕಾರಣ ಅಥವಾ ಸಮರ್ಥನೆಗಳನ್ನು ನೀಡಿಲ್ಲ. ಈ ನಡೆಗೆ ಕಾಂಗ್ರೆಸ್, ಕೆಲವು ಸ್ಥಳೀಯ ಸಂಘಟನೆಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಕಾರಣ ನೀಡದೇ ಆಡಳಿತ ಘಟಕಗಳನ್ನು ವಿಲೀನ ಮಾಡುತ್ತಿರುವುದರ ಹಿಂದೆ ಯಾವುದೋ ಸಂಚು ಇದೆ ಎಂದು ಆರೋಪಿಸಿವೆ.

ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಕೆಲವು ಹೇಳಿಕೆಗಳು ಈ ಆರೋಪಗಳಿಗೆ ಪುಷ್ಟಿ ನೀಡುವಂತಿವೆ. ಜಿಲ್ಲೆಗಳನ್ನು ವಿಲೀನ ಮಾಡುವ ಘೋಷಣೆ ಮಾಡಿದ್ದ ಅವರು, ಈ ನಿರ್ಧಾರದ ಹಿಂದಿದ್ದ ಕಾರಣಗಳನ್ನು ಬಹಿರಂಗಪಡಿಸುವುದಿಲ್ಲ ಎಂದಿದ್ದರು. ಮರುದಿನ ಪತ್ರಕರ್ತರ ಜೊತೆ ಮಾತನಾಡಿದ್ದ ಅವರು, ರಾಷ್ಟ್ರೀಯ ಪೌರತ್ವ ನೋಂದಣಿಯು (ಎನ್‌ಆರ್‌ಸಿ) ನಿರೀಕ್ಷಿಸಿದಷ್ಟು ಯಶಸ್ವಿಯಾಗಿಲ್ಲ ಎಂದಿದ್ದರು. ಅಸ್ಸಾಂನ ಭವಿಷ್ಯ ಕಾಯ್ದುಕೊಳ್ಳಬೇಕಾದರೆ, ಕ್ಷೇತ್ರ ಪುನರ್‌ವಿಂಗಡಣೆಯೊಂದೇ ತಮ್ಮ ಮುಂದಿರುವ ದೊಡ್ಡ ಹಾಗೂ ಕೊನೆಯ ಅಸ್ತ್ರ ಎಂದು ಹೇಳಿದ್ದರು.

ಆಧಾರ: ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣಾ ಮಾರ್ಗಸೂಚಿಗಳು, ಪಿಟಿಐ

ಶಿವಣ್ಣ 'ಘೋಸ್ಟ್' ಚಿತ್ರದಲ್ಲಿ ಅನುಪಮ್ ಖೇರ್



ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಅಭಿನಯದ ಬಹುನಿರೀಕ್ಷಿತ ಚಿತ್ರ 'ಘೋಸ್ಟ್'ನಲ್ಲಿ ಬಾಲಿವುಡ್ ನಟ ಅನುಪಮ್ ಖೇರ್ ನಟಿಸುತ್ತಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ಸುಮಾರು 4 ದಶಕ ಪೂರೈಸಿರುವ ಖೇರ್, ಇದೇ ಮೊದಲ ಬಾರಿಗೆ ಕನ್ನಡ ಚಿತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಶಿವಣ್ಣ, ತಮಿಳು ನಟ ಜಯರಾಂ ಜತೆಗೆ ಅನುಪಮ್ ಖೇರ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಬೆಂಗಳೂರಿನ ಹೊರವಲಯದಲ್ಲಿ ನಡೆಯುತ್ತಿರುವ ಚಿತ್ರೀಕರಣದಲ್ಲಿ ಪಾಲ್ಗೊಂಡರು. ಮಾಧ್ಯಮಗಳ ಜತೆ ಅನುಭವ ಹಂಚಿಕೊಂಡ ಖೇರ್, ಶಿವಣ್ಣರಂತಹ ಹಿರಿಯ ನಟರೊಂದಿಗೆ ಅಭಿನಯಿಸುವುದು ಹೆಮ್ಮೆಯ ಸಂಗತಿ. ಒಂದು ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮೊದಲ ಸಲ ಕನ್ನಡ ಚಿತ್ರದಲ್ಲಿ ನಟಿಸುತ್ತಿರುವುದು ಖುಷಿ ನೀಡಿದೆ ಎಂದರು.

ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದ್ದು, ಶ್ರೀನಿ ಚಿತ್ರದ ನಿರ್ದೇಶಕರು. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಬೆಂಗಳೂರಿನ ಹೊರವಲಯದಲ್ಲಿ ಅದ್ದೂರಿ ಸೆಟ್‌ಗಳನ್ನು ಹಾಕಲಾಗಿದೆ. ಚಿತ್ರದ ಬಹುಭಾಗ ಚಿತ್ರೀಕರಣ ಬೆಂಗಳೂರು ಹಾಗೂ ಮೈಸೂರಿನಲ್ಲಿ ಪೂರ್ಣಗೊಂಡಿದೆ.



ನಟಿ ನಿಸರ್ಗ, ವಜ್ರಮುನಿ ಮೊಮ್ಮಗ ಆಕರ್ಷ್ ಜತೆ ನಟ ಕೋಮಲ್

ಕೋಮಲ್ ಹೊಸಚಿತ್ರ 'ಯಲಾಕುನ್ನಿ'

ಹಾಸ್ಯನಟ ಕೋಮಲ್, ಪ್ರೇಕ್ಷಕರನ್ನು ನಗಿಸಲು ಈ ಸಲ ಖಳನಟರೊಬ್ಬರನ್ನು ಕರೆದುಕೊಂಡು ಬಂದಿದ್ದಾರೆ. 'ಯಲಾ ಕುನ್ನಿ' ಜತೆಗೆ ಮೇರಾ ನಾಮ್ ವಜ್ರಮುನಿ! ಎನ್ನುತ್ತಿದ್ದಾರೆ! ಅರೆ, ಇದೇನಿದು ಕೋಮಲ್ ಕನ್ನಡದ ಜನಪ್ರಿಯ ಖಳನಟನಿಗೆ ಅವಮಾನ ಮಾಡುತ್ತಿರುವುದೇ ಎಂದು ಅನುಮಾನಪಡುವುದು ಬೇಡ. ಬದಲಿಗೆ ವಜ್ರಮುನಿ ಅವರ ನೆಚ್ಚಿನ ಡೈಲಾಗ್ ಇಟ್ಟುಕೊಂಡು ಹೊಸ ಸಿನಿಮಾ ಮಾಡುತ್ತಿದ್ದಾರೆ.

ಕೋಮಲ್, ಮೊದಲ ಬಾರಿಗೆ ದ್ವಿಪಾತ್ರದಲ್ಲಿ ನಟಿಸುತ್ತಿರುವ ಚಿತ್ರದ ಮುಹೂರ್ತ ಇತ್ತೀಚೆಗೆ ಬೆಂಗಳೂರಿನಲ್ಲಿ ನೆರವೇರಿತು. ವಜ್ರಮುನಿರವರ ಪತ್ನಿ ಲಕ್ಷ್ಮೀ ವಜ್ರಮುನಿ ಕ್ಯಾಮೆರಾ ಚಾಲನೆ ಮಾಡಿದರು. ವಜ್ರಮುನಿ ಅವರ ಹಿರಿಯ ಪುತ್ರ ವಿಶ್ವನಾಥ್, ಕಿರಿಯ ಪುತ್ರ ಜಗದೀಶ್ ವಜ್ರಮುನಿ ಈ ಸಂದರ್ಭದಲ್ಲಿ ಹಾಜರಿದ್ದರು.

'ಯಲಾಕುನ್ನಿ' ಖ್ಯಾತ ನಟ ವಜ್ರಮುನಿ ಅವರು ಚಿತ್ರಗಳಲ್ಲಿ ಹೆಚ್ಚಾಗಿ ಬಳಸುತ್ತಿದ್ದ ಮಾತು. ಈಗ ಆ ಪದವೇ ಚಿತ್ರದ ಶೀರ್ಷಿಕೆಯಾಗಿದೆ. 'ಮೇರಾ ನಾಮ್ ವಜ್ರಮುನಿ..!' ಎಂಬ ಅಡಿಬರಹ ಕೂಡ ಚಿತ್ರಕ್ಕಿದೆ.

'ನಾನು ಮೊದಲ ಬಾರಿಗೆ ದ್ವಿಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ. ನಿರ್ದೇಶಕ ಪ್ರದೀಪ್ ಬಹಳ ಚೆನ್ನಾಗಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಚಿತ್ರದ ಮುಕ್ಕಾಲು ಭಾಗ 1981 ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಶ್ರೀರಂಗಪಟ್ಟಣ, ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಗಂಜಾಂ ಬಳಿ ಪುರಾತನ ದೇವಾಲಯವಿದ್ದು, ಆ ದೇವಾಲಯದಲ್ಲೇ ಹೆಚ್ಚಿನ ಚಿತ್ರೀಕರಣವಾಗಲಿದೆ' ಎಂದು ಕೋಮಲ್ ತಿಳಿಸಿದರು.

ಈ ಚಿತ್ರದಲ್ಲಿ ಕೋಮಲ್ ವಜ್ರಮುನಿಯಾದರೆ, ಅವರ ಬಲಗೈ ಬಂಟನಾಗಿ ಜಯಸಿಂಹ ಮುಸುರಿ 'ಕನೆಕ್ಷನ್ ಕಾಳಪ್ಪ'ನಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ನಿರ್ದೇಶಕ ಪ್ರದೀಪ್ ಹೇಳಿದರು.

ವಜ್ರಮುನಿ ಮೊಮ್ಮಗ ಆಕರ್ಷ್ ಈ ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ಹೊಸ ಪ್ರತಿಭೆ ನಿಸರ್ಗ ಈ ಚಿತ್ರದ ನಾಯಕಿ. ಯತಿರಾಜ್ ಜಗ್ಗೇಶ್, ಮಂಜು ಪಾವಗಡ ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಧರ್ಮವಿಶ್ ಸಂಗೀತ ನಿರ್ದೇಶನ ಹಾಗೂ ಉದಯ್ ಲೀಲಾ ಅವರ ಛಾಯಾಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ಈ ಹಿಂದೆ 'ಸಡಗರ' ಚಿತ್ರ ನಿರ್ಮಿಸಿದ್ದ ಮಹೇಶ್ ಗೌಡ್ರು ಚಿತ್ರದ ನಿರ್ಮಾಪಕರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದಲ್ಲಿ ಇನ್ನು ಮುಂದೆ ನಡೆಯುವ ಎಲ್ಲ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಹೇಳಲಾಗುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. 'ಇಂಡಿಯಾ ಅಪ್‌ಡೇಟ್' ಎಂಬ ಯೂಟ್ಯೂಬ್ ಚಾನಲ್‌ನಲ್ಲಿ ಮೂರು ತಿಂಗಳ ಹಿಂದೆಯೇ ಇಂತಹ ಸುದ್ದಿಯನ್ನು ಪ್ರಸಾರ ಮಾಡಲಾಗಿದೆ. 'ಕೊನೆಗೂ, 20 ವರ್ಷಗಳವರೆಗೆ ಇವಿಎಂ ಬಳಕೆಗೆ ನಿಷೇಧ ಹೇರಲಾಗಿದೆ' ಎಂದು ಬ್ರೇಕಿಂಗ್ ನ್ಯೂಸ್ ರೂಪದಲ್ಲಿ ಬಿತ್ತರಿಸಲಾಗಿದೆ. ಹಲವು ಸಾಮಾಜಿಕ ಜಾಲತಾಣ ಬಳಕೆದಾರರೂ ಈ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದಾರೆ. ಇದು ಸುಳ್ಳು.



ಇವಿಎಂ ನಿಷೇಧ ಕುರಿತಂತೆ ಹರಿದಾಡುತ್ತಿರುವ ಸುದ್ದಿ ಸುಳ್ಳು ಎಂದು ಕೇಂದ್ರ ಸರ್ಕಾರದ ಪಿಐಬಿ ತಿಳಿಸಿದೆ. 'ಇಂಡಿಯಾ ಅಪ್‌ಡೇಟ್' ಎಂಬ ಯೂಟ್ಯೂಬ್ ಚಾನಲ್‌ನಲ್ಲಿ ಪ್ರಸಾರವಾಗಿರುವ ಸುದ್ದಿಗೆ ಯಾವುದೇ ಆಧಾರ ಇಲ್ಲ. ಇವಿಎಂ ಬಳಕೆಯನ್ನು ನಿರ್ಬಂಧಿಸುವ ಕುರಿತಂತೆ ಯಾವುದೇ ರೀತಿಯ ಪ್ರಕಟಣೆ ಹೊರಬಿದ್ದಿಲ್ಲ ಎಂದು ಸ್ಪಷ್ಟಪಡಿಸಿರುವ ಪಿಐಬಿ, ಇಂತಹ ಅನುಮಾನಾಸ್ಪದ ಪೋಸ್ಟ್‌ಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ ಎಂದು ಜನರಿಗೆ ಸಲಹೆ ನೀಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮಾರ್ಚ್ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಅಷ್ಟಮಿ ಗಂ. 21-08, ನಕ್ಷತ್ರ: ಆರ್ದ್ರಾ ಗಂ. 20-07 ಯೋಗ: ಶೋಭನ ಗಂ. 24-12, ಕರಣ: ವಿಷ್ಟಿ ಗಂ. 08-02, ಮೀನ ಮಾಸದ 14 ನೇ ದಿನ. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-33 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 06 ರಂಜಾನ್, ದಿನ ವಿಶೇಷ : ಓಳಿ ಪ್ರಾರಂಭ (ಜೈನ್), ಅನ್ನಪೂರ್ಣ ಪೂಜಾ, ಅಶೋಕಾಷ್ಟಮಿ (ಗಂ. 20-07 ನಂತರ ಪುನರ್ವಸು, ನಕ್ಷತ್ರ), ಮೇಳ ಬಾಹು ಫೋರ್ಟ್ (ಜಮ್ಮು) ಅದೃಷ್ಟ ಸಂಖ್ಯೆ : 7, 11

ಮೇಷ: ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಲು ಪ್ರಯತ್ನಿಸುವಿರಿ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು, ತಂದೆಯವರ ಮಾತಿನಂತೆಯೇ ನಡೆಯಲು ಒಪ್ಪುವಿರಿ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

ವೃಷಭ: ಸಹೋದರರ ಅಥವಾ ದಾಯಾದಿಗಳ ಹತ್ತಿರ ಮೂಡಿಬಂದ ಭಿನ್ನಾಭಿಪ್ರಾಯದಿಂದ ನ್ಯಾಯಾಲಯದ ಮೆಟ್ಟಿಲ ಹತ್ತ ಬೇಕಾಗುವುದು. ಗೃಹ ನಿರ್ಮಾಣ ಕಾರ್ಯದ ಆಲೋಚನೆಯು ಕಾರ್ಯರೂಪಕ್ಕೆ ಬರುವುದು.

ಮಿಥುನ: ಕಟ್ಟಡ ರಚನೆಯಂಥ ಕಾರ್ಯಗಳು ಭರದಿಂದ ಸಾಗಲಿದೆ. ಈಗಿನ ಪೈಪೋಟಿ ಜೀವನದಲ್ಲಿ ಕೇವಲ ಲಾಭದ ಅಂಶ ಪರಿಗಣಿಸಬೇಡಿ. ಸಿನಿಮಾ ನಟರಿಗೆ ಹಲವು ಪಾಠ ಕಲಿಸಿ ಗೌರವಾನ್ವಿತ ವ್ಯಕ್ತಿಯನ್ನಾಗಿ ಮಾಡುವುದು.

ಕರ್ಕಾಟಕ: ಅಧಿಕಾರಿ ವರ್ಗದವರಿಗೆ ಮುಂಬಡ್ತಿಯಂಥ ಕನಸು ನೆರವೇರುವುದು. ವೈವಾಹಿಕ ಜೀವನದ ಹೆಜ್ಜೆಯನ್ನು ಇಡುವಂತಾಗುವುದು. ಫೈನಾನ್ಸ್‌ನಲ್ಲಿ ಹಣವನ್ನು ಹೂಡಿಕೆ ಮಾಡುವವರು ಜಾಗ್ರತೆಯಿಂದ ವರ್ತಿಸಿ.

ಸಿಂಹ: ಆಕಸ್ಮಿಕವಾಗಿ ಹೊಸವ್ಯಕ್ತಿ ಪರಿಚಯವಾಗಲಿದೆ. ಅವಿವಾಹಿತರಿಗೆ ಒಳ್ಳೆಯ ಕಡೆ ಸಂಬಂಧ ಬರುವುದು. ಬದಲಾದ ಸನ್ನಿವೇಶ ಹೊಂದಿಕೊಳ್ಳಲು ಯತ್ನಿಸುವಿರಿ. ವಾಹನದ ರಿಪೇರಿಯಂಥ ವಿಚಾರದಲ್ಲಿ ಅಧಿಕ ಖರ್ಚು.

ಕನ್ಯಾ: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪುವಂಥ ಘಟನೆ ನಡೆದ ಕಾರಣದಿಂದ ಮನಸ್ಸಿಗೆ ಸಮಾಧಾನವಾಗುವುದು. ವಿದೇಶಿ ಸಂಸ್ಥೆಯೊಂದಿಗೆ ವ್ಯಾವಹಾರಿಕ ಒಪ್ಪಂದ ಮಾಡಿಕೊಳ್ಳಲು ಈ ದಿನ ಸೂಕ್ತವಾಗಿರುವುದು.

ತುಲಾ: ಆರಕ್ಷಕ ವರ್ಗದವರು ಜಾಗರೂಕತೆಯಿಂದ ವರ್ತಿಸಿ, ಸ್ವತಃ ನೀವೇ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದ ಸನ್ನಿವೇಶ ಎದುರಾಗಬಹುದು. ಬೃಹತ್ ಯೋಜನೆಗಾಗಿ ಸಾಲ ಮಾಡುವ ಪರಿಸ್ಥಿತಿ ಬರಬಹುದು.

ವೃಶ್ಚಿಕ: ಇನ್ನೊಬ್ಬರಿಗೆ ಮೋಸ ಮಾಡಲು ಪ್ರೇರೇಪಣೆ ಸಿಗಲಿದೆ. ಆದರೆ ನಿಮ್ಮ ಬುದ್ಧಿಯನ್ನು ಸ್ಥಿಮಿತದಲ್ಲಿ ಇರಿಸಿಕೊಳ್ಳಿ. ಬೆಲೆ ಬಾಳುವ ವಸ್ತುಗಳ ಖರೀದಿ ಮಾಡುವಿರಿ. ಧಾರ್ಮಿಕ ಕ್ಷೇತ್ರಗಳ ಭೇಟಿ ನಡೆಯುತ್ತದೆ.

ಧನು: ಹೋಟೆಲ್ ಉದ್ಯಮದವರಿಗೆ ವರಮಾನ ಲಭಿಸಲಿದೆ. ತೋಟದ ಬೆಳೆಗಾರರಿಗೆ ವಾಣಿಜ್ಯ ಬೆಳೆಗಳಿಂದ ಅಧಿಕ ಲಾಭ ಸಿಗುವುದು. ಮಹತ್ವದ ನಿರ್ಧಾರ ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ.

ಮಕರ: ನಿವೇಶನ ಕೊಳ್ಳುವ ನಿಮ್ಮ ಕನಸು ನನಸಾಗಲಿದೆ. ಕೆಲಸ ಕಾರ್ಯಗಳು ನಿಧಾನವಾಗಿಯಾದರೂ ಸಂಪೂರ್ಣವಾಗಿ ನೆರವೇರುವುದು. ಆಲಂಕಾರಿಕ ವಸ್ತುಗಳ ಮಾರಾಟದಿಂದ ಆದಾಯ ನಿಮ್ಮದಾಗಲಿದೆ.

ಕುಂಭ: ಅವಿವಾಹಿತರಿಗೆ ಕಂಕಣಬಲ ಒದಗಿ ಬರುತ್ತದೆ. ನೂತನ ವಾಹನ ಕೊಳ್ಳುವ ಯೋಚನೆಯನ್ನು ಮುಂದೂಡಿ. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮ ಸ್ಮರಣೆ ಅಥವಾ ಧ್ಯಾನ ಮಾಡುವುದು ಒಳ್ಳೆಯದು.

ಮೀನ: ನಿರ್ಧಾರಗಳಿಗೆ ಬದ್ಧತೆಯನ್ನು ತೋರ ಬೇಕಾಗಬಹುದು. ಒತ್ತಡ ತರುವಂತಹ ಕೆಲಸಗಳಿಂದ ದೂರವಿರುವ ಪ್ರಯತ್ನ ಮಾಡಿ. ಸ್ಪರ್ಧೆಯಲ್ಲಿ ಜಯಗಳಿಸುವಿರಿ. ಕೆಟ್ಟ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಿ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಎರಡು ಜಗತ್ತುಗಳು

ಕಣ್ದೆರೆದು ನೋಡು, ಚಿತ್ಸತ್ವ ಮೂರ್ತಿಯ ನೃತ್ಯ |
ಕಣ್ಮುಚ್ಚಿ ನೋಡು ನಿಶ್ಚಲ ಶುದ್ಧಸತ್ತ್ವ ||
ಉನ್ಮುಖನು ನೀನೆರಡು ಜಗಕಮಿರುತಿರಲಾಗ |
ಹೃನ್ಮಧ್ಯದಲಿ ಶಾಂತಿ – ಮಂಕುತಿಮ್ಮ || 851 ||

ಪದ-ಅರ್ಥ: ಕಣ್ದೆರೆದು = ಕಣ್ + ತೆರೆದು, ಚಿತ್ಸತ್ವಮೂರ್ತಿಯ = ಚಿತ್ + ಸತ್ವ + ಮೂರ್ತಿಯ,- ಕಣ್ಮುಚ್ಚಿ = ಕಣ್ + ಮುಚ್ಚಿ, ಉನ್ಮುಖ = ಮುಖ-ಮಾಡಿ ನಿಂತಿರಲು, ನೀನೆರಡು = ನೀನು + ಎರಡು, ಜಗಕಮಿರುತಿರಲಾಗ = ಜಗಕ (ಜಗತ್ತಿಗೆ) + ಇರುತಿರಲು + ಆಗ, ಹೃನ್ಮಧ್ಯದಲ್ಲಿ = ಹೃದಯಮಧ್ಯದಲಿ.

ವಾಚ್ಯಾರ್ಥ: ಕಣ್ಣು ತೆರೆದು ನೋಡು ಚಿತ್, ಸತ್ವದ ರೂಪವಾದ ಪ್ರಪಂಚದ ನೃತ್ಯ ಕಾಣುತ್ತದೆ. ಕಣ್ಣು ಮುಚ್ಚಿ ನೋಡಿದಾಗ ನಿಶ್ಚಲವಾದ ಪರಸತ್ವದ ದರ್ಶನ ಕಾಣುತ್ತದೆ. ಈ ಎರಡೂ ಜಗತ್ತುಗಳಿಗೆ ನೀನು ಮುಖಮಾಡಿ ನಿಂತಾಗ, ಹೃದಯ ಮಧ್ಯದಲ್ಲಿ ಶಾಂತಿ ನೆಲೆಯಾಗುತ್ತದೆ.

ವಿವರಣೆ: ಒಂದು ವಸ್ತುವಿಗೆ ಅನೇಕ ಮುಖಗಳು. ಯಾರಿಗೂ ಅದರ ಎಲ್ಲ ಮುಖಗಳು ಕಾಣಲಾರವು. ವಸ್ತುವಿನ ಸಂಪೂರ್ಣವಾಗಿ ಗ್ರಹಿಸಲು ಬಯಸಿದ ಮನುಷ್ಯ ಅದನ್ನು ಅತ್ಯಂತ ಸಮೀಪದಿಂದ ನೋಡುವ ಪ್ರಯತ್ನ ಮಾಡಿದ. ಪ್ರತಿಯೊಂದು ಕೋನದಿಂದ ಅದು ಬೇರೆಯಾಗಿಯೇ ಕಂಡಿತು. ನಿಧಾನಕ್ಕೆ ಅದರ ಅಂತರಂಗಕ್ಕೆ ಇಳಿಯುವ ಪ್ರಯತ್ನ ಮಾಡಿದ. ಆಗ ಅವನಿಗೆ ಅರ್ಥವಾಯಿತು, ಪ್ರತಿಯೊಂದು ವಸ್ತುವಿಗೆ ಮೂರು ಆಯಾಮಗಳಿವೆ. ಮೊದಲನೆಯದು ಕಾಲದಲ್ಲಿದೆ, ಎರಡನೆಯದು ದೇಶದಲ್ಲಿದೆ, ಮೂರನೆಯದು ಭಾವದಲ್ಲಿ ಚಾಚಿದೆ. ಹಾಗೆಂದರೆ ನಾವು ನೋಡುವ ವಸ್ತು ಯಾವುದೋ ಒಂದು ನಿಗದಿಯಾದ ಕಾಲದಲ್ಲಿದೆ. ಅಂದಿದ್ದ ಅಲೆಗ್ಸಾಂಡ್ರಿಯಾದ ಪ್ರಸಿದ್ಧ ಲೈಬ್ರರಿ ಈಗಿಲ್ಲ. ನನ್ನ ಅಜ್ಜ ಅಜ್ಜಿ ನೋಡಿಬಂದ ಧನುಷ್ಕೋಟಿ ಈಗ ಸಮುದ್ರ ಸೇರಿದೆ. ಹೀಗೆ ವಸ್ತು ಕಾಲಬದ್ಧವಾದದ್ದು. ಅಂತೆಯೇ ಅದು ಒಂದು ಯಾವುದೋ ಸ್ಥಳದಲ್ಲಿರುವುದು. ತಾಜಮಹಲ ಬೆಂಗಳೂರಿಗೆ ಬರಲಾರದು. ಚೀನಾದ ದೊಡ್ಡ ಗೋಡೆ ಅಮೇರಿಕೆಗೆ ಸಾಗಲಾರದು. ಹೀಗೆಂದರೆ ಒಂದು ವಸ್ತುವಿಗೆ ಒಂದು ಸ್ಥಳವಿದೆ. ಆದರೆ ವಸ್ತುವಿಗೆ ಭಾವದ ಆಯಾಮ ದೊಡ್ಡದು. ಎಂದೋ ಎಲ್ಲಿಯೋ ನೋಡಿದ ವಸ್ತು ನಮ್ಮ ಭಾವಕೋಶದಲ್ಲಿ ನೆಲೆಯಾಗಿದೆ. ಪ್ಯಾರಿಸ್‌ನಲ್ಲಿ ಎಂದೋ ನೋಡಿದ ಮೋನಾಲಿಸಾ ಭಾವಚಿತ್ರ ನೆನೆದಾಗಲೆಲ್ಲ ಮನದ ಭಿತ್ತಿಯ ಮೇಲೆ ನೋಡುತ್ತದೆ. ಕಣ್ಣು ತೆರೆದು ನೋಡಿದರೆ ವಿಶ್ವದ ಮೊರೆತ, ಅಬ್ಬರ ಕೇಳಿಸುತ್ತದೆ. ಅದು ಕಣ್ಣಿಗೆ ಕಾಣಲಾರದ ಅಪರಂಪಾರ ಶಕ್ತಿಯ ದೃಶ್ಯರೂಪದ ವೈಖರಿ. ಅದನ್ನೇ ಕಗ್ಗ ಚಿತ್ಸತ್ತ್ವ ಮೂರ್ತಿಯ ನೃತ್ಯ ಎನ್ನುತ್ತದೆ. ಆ ನೃತ್ಯ ಕಾಲ, ದೇಶಗಳಿಗೆ ಸಂಬಂಧಿಸಿದ್ದು. ಆದರೆ ಕಣ್ಣು ಮುಚ್ಚಿದಾಗ ಮನುಷ್ಯ ಭಾವಕೋಶಕ್ಕೆ ಇಳಿಯುತ್ತಾನೆ. ಅಲ್ಲಿ ಶುದ್ಧವಾದ, ನಿಶ್ಚಲವಾದ ಪರತತ್ವ ಇದೆ. ಹೊರಗೆ ಕಾಣುವ ನೊರೆಗೆ, ಒಳಗಿದ್ದ ಹಾಲು ಕಾರಣ. ಪ್ರಪಂಚ ನೊರೆ, ಹಾಲು ಪರಸತ್ವ. ಕಗ್ಗ ಹೇಳುತ್ತದೆ, ನಿನಗೆ ಶಾಂತಿ ಬೇಕಾದರೆ ಎರಡೂ ಸತ್ಯಗಳಿಗೆ ಮುಖಮಾಡಿ ನಿಲ್ಲಬೇಕು. ಬರೀ ಕಣ್ಣುಮುಚ್ಚಿ ಕೂಡ್ರುವುದಲ್ಲ, ಹೊರಗಿನ ಬೆಡಗಿಗೆ ಬೆರಗಾಗಿ ಒಳಗಿನ ಸತ್ಯವನ್ನು ಮರೆಯುವುದು ತರವಲ್ಲ. ಎರಡನ್ನೂ ಎಚ್ಚರದಿಂದ ಗಮನಿಸಿದಾಗ ಶಾಂತಿ ಮೈದೋರುತ್ತದೆ.

ಪದಬಂಧ 5272


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮೊತ್ತವನ್ನು ಕಂಡುಹಿಡಿಯುವ ಲೆಕ್ಕ (4)
2. ಪ್ರಧಾನವಾಗಿರುವ ಮುಖ (3)
4. ಕಲೆಸಿದ ಗೋಧಿ ಹಿಟ್ಟು (3)
6. ದಾಸರ ವೈರಾಗ್ಯವನ್ನು ತೋರಿದ ಹೊಟ್ಟೆ (3)
7. ಹೀಗೆ ಜೀರ್ಣೋದ್ಧಾರ ಮಾಡು (5)
10. ಕಣದಲ್ಲಿ ನಡೆದಿರುವ ಲಗ್ನ (3)
11. ನೀರು, ವಿದ್ಯುತ್, ಶಬ್ದಮೊದಲಾದವುಗಳ ಅಲೆ (3)
13. ವಿಷ್ಣುವಿನ ವಾಹನವಿದು (3)
14. ಲಲಿತ ವಿದ್ಯೆಗಳನ್ನು ಕಲಿತವನು (4)

ಮೇಲಿಂದ ಕೆಳಕ್ಕೆ

1. ಕಬ್ಬಿಣದ ಭಾರೀ ಪೆಟ್ಟಿಗೆ (3)
2. ಸಮತಲ ಪ್ರದೇಶ (3)
3. ಕತ್ತಿಯ ಅಲಗು (4)
5. ಬಾಗಿಲ ಬಳಿ ನಡೆಯುತ್ತಿರುವ ಕಾಳಗ (3)
6. ಕೆಲಸ ಮಾಡಲು ಬೇಕಾದ ಸಾಧನ (5)
8. ಸುತ ಗಳಿಸಿಕೊಂಡಿರುವ ಪುಣ್ಯ (3)
9. ಉಪ್ಪು ತಯಾರಿಸುವವನು (4)
10. ಕಸ್ತೂರಿ ಕಂಪು ಬೀರುವ ಭಾಷೆ (3)
12. ನಿಂತು ನಿಂತು ಬರುವ ಅಸ್ಪಷ್ಟ ಮಾತು (3)



5271ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಾಣದಾನ 3.ಅಪರೂಪ 5.ನಡುಕ 8.ಮಿಥುನ 9.ಯೋಗ್ಯತಾಪತ್ರ 10.ತಪ್ಪಲೆ 11.ಹರಕೆ 15.ರಿಯಾಯಿತಿ 16.ಮಧುಮಾಸ

ಮೇಲಿಂದ ಕೆಳಕ್ಕೆ: 1.ಪ್ರಾಚೀನ 2.ನಗ್ನ 3.ಅಕ್ಷ 4.ಪರಧನ 6.ಕರೆಯೋಲೆ 7.ಸಂತಾಪ 8.ಮಿತ್ರದ್ರೋಹ 10.ತರಕಾರಿ 12.ಕೆಲಸ 13.ಖ್ಯಾತಿ 14.ಭೀಮ

ಸುಡೊಕು 5658

	3		4			2		7
7		4		3			5	
			1			8		3
				4				
3		2	9		1			
				6				2
1		8	3		4		2	
	2					9		8
6		9		2			3	1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5657 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಷೇರುಪೇಟೆ ವಹಿವಾಟು



ನಾಮನಿರ್ದೇಶನ: ಗಡುವು ವಿಸ್ತರಿಸಿದ ಸೆಬಿ

ನವದೆಹಲಿ (ಪಿಟಿಐ): ಟ್ರೇಡಿಂಗ್ ಹಾಗೂ ಡಿಮ್ಯಾಟ್ ಖಾತೆ ಹೊಂದಿರುವವರು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿರುವವರು ನಾಮನಿರ್ದೇಶನ ಮಾಡಲು ಅಥವಾ ಯಾರನ್ನೂ ನಾಮನಿರ್ದೇಶನ ಮಾಡುವುದಿಲ್ಲ ಎಂಬ ಹೇಳಿಕೆ ಸಲ್ಲಿಸಲು ಇದ್ದ ಗಡುವನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿದೆ.

ಈ ಮೊದಲು ಮಾರ್ಚ್ 31ರ ಗಡುವು ನಿಗದಿ ಮಾಡಲಾಗಿತ್ತು. ಈ ಗಡುವನ್ನು ಹಿಂದೆಯೂ ವಿಸ್ತರಿಸಲಾಗಿದೆ. ಷೇರು ಬ್ರೋಕರ್‌ಗಳು ತಮ್ಮ ಗ್ರಾಹಕರಿಗೆ, ನಾಮನಿರ್ದೇಶನ ಮಾಡುವಂತೆ ಅಥವಾ ನಾಮನಿರ್ದೇಶನ ಮಾಡುವುದಿಲ್ಲ ಎಂಬ ಹೇಳಿಕೆಯನ್ನು ಸಲ್ಲಿಸುವಂತೆ ಹದಿನೈದು ದಿನಕ್ಕೊಮ್ಮೆ ಇ-ಮೇಲ್ ಅಥವಾ ಎಸ್‌ಎಂಎಸ್‌ಅನ್ನು ಕಳುಹಿಸಬೇಕು ಎಂದು ಕೂಡ ಸೆಬಿ ಹೇಳಿದೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿರುವವರು ಸೆಪ್ಟೆಂಬರ್ 30ಕ್ಕೆ ಮೊದಲು ನಾಮನಿರ್ದೇಶನ ಮಾಡದಿದ್ದರೆ ಅಥವಾ ಯಾರನ್ನೂ ನಾಮನಿರ್ದೇಶನ ಮಾಡುವುದಿಲ್ಲ ಎಂಬ ಹೇಳಿಕೆ ಸಲ್ಲಿಸದಿದ್ದರೆ ಅವರಿಗೆ ತಮ್ಮ ಹೂಡಿಕೆಗಳನ್ನು ಹಿಂಪಡೆಯಲು ಅವಕಾಶ ಇರುವುದಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಚನ್ನಗಿರಿ	
ರಾಶಿ	41229-45600
ಹೊನ್ನಾಳಿ	
ರಾಶಿ	45633-45633
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಂದಾಪುರ	
ಹಳೆಚಾಲಿ	44000-44500
ಹೊಸಚಾಲಿ	35000-36000
ಪುತ್ತೂರು	
ಕೋಕ	11000-26000
ಹೊಸತು	32000-38300

ಶಿವಮೊಗ್ಗ	
ಗೊರಬಲು	17001-17001
ರಾಶಿ	43509-45059
ಸರಕು	63099-63099
ಸಿದ್ದಾಪುರ	
ಬಿಳಿಗೋಟು	27108-30299
ಚಾಲಿ	34299-35555
ಕೋಕ	26709-32229
ಹೊಸಚಾಲಿ	32699-35099
ಕೆಂಪುಗೋಟು	29089-34109
ರಾಶಿ	41869-44099
ತಟ್ಟಿಬೆಟ್ಟೆ 3	6109-43249
ಶಿರಸಿ	
ಬೆಟ್ಟೆ	33899-41210
ಬಿಳಿಗೋಟು	25209-31290
ಚಾಲಿ	30699-35761
ಕೆಂಪುಗೋಟು	24199-33899
ರಾಶಿ	36589-44099

ಯಲ್ಲಾಪುರ	
ಆಪಿ	51895-53899
ಬಿಳಿಗೋಟು	24069-32899
ಚಾಲಿ	33212-36666
ಕೋಕ	14899-31812
ಕೆಂಪುಗೋಟು	26899-33900
ರಾಶಿ	40309-49209
ತಟ್ಟಿಬೆಟ್ಟೆ	37399-44318

ಕಾಫಿ

ಮೂಡಿಗೆರೆ	ಹಾಸನ
	ಮುದ್ರೆಮನೆ
ಎಪಿ	14500
ಎಸಿ	7700
ಆರ್‌ಪಿ	10250
ಆರ್‌ಸಿ	5160

ಕಳಪೆ ಗುಣಮಟ್ಟದ ಔಷಧ ತಯಾರಕರ ವಿರುದ್ಧ ಕಠಿಣ ಕ್ರಮ

18 ಔಷಧ ಕಂಪನಿಗಳ ಪರವಾನಗಿ ರದ್ದು



ನವದೆಹಲಿ (ಪಿಟಿಐ): ಕಳಪೆ ಗುಣಮಟ್ಟದ ಔಷಧಗಳನ್ನು ತಯಾರಿಸುವ ಕಂಪನಿಗಳ ಮೇಲೆ ಕಠಿಣ ಕ್ರಮಕ್ಕೆ ಮುಂದಾಗಿರುವ ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರಗಳು, 76 ಕಂಪನಿಗಳಿಗೆ ಸೇರಿದ ಸ್ಥಳಗಳಲ್ಲಿ ಜಂಟಿ ತಪಾಸಣೆ ನಡೆಸಿವೆ. ನಕಲಿ ಮತ್ತು ಕಳಪೆ ಗುಣಮಟ್ಟದ ಔಷಧ ತಯಾರಿಸುತ್ತಿದ್ದ ಆರೋಪದ ಅಡಿ 18 ಕಂಪನಿಗಳ ಪರವಾನಗಿಯನ್ನು ರದ್ದುಮಾಡಿವೆ.

ಹಲವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಳೆದ 15 ದಿನಗಳಿಂದ ಈ ಕಾರ್ಯಾಚರಣೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಆದರೆ ಪರವಾನಗಿ ರದ್ದು ಮಾಡಿರುವ ಕಂಪನಿಗಳ ಹೆಸರು ತಿಳಿದುಬಂದಿಲ್ಲ.

ಕಳಪೆ ಗುಣಮಟ್ಟದ ಔಷಧಗಳನ್ನು ತಯಾರಿಸುತ್ತಿದ್ದ 76 ಕಂಪನಿಗಳ ಮೇಲೆ ಮೊದಲ ಹಂತದಲ್ಲಿ ಕ್ರಮ ಜರುಗಿಸಲಾಗಿದೆ. 18 ಕಂಪನಿಗಳ ಪರವಾನಗಿ ರದ್ದು ಮಾಡಿರುವುದಲ್ಲದೆ, 26 ಕಂಪನಿಗಳಿಗೆ ಷೋಕಾಸ್ ನೋಟಿಸ್ ಜಾರಿಮಾಡಲಾಗಿದೆ. ಮೂರು ಕಂಪನಿಗಳ ಕೆಲವು ಉತ್ಪನ್ನಗಳಿಗೆ ನೀಡಿದ್ದ ಅನುಮತಿಯನ್ನು ರದ್ದು ಮಾಡಲಾಗಿದೆ ಎಂದು ಮೂಲಗಳು ವಿವರಿಸಿವೆ.

ಕಳಪೆ ಗುಣಮಟ್ಟದ ಔಷಧಗಳ ವಿರುದ್ಧದ ವಿಶೇಷ ಅಭಿಯಾನದ ಭಾಗವಾಗಿ ಕಾನೂನು ಜಾರಿ ಸಂಸ್ಥೆಗಳು ಒಟ್ಟು 203 ಕಂಪನಿಗಳನ್ನು ಗುರುತಿಸಿವೆ. ಈ ಪೈಕಿ ಹೆಚ್ಚಿನ ಕಂಪನಿಗಳು ಹಿಮಾಚಲ ಪ್ರದೇಶದಲ್ಲಿ (70) ಇವೆ. ಉತ್ತರಾಖಂಡ (45) ಮತ್ತು ಮಧ್ಯಪ್ರದೇಶದಲ್ಲಿಯೂ (23) ಹೆಚ್ಚಿನ ಸಂಖ್ಯೆಯಲ್ಲಿ ಕಂಪನಿಗಳನ್ನು ಗುರುತಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ತಪಾಸಣೆ ನಡೆಸಲಾಗುತ್ತದೆ ಎಂದು ಗೊತ್ತಾಗಿದೆ.

ಭಾರತ ಮೂಲದ ಕಂಪನಿಗಳು ಸಿದ್ಧಪಡಿಸುವ ಔಷಧಗಳ ಗುಣಮಟ್ಟದ ಬಗ್ಗೆ ಈಚಿನ ದಿನಗಳಲ್ಲಿ ಪ್ರಶ್ನೆಗಳು ಮೂಡಿವೆ. ತಮಿಳುನಾಡು ಮೂಲದ ಗ್ಲೋಬಲ್ ಫಾರ್ಮಾ ಹೆಲ್ತ್‌ಕೇರ್ ಕಂಪನಿಯು ತಾನು ಸಿದ್ಧಪಡಿಸಿದ ಕಣ್ಣಿನ ಡ್ರಾಪ್ಸ್‌ಗಳನ್ನು ಫೆಬ್ರುವರಿಯಲ್ಲಿ ಹಿಂಪಡೆದಿತ್ತು. ಈ ಡ್ರಾಪ್ಸ್‌ಗಳಿಗೂ ಅಮೆರಿಕದಲ್ಲಿ ಕೆಲವರು ದೃಷ್ಟಿ ಕಳೆದುಕೊಂಡಿರುವುದಕ್ಕೂ ಸಂಬಂಧ ಇದೆ ಎಂಬ ಆರೋಪ ಇದೆ.

ರಷ್ಯಾದಿಂದ ಭಾರತಕ್ಕೆ ತೈಲ ರಫ್ತು 22 ಪಟ್ಟು ಏರಿಕೆ

ಮಾಸ್ಕೊ (ಎಎಫ್‌ಪಿ): 2022ರಲ್ಲಿ ರಷ್ಯಾ ದೇಶವು ಭಾರತಕ್ಕೆ ರಫ್ತು ಮಾಡುವ ಕಚ್ಚಾ ತೈಲದ ಪ್ರಮಾಣವು 22 ಪಟ್ಟು ಹೆಚ್ಚಳ ಕಂಡಿದೆ ಎಂದು ರಷ್ಯಾದ ಉಪ ಪ್ರಧಾನಿ ಮಂಗಳವಾರ ಹೇಳಿದ್ದಾರೆ.

ರಷ್ಯಾ–ಉಕ್ರೇನ್‌ಸಂಘರ್ಷಆರಂಭವಾದನಂತರದಲ್ಲಿ ಐರೋಪ್ಯ ಒಕ್ಕೂಟದ ದೇಶಗಳು ರಷ್ಯಾ ಇಂಧನದ ಮೇಲಿನ ಅವಲಂಬನೆಯನ್ನು ತಗ್ಗಿಸಲು ಮುಂದಾದವು. ಆಗ ರಷ್ಯಾ, ಭಾರತ ಮತ್ತು ಚೀನಾಕ್ಕೆ ಕಚ್ಚಾ ತೈಲ ರಫ್ತು ಹೆಚ್ಚಿಸಲು ಆರಂಭಿಸಿತು.

ಚೀನಾ ಮತ್ತು ಭಾರತಕ್ಕೆ ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾ ತೈಲ ಪೂರೈಕೆಯಾಗುತ್ತಿದೆ. 'ನಮ್ಮ ಇಂಧನ ಸಂಪನ್ಮೂಲಗಳಲ್ಲಿ ಹೆಚ್ಚಿನ ಪಾಲನ್ನು ನಮ್ಮೊಂದಿಗೆ ಸ್ನೇಹದಿಂದ ಇರುವ ದೇಶಗಳಿಗೆ ಕಳುಹಿಸುತ್ತಿದ್ದೇವೆ' ಎಂದು ರಷ್ಯಾ ಉಪ ಪ್ರಧಾನಿ ಅಲೆಕ್ಸಾಂಡರ್ ನೊವಾಕ್ ಅವರು ಹೇಳಿರುವುದಾಗಿ ರಷ್ಯಾದ ಸುದ್ದಿಸಂಸ್ಥೆಗಳು ವರದಿ ಮಾಡಿವೆ. 'ಭಾರತಕ್ಕೆ ರಫ್ತು ಮಾಡುವ ಕಚ್ಚಾ ತೈಲದ ಪ್ರಮಾಣವು ಕಳೆದ ವರ್ಷ 22 ಪಟ್ಟು ಹೆಚ್ಚಾಗಿದೆ' ಎಂದಿದ್ದಾರೆ.

ಚೀತಾ ಕಾರ್ಯಪಡೆ ತಜ್ಞರ ಅರ್ಹತೆ, ಅನುಭವದ ವಿವರ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಚೀತಾ ಕಾರ್ಯಪಡೆಯಲ್ಲಿರುವ ತಜ್ಞರ ಅರ್ಹತೆ ಮತ್ತು ಅನುಭವದ ಕುರಿತು ವಿವರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಮಂಗಳವಾರ ಸುಪ್ರೀಂ ಕೋರ್ಟ್ ಹೇಳಿದೆ. ನಮೀಬಿಯಾದಿಂದ ಭಾರತದ ಕುನೊ ರಾಷ್ಟ್ರೀಯ ಉದ್ಯಾನ ತರಲಾಗಿದ್ದ ಎಂಟು ಚೀತಾಗಳ ಪೈಕಿ ಒಂದು ಚೀತಾ ಮೃತಪಟ್ಟ ಮರುದಿನವೇ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ.

ಮಾಹಿತಿ ನೀಡಲು ಎರಡು ವಾರಗಳ ಕಾಲಾವಕಾಶವನ್ನು ಪೀಠ ನೀಡಿದೆ.

ರೈಟ್–ಆಫ್ ಸಾಲದಲ್ಲಿ ಶೇ 14ರಷ್ಟು ವಸೂಲು

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಕಳೆದ ಐದು ವರ್ಷಗಳಲ್ಲಿ, ರೈಟ್–ಆಫ್ ಮಾಡಲಾದ ಒಟ್ಟು ಸಾಲದಲ್ಲಿ ಶೇಕಡ 14ರಷ್ಟನ್ನು ಮಾತ್ರ ವಸೂಲಿ ಮಾಡಲು ಸಾಧ್ಯವಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಗೆ ತಿಳಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ರೈಟ್–ಆಫ್ ಮಾಡಿದ ಒಟ್ಟು ₹ 7.34 ಲಕ್ಷ ಕೋಟಿ ಸಾಲದಲ್ಲಿ ₹ 1.03 ಲಕ್ಷ ಕೋಟಿಯಷ್ಟು ಮೊತ್ತವನ್ನು ಮಾತ್ರ ವಸೂಲು ಮಾಡಲು ಸಾಧ್ಯವಾಗಿದೆ ಎಂದು ಲಿಖಿತ ಉತ್ತರದಲ್ಲಿ ನಿರ್ಮಲಾ ಅವರು ಹೇಳಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪುಷ್ಪಲತಾ ಬಿರಾದಾರ್, ಜಯನಗರ, ಬೆಂಗಳೂರು

- **ಪ್ರಶ್ನೆ:** ನಾನು ಒಂದು ಕಾರು ಕೊಳ್ಳುವವಳಿದ್ದೇನೆ. ಬ್ಯಾಂಕ್‌ನಿಂದ ಸಾಲ ಸಿಗುತ್ತಿದೆ. ಇದಕ್ಕೆ ಕಾರು ಮಾರಾಟ ಮಾಡುವ ಏಜೆನ್ಸಿಯವರು ಅಗತ್ಯ ಕೊಟೇಶನ್ ಕೊಟ್ಟಿದ್ದಾರೆ. ಇದರಲ್ಲಿ ಶೇಕಡ 1ರಷ್ಟು ತೆರಿಗೆ ಸೇರಿಸಿದ್ದಾರೆ. ಇದು ಜಿಎಸ್‌ಟಿ ಅಲ್ಲದ ಮೊತ್ತ. ಸಂಬಂಧಪಟ್ಟ ಏಜೆಂಟರಲ್ಲಿ ವಿಚಾರಿಸಿದಾಗ ಇದು ತಮಗೆ ಮುಂದೆ ಕ್ರೆಡಿಟ್ ಸಿಗುತ್ತದೆ, ಅದರಿಂದ ಯಾವುದೇ ನಷ್ಟ ಇಲ್ಲ ಎಂದಿದ್ದಾರೆ. ಕಾರಿನ ಮೌಲ್ಯ ₹ 18 ಲಕ್ಷ. ಒಂದು ವೇಳೆ ಇದರಿಂದ ನಷ್ಟ ಇಲ್ಲ ಎಂದಾದರೆ ಅದು ಹೇಗೆ ಮತ್ತು ನಾನು ಯಾವ ರೀತಿ ಮುಂದುವರಿಯಬೇಕು?

ಉತ್ತರ: ಮೂಲದಲ್ಲಿ ತೆರಿಗೆ ಸಂಗ್ರಹ (ಟಿಸಿಎಸ್) ಎನ್ನುವುದು ನಿಗದಿತ ಸರಕುಗಳ ಮಾರಾಟದ ಸಂದರ್ಭದಲ್ಲಿ ಖರೀದಿದಾರರಿಂದ ತೆರಿಗೆಯಾಗಿ ಸಂಗ್ರಹಿಸಿದ ಹೆಚ್ಚುವರಿ ಮೊತ್ತ. ಅದನ್ನು ಆದಾಯ ತೆರಿಗೆ ಇಲಾಖೆಗೆ ಖರೀದಿದಾರನ ಪ್ಯಾನ್ ದಾಖಲಿಸಿ ಜಮಾ ಮಾಡಲಾಗುತ್ತದೆ. ಇದರ ಹಿಂದಿರುವ ಉದ್ದೇಶ, ದೊಡ್ಡ ಮೌಲ್ಯದ ವಾಹನ ಖರೀದಿಯ ಸಂದರ್ಭದಲ್ಲಿ ಖರೀದಿದಾರ ಘೋಷಿತ ಆದಾಯ ಮೂಲ ಹೊಂದಿ ಖರೀದಿಸಲು ಶಕ್ತನಾದವನೇ ಅಥವಾ ಅಘೋಷಿತ ಆದಾಯ ಮೂಲಗಳಿಂದ ಖರೀದಿಸಿದನೇ ಎಂಬುದರ ಸುಳಿವು ಸಂಗ್ರಹಿಸುವುದೂ ಆಗಿದೆ. ನಿಮ್ಮ ವಿಚಾರದಲ್ಲಿ, ನಿಮಗೆ ಇತರ ತೆರಿಗೆ ಆದಾಯವಿದ್ದಲ್ಲಿ ಹಾಗೂ ಅದಕ್ಕೆ ಸಂಬಂಧಿಸಿ ತೆರಿಗೆ ಪಾವತಿ ಇದ್ದಲ್ಲಿ, ಅಂತಹ ಮೊತ್ತದೊಡನೆ ಟಿಸಿಎಸ್ ಮೊತ್ತವನ್ನು ವಜಾ ಮಾಡಬಹುದು. ಹೀಗಾಗಿ ಉಳಿದ ಮೊತ್ತವನ್ನಷ್ಟೇ ನಿವ್ವಳ ತೆರಿಗೆಯಾಗಿ ಪಾವತಿಸಬೇಕು. ಒಂದು ವೇಳೆ ನಿಮಗೆ ತೆರಿಗೆ ಅನ್ವಯವಾಗದಿದ್ದಲ್ಲಿ ನೀವು ತೆರಿಗೆ ವಿವರ ಸಲ್ಲಿಸಿ ಟಿಸಿಎಸ್ ಮೊತ್ತ ಮರಳಿ ಪಡೆಯಬಹುದು.

ಮಾರಾಟ ಮಾಡುವ ಯಾವುದೇ ವಾಹನದ ಮೌಲ್ಯ ₹ 10 ಲಕ್ಷಕ್ಕಿಂತ ಅಧಿಕ ಇದ್ದರೆ, ಅಂತಹ ಮಾರಾಟದ ಮೇಲೆ ಟಿಸಿಎಸ್ ಅನ್ವಯವಾಗುತ್ತದೆ. ಹೀಗಾಗಿ ತೆರಿಗೆಯನ್ನು ಸಂಗ್ರಹಿಸಿ ಖರೀದಿದಾರನ ಪ್ಯಾನ್ ಪಡೆದು ಅವರ ಖಾತೆಗೆ ಜಮಾ ಮಾಡುವುದು ವಾಹನ ಮಾರಾಟ ಮಾಡುವ ಕಂಪನಿಯ ಕರ್ತವ್ಯವಾಗಿರುತ್ತದೆ. ನಿಮಗೆ ಈಗಾಗಲೇ ಸೇಲ್ಸ್ ಏಜೆಂಟ್ ವಿವರಿಸಿದಂತೆ, ಟಿಸಿಎಸ್ ಮೊತ್ತವು ನಷ್ಟವಲ್ಲ. ಇದು ಕೇವಲ ಕಾನೂನಾತ್ಮಕ ಪ್ರಕ್ರಿಯೆಯಾಗಿದೆ.

ಮಲ್ಲಪ್ಪ ಎನ್, ಊರು ಬೇಡ

- **ಪ್ರಶ್ನೆ:** ನಾನು ರೈಲ್ವೆ ಇಲಾಖೆಯ ನಿವೃತ್ತ ನೌಕರ. ವಯಸ್ಸು 63 ವರ್ಷ. ನನ್ನ ಪತ್ನಿಯ ವಯಸ್ಸು 55 ವರ್ಷ. ನಾನು ಆಕೆಯ ಹೆಸರಲ್ಲಿ ದೊಡ್ಡಬಳ್ಳಾಪುರ ಸಮೀಪದ ರಾಜಾನುಕುಂಟೆ ಹತ್ತಿರ 'ಬಿ' ಖಾತಾ ರೆವೆನ್ಯೂ ನಿವೇಶನವನ್ನು (30x40) 2012ರ ಆಗಸ್ಟ್ 16ರಂದು ₹ 9 ಲಕ್ಷಕ್ಕೆ ಖರೀದಿಸಿದ್ದೆ. ಈ ನಿವೇಶನವನ್ನು ಮಾರಾಟ ಮಾಡಿದರೆ ಸುಮಾರು ₹ 27 ಲಕ್ಷ ಸಿಗಬಹುದು. ಈ ಹಣದಲ್ಲಿ ನಾನು ಅಥವಾ ನನ್ನ ವಯಸ್ಕ ಮಗನ ಹೆಸರಲ್ಲಿ ಸುಮಾರು ₹ 60 ಲಕ್ಷ ಕೊಟ್ಟು ಹೊಸ ನಿವೇಶನ ಖರೀದಿಸಿದರೆ ನನ್ನ ಹೆಂಡತಿಗೆ ಬಂಡವಾಳ ವೃದ್ಧಿ ತೆರಿಗೆ ಬರದಂತೆ ಮಾಡಬಹುದೇ ? ಅಥವಾ ತೆರಿಗೆ ಕೊಡಬೇಕಾಗಬಹುದೇ?

ಉತ್ತರ: ಯಾವುದೇ ಸ್ಥಿರಾಸ್ತಿ ಅಥವಾ ಜಮೀನಿನ ಮಾರಾಟದ ಮೇಲಿನ ಬಂಡವಾಳ ವೃದ್ಧಿ ತೆರಿಗೆಯನ್ನು ಬಂಡವಾಳದ ಮೇಲಿನ ಲಾಭದ ಸ್ವರೂಪದ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಅದು ದೀರ್ಘಾವಧಿ ಅಥವಾ ಅಲ್ಪಾವಧಿ ಲಾಭವಾಗಿರಬಹುದು. ಯಾವುದೇ ಸ್ಥಿರಾಸ್ತಿಯನ್ನು 2 ವರ್ಷಕ್ಕಿಂತ ಅಧಿಕ ಸಮಯ ಖರೀದಿದಾರರ ಹೆಸರಲ್ಲಿ ಹೊಂದಿದಾಗ ಅಂತಹ ಆಸ್ತಿಯನ್ನು 'ದೀರ್ಘಾವಧಿ ಬಂಡವಾಳ ಆಸ್ತಿ'ಯಾಗಿ ಪರಿಗಣಿಸಲಾಗುತ್ತದೆ. ಹೀಗಾಗಿ ಅಂತಹ ವರ್ಗದಲ್ಲಿ ಬರುವ ಸ್ಥಿರ ಆಸ್ತಿಯ ಮಾರಾಟದ ಮೇಲಿನ ಲಾಭ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 112ರ ಅಡಿಯಲ್ಲಿ ಹಣದುಬ್ಬರ ಸೂಚ್ಯಂಕ ಪ್ರಯೋಜನದೊಂದಿಗೆ (ಇಂಡೆಕ್ಸೇಷನ್) ಶೇಕಡ 20ರ ಮೂಲ ತೆರಿಗೆಗೆ ಒಳಪಡುತ್ತದೆ.

ಹತ್ತು ವರ್ಷಗಳ ಹಿಂದೆ ನೀವು ₹ 9 ಲಕ್ಷ ಕೊಟ್ಟು ನಿವೇಶನ ಖರೀದಿಸಿದ್ದೀರಿ. ಅದರ ಇಂದಿನ ಹಣದುಬ್ಬರ ಸಮೀಕರಿಸಿದ ಮೌಲ್ಯ ಸುಮಾರು ₹ 14.90 ಲಕ್ಷ (₹ 9 ಲಕ್ಷ X ಮಾರಾಟ ವರ್ಷದ ಹಣದುಬ್ಬರ ಮೌಲ್ಯ 331 / ಖರೀದಿ ವರ್ಷದ ಹಣದುಬ್ಬರ ಮೌಲ್ಯ 200). ನಿಮ್ಮ ನಿವೇಶನದ ನಿರೀಕ್ಷಿತ ಮಾರಾಟ ಮೌಲ್ಯ ₹ 27 ಲಕ್ಷ. ಇವೆರಡರ ನಡುವಿನ ವ್ಯತ್ಯಾಸವೇ ನಿಮ್ಮ ಆಸ್ತಿ ಮಾರಾಟದಿಂದ ಬಂದಿರುವ ದೀರ್ಘಾವಧಿ ಬಂಡವಾಳ ವೃದ್ಧಿ ಲಾಭ.

ತೆರಿಗೆ ವಿಚಾರ ಹಾಗೂ ಅದಕ್ಕೆ ಸಂಬಂಧಿಸಿದ ವ್ಯಾಜ್ಯಗಳು ವೈಯಕ್ತಿಕ ನೆಲೆಯಲ್ಲಿ ನಿರ್ಣಯ ಆಗುತ್ತವೆ. ನಿಮ್ಮ ಪತ್ನಿಯ ಹೆಸರಲ್ಲಿ ಹೊಂದಿರುವ ಜಮೀನನ್ನು ಮಾರಾಟ ಮಾಡಿದಾಗ ತೆರಿಗೆ ಬಾಧ್ಯತೆಯೂ ಅವರದೇ ಆಗಿರುತ್ತದೆ. ಅದೇ ರೀತಿ ತೆರಿಗೆ ಉಳಿತಾಯಕ್ಕೆ ಸಂಬಂಧಿಸಿದ ಎಲ್ಲ ಹೂಡಿಕೆಗಳೂ ಅವರ ಹೆಸರಲ್ಲಿ ದಾಖಲಾಗಬೇಕು. ಆದರೆ, ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹೂಡಿಕೆಯನ್ನು ಖಾಲಿ ನಿವೇಶನ ಕೊಳ್ಳುವ ಹಂತಕ್ಕೆ ಸೀಮಿತಗೊಳಿಸಿದರೆ ಸಾಲದು. ಅದರ ಬದಲು ಹೊಸ ಮನೆ ಖರೀದಿ ಅಥವಾ ಮನೆ ನಿರ್ಮಾಣಕ್ಕೆ ವ್ಯಯಿಸಬೇಕು. ಆಗ ಮಾತ್ರ ಸೆಕ್ಷನ್ 54 ಎಫ್ ಅಡಿ ಉಲ್ಲೇಖಿಸಿರುವಂತೆ, ಹೂಡಿಕೆ ಮಾಡಿದ ಮೊತ್ತದ ಮೇಲಿನ ಲಾಭಕ್ಕೆ ವಿನಾಯಿತಿ ಪಡೆಯಲು,ತೆರಿಗೆ ಉಳಿಸಲು ಸಾಧ್ಯ.

ಇದಲ್ಲದೆ, ಸೆಕ್ಷನ್ 54ಇಸಿ ಅಡಿ, ರೂರಲ್ ಎಲೆಕ್ಟ್ರಿಫಿಕೇಶನ್ ಕಾರ್ಪೊರೇಷನ್ ಲಿಮಿಟೆಡ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಇಂಡಿಯನ್ ರೈಲ್ವೆ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್ ಇತ್ಯಾದಿ ಕಂಪನಿಗಳ ಬಾಂಡ್‌ಗಳಲ್ಲಿ 5 ವರ್ಷದ ಅವಧಿಗೆ ಗರಿಷ್ಠ ₹ 50 ಲಕ್ಷದತನಕ, ನಿವೇಶನ ಮಾರಾಟವಾದ 6 ತಿಂಗಳೊಳಗೆ ಹೂಡಿಕೆ ಮಾಡುವ ಮೂಲಕವೂ ತೆರಿಗೆ ವಿನಾಯಿತಿ ಪಡೆಯಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹333-582
ದ್ವಿತಳಿ (ಬಿ.ವಿ) ₹271-671

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹146
ಆರ್‌ಎಸ್‌ಎಸ್-5 ₹139
ಗುಡ್ ಲಾಟ್ ₹131

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16985
ಇಂದಿನ ಅಂತ್ಯ	16951
▼	34
ದಿನದ ಕನಿಷ್ಠ	17,061

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹450

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1,000-1,500
ಮಧ್ಯಮ	₹700-1,000
ಸಣ್ಣ	₹400-700

ಕೊಬ್ಬರಿ ಧಾರಣೆ



ಅರಸೀಕೆರೆ	₹9000-9826
ಪುತ್ತೂರು	₹4500-6000
ತುರುವೇಕೆರೆ	₹9600-9600

ಪೋಸ್ಟರ್ ಅಂಟಿಸಿ ಪ್ರಧಾನಿ ವಿರುದ್ಧ ಪ್ರತಿಭಟನೆ: ಎಎಪಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಪೋಸ್ಟರ್‌ಗಳನ್ನು ಅಂಟಿಸುವ ಮೂಲಕ ಮಾರ್ಚ್ 30ರಂದು ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿ ಆಮ್ ಆದ್ಮಿ ಪಕ್ಷ ಮಂಗಳವಾರ ತಿಳಿಸಿದೆ.

'ಪ್ರತಿಭಟನೆ ಸಂಬಂಧ 11 ಭಾಷೆಗಳಲ್ಲಿ ಪೋಸ್ಟರ್‌ಗಳನ್ನು ಸಿದ್ಧಪಡಿಸಲಾಗಿದೆ' ಎಂದು ದೆಹಲಿ ರಾಜ್ಯ ಸಂಚಾಲಕ ಹಾಗೂ ಪರಿಸರ ಸಚಿವ ಗೋಪಾಲ್ ರೈ ಅವರು ತಿಳಿಸಿದರು.

ದೆಹಲಿಯ ಗೋಡೆ ಗೋಡೆಗಳ ಮೇಲೆ ಹಾಗೂ ಎಲೆಕ್ಟ್ರಿಲ್ ಕಂಬಗಳ ಮೇಲೆ ಎಎಪಿ ಕಾರ್ಯಕರ್ತರು 'ಮೋದಿಯನ್ನು ಇಳಿಸಿ, ದೇಶವನ್ನು ಉಳಿಸಿ' ಎಂಬ ಬರಹ ಇದ್ದ ಪೋಸ್ಟರ್‌ಗಳನ್ನು ಕಳೆದ ವಾರ ಅಂಟಿಸಿದ್ದರು. ಈ ಸಂಬಂಧ ಆರು ಮಂದಿಯನ್ನು ಬಂಧಿಸಲಾಗುತ್ತು. ಜೊತೆಗೆ 49 ಎಫ್‌ಐಆರ್‌ಗಳನ್ನು ದಾಖಲು ಮಾಡಲಾಗಿದೆ.

ಐಟಿಎಫ್ ಮೈಸೂರು ಓಪನ್ ಟೆನಿಸ್ ಟೂರ್ನಿ: ಸಂದೇಶ್‌ಗೆ ನಿರಾಸೆ

ಪ್ರೀ ಕ್ವಾರ್ಟರ್‌ಗೆ ಸಿದ್ಧಾರ್ಥ್

• ಮೋಹನ್ ಕುಮಾರ ಸಿ.



ಮೈಸೂರು ಟೆನಿಸ್ ಕ್ಲಬ್ ಅಂಗಳದಲ್ಲಿ ನಡೆಯುತ್ತಿರುವ ಐಟಿಎಫ್– ಮೈಸೂರು ಓಪನ್ ಟೂರ್ನಿಯಲ್ಲಿ ಮಂಗಳವಾರ ಭಾರತದ ಸಿದ್ದಾರ್ಥ್ ರಾವತ್ ಆಟದ ವೈಖರಿ

ಮೈಸೂರು: ಭಾರತದ ಸಿದ್ಧಾರ್ಥ್ ರಾವತ್ ಇಲ್ಲಿ ನಡೆಯುತ್ತಿರುವ ಮೈಸೂರು ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸಿದ್ಧಾರ್ಥ್ ಅವರು 6-3, 6-2ರಲ್ಲಿ ಅಮೆರಿಕದ ಡಾಲಿ ಬ್ಲಾಂಚ್ ವಿರುದ್ಧ ಗೆದ್ದರು.

ಆಕರ್ಷಕ ಸರ್ವ್ ಹಾಗೂ ಬ್ಯಾಕ್‌ಹ್ಯಾಂಡ್, ಗ್ರೌಂಡ್‌ಸ್ಟ್ರೋಕ್ ಹೊಡೆತಗಳಿಂದ ಬ್ಲಾಂಚ್ ಅವರನ್ನು ಕಾಡಿದ ಸಿದ್ಧಾರ್ಥ್, 1 ಗಂಟೆ 38 ನಿಮಿಷದಲ್ಲಿ ಗೆಲುವು ತಮ್ಮದಾಗಿಸಿಕೊಂಡರು.

ಮತ್ತೊಂದು ಪಂದ್ಯದಲ್ಲಿ ಭಾರತದ ಇಶಾಖ್ ಇಕ್ಬಾಲ್ ಅವರು ಮೈಸೂರಿನ ಸೂರಜ್ ಪ್ರಭೋದ್ ವಿರುದ್ಧ 7-6, 6-0ರಲ್ಲಿ ಗೆದ್ದರು. ಮೊದಲ ಸೆಟ್‌ನಲ್ಲಿ ಜಿದ್ದಾಜಿದ್ದಿನಿಂದ ಪೈಪೋಟಿ ನಡೆಸಿದ ಇಬ್ಬರೂ ಆಟಗಾರರು ಎಲ್ಲರ ಗಮನ ಸೆಳೆದರು. ಟೈಬ್ರೇಕರ್‌ನಲ್ಲಿ ಸೆಟ್ ಅನ್ನು ತಮ್ಮದಾಗಿಸಿಕೊಂಡ ಇಕ್ಬಾಲ್, ಎರಡನೇ ಸೆಟ್‌ನಲ್ಲಿ ಪಾರಮ್ಯ ಮೆರೆದರು.

ಫೈಸಲ್ ಖಮರ್ 6-1, 6-1ರಲ್ಲಿ ರಿಷಿ ರೆಡ್ಡಿ ವಿರುದ್ಧ ಗೆದ್ದರೆ, ಕರಣ್ ಸಿಂಗ್ ಅವರು ಕಜಕಸ್ತಾನದ ಗ್ರಿಗೋರಿ ಲೊಮಕಿನ್ ಅವರನ್ನು 6-3, 3-6, 7-6ರಲ್ಲಿ ಮಣಿಸಿದರು. 2 ಗಂಟೆ 4 ನಿಮಿಷ ನಡೆದ ಪಂದ್ಯವು ನೋಡುಗರನ್ನು ತುದಿಗಾಲಲ್ಲಿ ನಿಲ್ಲಿಸಿತು.

ಸಂದೇಶ್, ಕಾಮತ್‌ಗೆ ನಿರಾಸೆ: ಭಾರತದ ಸಂದೇಶ್ ದತ್ತಾತ್ರೇಯ ಕುರಳೆ, ಮಾಧ್ವಿನ್ ಕಾಮತ್ ನಿರಾಸೆ ಅನುಭವಿಸಿದರು. ಸಂದೇಶ್ 5-7, 1-6 ರಲ್ಲಿ ಮಲೇಷ್ಯಾದ ಮಿತ್ಸುಕಿ ಲಿಯಾಂಗ್ ವಿರುದ್ಧ ಸೋತರೆ, ಮಾಧ್ವಿನ್ ಕಾಮತ್ 1-6, 0-1 ರಲ್ಲಿ ದಕ್ಷಿಣ ಕೊರಿಯಾದ ವೂಬಿನ್ ಶಿನ್ ಅವರಿಗೆ ಮಣಿದರು. ಮೊದಲ ಸೆಟ್ ಸೋತು ಎರಡನೇ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಕಾಮತ್ ಪಂದ್ಯದಿಂದ ಹಿಂದೆ ಸರಿದರು.

ಡಬಲ್ಸ್‌ನಲ್ಲಿ ಋತ್ವಿಕ್ ಚೌಧರಿ ಮತ್ತು ನಿಕಿ ಪೂಣಚ್ಚ ಜೋಡಿಯು ಎಸ್.ಡಿ.ಪ್ರಜ್ವಲ್ ದೇವ್ ಹಾಗೂ ಜಿ.ಸಾಯಿ ಕಾರ್ತಿಕ್ ರೆಡ್ಡಿ ಅವರನ್ನು 6-7, 7-6, 10-7ರಿಂದ ಸೋಲಿಸಿತು. ಪರೀಕ್ಷಿತ್ ಸೋಮಾನಿ ಹಾಗೂ ಮನೀಷ್ ಸುರೇಶ್ ಕುಮಾರ್ ಜೋಡಿ 6-2, 6-3ರಿಂದ ತುಷಾರ್ ಮದನ್- ಲೋಹಿತಾಕ್ಷ ಬದ್ರಿನಾಥ್ ವಿರುದ್ಧ ಗೆದ್ದಿತು.

ಫೈಸಲ್ ಖಮರ್ ಹಾಗೂ ಫರ್ದೀನ್ ಖಮರ್ ಜೋಡಿಯು ಚಂದ್ರಿಲ್ ಸೂದ್- ಲಕ್ಷಿತ್ ಸೂದ್ ಜೋಡಿಯನ್ನು 1-6, 6-4, 10-8ರಿಂದ ಮಣಿಸಿದರೆ, ಫ್ರಾನ್ಸ್‌ನ ಫ್ಲಾರೆಂಟ್ ಬಾಕ್ಸ್- ಭಾರತದ ನಿತಿನ್ ಕುಮಾರ್ ಸಿನ್ಹಾ ಅವರು 6-3, 6-2ರಲ್ಲಿ ಭಾರತದ ದಿಗ್ವಿಜಯ್ ಪ್ರತಾಪ್ ಸಿಂಗ್- ಜಗ್ಮೀತ್ ಸಿಂಗ್ ವಿರುದ್ಧ ಗೆದ್ದರು. ಸೂರಜ್ ಪ್ರಭೋದ್- ರಿಷಿ ರೆಡ್ಡಿ ವಿರುದ್ಧ ಗೆಲುವು ಪಡೆದ ಆಸ್ಟ್ರೇಲಿಯಾದ ಎಲಿಸ್ ಬೇಕ್- ಉಕ್ರೇನ್ ವ್ಲಾಡಿಸ್ಲಾವ್ ಒರ್ಲಾವ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಪುಟಿದೇಳುವ ವಿಶ್ವಾಸದಲ್ಲಿ ಪಂಜಾಬ್

ಐಪಿಎಲ್ ಟಿ20 ಕ್ರಿಕೆಟ್ ಟೂರ್ನಿ: ತಂಡಗಳಿಂದ ಅಂತಿಮ ಹಂತದ ಸಿದ್ಧತೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಆರಂಭಕ್ಕೆ ಇನ್ನೆರಡೇ ದಿನಗಳು ಬಾಕಿಯಿದ್ದು, ಎಲ್ಲ ತಂಡಗಳು ಅಂತಿಮ ಹಂತದ ಸಿದ್ಧತೆಯನ್ನು ಚುರುಕುಗೊಳಿಸಿವೆ.

ಕಳೆದ ಟೂರ್ನಿಗಳಲ್ಲಿ ನಿರಾಶೆ ಅನುಭವಿಸಿದ್ದ ಪಂಜಾಬ್ ಕಿಂಗ್ಸ್ ತಂಡ ಹೊಸ ಆಟಗಾರರನ್ನು ಸೇರಿಸಿಕೊಂಡು ಈ ಬಾರಿ ಆಡುತ್ತಿದ್ದು, ಪುಟಿದೆದ್ದು ನಿಲ್ಲುವ ವಿಶ್ವಾಸದಲ್ಲಿದೆ. ಹಿಂದಿನ ನಾಲ್ಕು ಆವೃತ್ತಿಗಳಲ್ಲಿ ತಂಡವು ಆರು ಹಾಗೂ ಅದಕ್ಕಿಂತ ಕೆಳಗಿನ ಸ್ಥಾನ ಪಡೆದಿತ್ತು. 2014 ರಲ್ಲಿ ಫೈನಲ್ ಪ್ರವೇಶಿಸಿದ್ದೇ ಈ ತಂಡದ ಅತ್ಯುತ್ತಮ ಸಾಧನೆ.

ಪಂಜಾಬ್ ತಂಡವನ್ನು ಶಿಖರ್ ಧವನ್ ಮುನ್ನಡೆಸುತ್ತಿದ್ದು, ಅರ್ಷದೀಪ್ ಸಿಂಗ್, ಕಗಿಸೊ ರಬಾಡ, ಸ್ಯಾಮ್ ಕರನ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ಅವರಂತಹ ಪ್ರಮುಖ ಆಟಗಾರರನ್ನು ಒಳಗೊಂಡಿದೆ.

ಪಂಜಾಬ್ ಫ್ರಾಂಚೈಸ್, ಟ್ರೆವರ್ ಬೇಲಿಸ್ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಿದೆ. ಬೇಲಿಸ್ ಅವರ ಮಾರ್ಗದರ್ಶನದಲ್ಲಿ ಆಡಿದ್ದ ಕೋಲ್ಕತ್ತ ನೈಟ್ ರೈಡರ್ಸ್ ಈ ಹಿಂದೆ ಎರಡು ಸಲ ಚಾಂಪಿಯನ್ ಆಗಿತ್ತು.

'ಡೆತ್ ಓವರ್‌ಗಳಲ್ಲಿ ಅಬ್ಬರದ ಬ್ಯಾಟಿಂಗ್ ಮತ್ತು ಇನಿಂಗ್ಸ್‌ನ ಮಧ್ಯದ ಓವರ್‌ಗಳಲ್ಲಿ ವಿಕೆಟ್ ಕಾಯ್ದುಕೊಳ್ಳುವ ವಿಚಾರದಲ್ಲಿ ತಂಡದಲ್ಲಿ ಸುಧಾರಣೆ ಕಾಣಬೇಕಿದೆ' ಎಂದು ಬೇಲಿಸ್ ಹೇಳಿದ್ದಾರೆ.

'ಕೊನೆಯ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುವಲ್ಲಿ ವಿಫಲವಾದ್ದರಿಂದ ತಂಡವು ಕಳೆದ ಸಲ ಹಿನ್ನಡೆ ಅನುಭವಿಸಿತ್ತು. ಈ ಬಾರಿ ಅಂತಹ ತಪ್ಪು ಪುನರಾವರ್ತನೆಯಾಗಬಾರದು ಎಂಬ ಕಾರಣ ಯುವ ಆಲ್‌ರೌಂಡರ್ ಸ್ಯಾಮ್ ಕರನ್ ಅವರಂತಹ ಆಟಗಾರರನ್ನು ತಂಡಕ್ಕೆ ಸೇರಿಸಿಕೊಂಡಿದ್ದೇವೆ' ಎಂದಿದ್ದಾರೆ.


ಪಂಜಾಬ್ ಕಿಂಗ್ಸ್ ತಂಡದ ನಾಯಕ ಶಿಖರ್ ಧವನ್ ಮೊಹಾಲಿಯಲ್ಲಿ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಎಸ್‌ಆರ್‌ಎಚ್‌ಗೆ ಮರ್ಕರಂ ಬಲ: ಸನ್‌ರೈಸರ್ಸ್ ಹೈದರಾಬಾದ್ ತಂಡದವರು ನಾಯಕ ಏಡನ್ ಮರ್ಕರಮ್ ಅವರ ಮೇಲೆ ಭರವಸೆ ಇಟ್ಟುಕೊಂಡು ಈ ಬಾರಿಯ ಟೂರ್ನಿಯಲ್ಲಿ ಆಡುತ್ತಿದೆ.

ಹೈದರಾಬಾದ್ ತಂಡ ಮೂರು ವರ್ಷಗಳಲ್ಲಿ ಮೂವರು ನಾಯಕರನ್ನು ಕಂಡಿದೆ. ಈ ಬಾರಿಯ ಟೂರ್ನಿಯು ದಕ್ಷಿಣ ಆಫ್ರಿಕಾದ ಮರ್ಕರಂ ಅವರಿಗೆ ತಮ್ಮ ನಾಯಕತ್ವದ ಕೌಶಲವನ್ನು ತೋರಿಸುವ ಅವಕಾಶ ಕಲ್ಪಿಸಿದೆ. ಚೊಚ್ಚಲ ದಕ್ಷಿಣ ಆಫ್ರಿಕಾ ಟಿ20 ಟೂರ್ನಿಯಲ್ಲಿ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡವನ್ನು ಅವರು ಪ್ರಶಸ್ತಿಯತ್ತ ಮುನ್ನಡೆಸಿದ್ದರು.

2016ರಲ್ಲಿ ಚಾಂಪಿಯನ್ ಆಗಿದ್ದ ಎಸ್‌ಆರ್‌ಎಚ್ ತಂಡ ಬಳಿಕದ ಟೂರ್ನಿಗಳಲ್ಲಿ ಉತ್ತಮವಾಗಿ ಆಡಿಲ್ಲ. ಕಳೆದ ಎರಡು ಆವೃತ್ತಿಗಳಲ್ಲಿ ಡೇವಿಡ್ ವಾರ್ನರ್ ಮತ್ತು ಕೇನ್ ವಿಲಿಯಮ್ಸನ್ ಅವರು ತಂಡವನ್ನು ಮುನ್ನಡೆಸಿದ್ದರು. ಆದರೆ ತಂಡ ಕಳಪೆ ಪ್ರದರ್ಶನ ನೀಡಿದ್ದರಿಂದ ಇಬ್ಬರೂ ನಾಯಕತ್ವ ಕಳೆದುಕೊಂಡಿದ್ದರು.

ಅಗ್ರ ಕ್ರಮಾಂಕವನ್ನು ಬಲಪಡಿಸಿಕೊಳ್ಳುವ ಉದ್ದೇಶದಿಂದ ಹೈದರಾಬಾದ್ ತಂಡವು ಮಯಂಕ್ ಅಗರವಾಲ್ ಮತ್ತು ಹ್ಯಾರಿ ಬ್ರೂಕ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಸ್ಟೋಕ್ಸ್ 'ಸ್ಪೆಷಲಿಸ್ಟ್ ಬ್ಯಾಟರ್'

ಮುಂಬೈ: ಇಂಗ್ಲೆಂಡ್‌ನ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರು ಈ ಬಾರಿಯ ಐಪಿಎಲ್‌ನ ಆರಂಭದ ಕೆಲವು ಪಂದ್ಯಗಳಲ್ಲಿ ಬ್ಯಾಟರ್ ಆಗಿ ಮಾತ್ರ ಆಡಲಿದ್ದಾರೆ. ಬೌಲರ್‌ನ ಜವಾಬ್ದಾರಿಯನ್ನು ನಿರ್ವಹಿಸುವುದಿಲ್ಲ. ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಮೈಕ್ ಹಸ್ಸಿ ಅವರು ಈ ವಿಷಯ ಖಚಿತಪಡಿಸಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಹರಾಜಿನಲ್ಲಿ ₹ 16.25 ಕೋಟಿ ನೀಡಿ ಸ್ಟೋಕ್ಸ್ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ತನ್ನದಾಗಿಸಿಕೊಂಡಿತ್ತು. ಮಂಡಿಯ ಗಾಯದಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳುವವರೆಗೆ ಅವರು ಬೌಲಿಂಗ್ ಮಾಡದಿರಲು ನಿರ್ಧರಿಸಿದ್ದಾರೆ.

'ಸ್ಟೋಕ್ಸ್ ಅವರು ಟೂರ್ನಿಯ ಆರಂಭದ ಕೆಲವು ಪಂದ್ಯಗಳಲ್ಲಿ ಬ್ಯಾಟರ್ ಆಗಿ ಕಣಕ್ಕಿಳಿಯಲಿದ್ದಾರೆ. ಬೌಲಿಂಗ್ ಮಾಡಬೇಕಾದರೆ ಕೆಲವು ದಿನಗಳು ಕಾಯಬೇಕಾಗಬಹುದು' ಎಂದು ಹಸ್ಸಿ ಹೇಳಿದ್ದಾರೆ.

ಬ್ಯಾಡ್ಮಿಂಟನ್: ಸ್ಪೇನ್ ಮಾಸ್ಟರ್ಸ್ ಟೂರ್ನಿ

ಪ್ರಧಾನ ಹಂತಕ್ಕೆ ಪ್ರಿಯಾಂಶು

ಮ್ಯಾಡ್ರಿಡ್ (ಪಿಟಿಐ): ಭಾರತದ ಪ್ರಿಯಾಂಶು ರಾಜಾವತ್ ಅವರು ಇಲ್ಲಿ ನಡೆಯುತ್ತಿರುವ ಸ್ಪೇನ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪ್ರಧಾನ ಹಂತ ಪ್ರವೇಶಿಸಿದರು.

ಮಂಗಳವಾರ ನಡೆದ ಅರ್ಹತಾ ಸುತ್ತಿನ ಎರಡೂ ಪಂದ್ಯಗಳನ್ನು ಅವರು ಗೆದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 60ನೇ ಸ್ಥಾನದಲ್ಲಿರುವ ಅವರು ಮೊದಲ ಹಣಾಹಣಿಯಲ್ಲಿ 21-16, 21-12 ರಲ್ಲಿ ಎಲ್‌ಸಾಲ್ವಡರ್‌ನ ಯುರೆಲ್ ಫ್ರಾನ್ಸಿಸ್ಕೊ ಅವರನ್ನು ಮಣಿಸಿದರು.

ಎರಡನೇ ಪಂದ್ಯದಲ್ಲಿ 21-18, 18-21, 21-15 ರಲ್ಲಿ ಫ್ರಾನ್ಸ್‌ನ ಅಲೆಕ್ಸ್ ಲೇನಿಯೆರ್ ವಿರುದ್ಧ ಗೆದ್ದರು. ಮೊದಲ ಗೇಮ್ ಗೆದ್ದ ಪ್ರಿಯಾಂಶು, ಎರಡನೇ ಗೇಮ್ ಸೋತರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಲಯ ಕಂಡುಕೊಂಡು ಪಂದ್ಯ ತಮ್ಮದಾಗಿಸಿಕೊಂಡರು. ಈ ಜಿದ್ದಾಜಿದ್ದಿನ ಹೋರಾಟ 1 ಗಂಟೆ 3 ನಿಮಿಷ ನಡೆಯಿತು.

ಎಂ.ಆರ್.ಅರ್ಜುನ್ ಮತ್ತು ಧ್ರುವ್ ಕಪಿಲಾ ಜೋಡಿ ಪುರುಷರ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಅವರು ಮೊದಲ ಸುತ್ತಿನಲ್ಲಿ 16-21, 21-17, 21-12 ರಲ್ಲಿ ಕ್ರಿಸ್ಟೋಫರ್ ಗ್ರಿಮ್ಲೆ ಮತ್ತು ಮ್ಯಾಥ್ಯೂ ಗ್ರಿಮ್ಲೆ ಸಹೋದರರನ್ನು ಮಣಿಸಿದರು.


ಪ್ರಿಯಾಂಶು ರಾಜಾವತ್

ಮೆರಾಬಾ ಲುವಾಂಗ್ ಮೈಸ್‌ನಮ್ 14-21, 22-20, 19-21 ರಲ್ಲಿ ಅಲೆಕ್ಸ್ ಲೇನಿಯೆರ್ ಎದುರು ಸೋತು ಹೊರಬಿದ್ದರು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಸ್ಪರ್ಧಿಗಳು ಪ್ರಧಾನ ಸುತ್ತು ಪ್ರವೇಶಿಸಲು ವಿಫಲರಾದರು. ರೋಹನ್ ಕಪೂರ್- ಎನ್.ಸಿಕ್ಕಿ ರೆಡ್ಡಿ 12-21, 22-20, 19-21 ರಲ್ಲಿ ಇಂಡೊನೇಷ್ಯಾದ ಅಮ್ರಿ ಸಾಹ್ನವಿ- ವಿನ್ನಿ ಒಕ್ಟೇವಿನಾ ಎದುರು ಪರಾಭವಗೊಂಡರು.

ಬಿ.ಸುಮೀತ್ ರೆಡ್ಡಿ- ಅಶ್ವಿನಿ ಪೊನ್ನಪ್ಪ ಜೋಡಿ 17-21, 21-19, 13-21 ರಲ್ಲಿ ಚೀನಾದ ಹೆ ಜಿ ತಾಂಗ್- ದು ಯುಯಿ ಎದುರು ಸೋತಿತು.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಸಿಮ್ರಾನ್ ಸಿಂಘಿ- ರಿತಿಕಾ ಠಾಕರ್ 11-21, 19-21 ರಲ್ಲಿ ಡೆನ್ಮಾರ್ಕ್‌ನ ನತಾಶಾ ಅಂಥೋನಿಸೆನ್- ಕ್ಲಾರಾ ಗ್ರಾವರ್ಸೆನ್ ಎದುರು ಪರಾಭವಗೊಂಡರು.

ಕೆ.ಶ್ರೀಕಾಂತ್, ಎಚ್.ಎಚ್. ಪ್ರಣಯ್, ಬಿ.ಸಾಯಿ ಪ್ರಣೀತ್ ಮತ್ತು ಪಿ.ವಿ. ಸಿಂಧು ಅವರು ಬುಧವಾರ ಮೊದಲ ಸುತ್ತಿನ ಪಂದ್ಯ ಆಡಲಿದ್ದಾರೆ.

ವಿಶ್ವ ಯೂತ್ ವೇಟ್‌ಲಿಫ್ಟಿಂಗ್: ಭರಾಲಿಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಭರಾಲಿ ವೇದವ್ರತ್ ಅವರು ಅಲ್ಬೇನಿಯದ ಡರೆಸ್‌ನಲ್ಲಿ ನಡೆಯುತ್ತಿರುವ ಐಡಬ್ಲ್ಯುಎಫ್ ವಿಶ್ವ ಯೂತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡರು.

ಸೋಮವಾರ ರಾತ್ರಿ ನಡೆದ ಪುರುಷರ 67 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಅವರು ಒಟ್ಟು 267 ಕೆ.ಜಿ. ಭಾರ ಎತ್ತಿದರು. 15 ವರ್ಷದ ವೇಟ್‌ಲಿಫ್ಟರ್ ಸ್ನ್ಯಾಚ್‌ನಲ್ಲಿ 119 ಕೆ.ಜಿ ಹಾಗೂ ಕ್ಲೀನ್ ಮತ್ತು ಜರ್ಕ್‌ನಲ್ಲಿ 148 ಕೆ.ಜಿ ಸಾಧನೆ ಮಾಡಿದರು.

ಅರ್ಮೇನಿಯದ ಸೆರ್ಯೋಜಾ ಬರ್ಸೆಗ್ಯನ್ (275 ಕೆ.ಜಿ) ಮತ್ತು ಸೌದಿ ಅರೇಬಿಯಾದ ಮೊಹಮ್ಮದ್ ಅಲ್ ಮರ್ಜೂಖ್ (270 ಕೆ.ಜಿ.) ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು.

ಮಹಿಳೆಯರ 49 ಕೆ.ಜಿ. ವಿಭಾಗದಲ್ಲಿ ಕೋಯೆಲ್ ಅವರು ಒಟ್ಟು 144 ಕೆ.ಜಿ. ಭಾರ ಎತ್ತುವ ಮೂಲಕ 9ನೇ ಸ್ಥಾನ ಪಡೆದರು. 55 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ ಮೀನಾ (153 ಕೆ.ಜಿ.) ಅವರು 13ನೇ ಸ್ಥಾನ ಗಳಿಸಿದರು.

ಐಒಸಿಯಿಂದ ರಷ್ಯಾ, ಬೆಲಾರೂಸ್ ಕ್ರೀಡಾಪಟುಗಳಿಗೆ ಬೆಂಬಲ

ಲಾಸನ್ (ಎಎಫ್‌ಪಿ): ರಷ್ಯಾ ಮತ್ತು ಬೆಲಾರೂಸ್‌ನ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ಐಒಸಿ ಬೆಂಬಲ ಸೂಚಿಸಿದೆ.

ಆದರೆ ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಈ ಎರಡು ದೇಶಗಳ ಕ್ರೀಡಾಪಟುಗಳು ಭಾಗವಹಿಸುವುದರ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ಅವರು ಮಂಗಳವಾರ ನಡೆದ ಸಮಿತಿಯ ಕಾರ್ಯಕಾರಿ ಮಂಡಳಿ ಸಭೆಯ ಬಳಿಕ ಈ ವಿಷಯ ಪ್ರಕಟಿಸಿದರು.


ಥಾಮಸ್ ಬಾಕ್

'ರಷ್ಯಾ ಮತ್ತು ಬೆಲಾರೂಸ್ ಪಾಸ್‌ಪೋರ್ಟ್ ಹೊಂದಿರುವವರು ತಮ್ಮ ದೇಶದ ಧ್ವಜದಡಿ ಸ್ಪರ್ಧಿಸಬಾರದು. ತಟಸ್ಥ ಕ್ರೀಡಾಪಟುಗಳಾಗಿಯೇ ಪಾಲ್ಗೊಳ್ಳಬೇಕು' ಎಂದು ವಿವಿಧ ಅಂತರರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು ಮತ್ತು ಕ್ರೀಡಾಕೂಟಗಳ ಸಂಘಟಕರಿಗೆ ಮಾಡಿದ ಶಿಫಾರಸಿನಲ್ಲಿ ಅವರು ತಿಳಿಸಿದ್ದಾರೆ.

2022ರ ಫೆಬ್ರುವರಿಯಲ್ಲಿ ಉಕ್ರೇನ್ ಮೇಲಿನ ಯುದ್ಧ ಆರಂಭವಾದ ಬೆನ್ನಲ್ಲೇ ರಷ್ಯಾ ಮತ್ತು ಬೆಲಾರೂಸ್‌ನ ಕ್ರೀಡಾಪಟುಗಳ ಸ್ಪರ್ಧೆಗೆ ವಿವಿಧ ಕ್ರೀಡಾ ಫೆಡರೇಷನ್‌ಗಳು ನಿಷೇಧ ಹೇರಿದ್ದವು.

ಯುದ್ಧವನ್ನು ಬೆಂಬಲಿಸುವ ಮತ್ತು ರಷ್ಯಾ ಅಥವಾ ಬೆಲಾರೂಸ್ ಸೇನೆ ಹಾಗೂ ಭದ್ರತಾ ಸಂಸ್ಥೆಗಳ ಜತೆ ಒಪ್ಪಂದದಲ್ಲಿರುವ ಕ್ರೀಡಾಪಟುಗಳ ಮೇಲಿನ ನಿಷೇಧ ಮುಂದುವರಿಯಲಿದೆ ಎಂಬ ಅಂಶವೂ ಶಿಫಾರಸಿನಲ್ಲಿದೆ.

ಅದೇ ರೀತಿ, ರಷ್ಯಾ ಮತ್ತು ಬೆಲಾರೂಸ್ ತನ್ನ ನೆಲದಲ್ಲಿ ಯಾವುದೇ ಅಂತರರಾಷ್ಟ್ರೀಯ ಕ್ರೀಡಾಕೂಟ ಆಯೋಜಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದೆ.

ವಿರೋಧ: ಐಒಸಿಯ ಶಿಫಾರಸನ್ನು ಕೆಲವು ದೇಶಗಳು ವಿರೋಧಿಸಿವೆ. 'ಇದು ಉಕ್ರೇನ್‌ನ ಅಥ್ಲೀಟ್‌ಗಳಿಗೆ ಮಾಡಿರುವ ಅವಮಾನ' ಎಂದು ಜರ್ಮನಿಯ ಕ್ರೀಡಾ ಸಚಿವರಾದ ನ್ಯಾನ್ಸಿ ಫೇಸರ್ ಟೀಕಿಸಿದ್ದಾರೆ.

ಮಿಯಾಮಿ ಓಪನ್: ಸಿಟ್ಸಿಪಾಸ್‌ಗೆ ಜಯ


ಮಿಯಾಮಿ ಗಾರ್ಡನ್ಸ್, ಅಮೆರಿಕ (ಎಪಿ): ಗ್ರೀಕ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರು ಇಲ್ಲಿ ನಡೆಯುತ್ತಿರುವ ಮಿಯಾಮಿ ಓಪನ್ ಟೆನಿಸ್ ಟೂರ್ನಿಯಲ್ಲಿ ಜಯ ಗಳಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಸಿಟ್ಸಿಪಾಸ್ 6-3, 4-6, 6-4ರಿಂದ ಚಿಲಿಯ ಕ್ರಿಸ್ಟಿಯನ್ ಗರಿನ್ ಅವರನ್ನು ಮಣಿಸಿದರು. ಮೂರನೇ ಶ್ರೇಯಾಂಕದ ಸಿಟ್ಸಿಪಾಸ್ ಅವರಿಗೆ ಮೊದಲ ಸುತ್ತಿನಲ್ಲಿ ಬೈ ಲಭಿಸಿತ್ತು. ಎರಡನೇ ಸುತ್ತಿನಲ್ಲಿ ವಾಕ್‌ಓವರ್ ಪಡೆದಿದ್ದರು.

ಅರ್ಜೆಂಟೀನಾದ, 25ನೇ ಶ್ರೇಯಾಂಕದ ಆಟಗಾರ ಫ್ರಾನ್ಸಿಸ್ಕೊ ಸೆರುಂಡೊಲೊ 6-2, 7-5ರಿಂದ ಐದನೇ ಶ್ರೇಯಾಂಕದ ಕೆನಡಾ ಆಟಗಾರ ಫೆಲಿಕ್ಸ್ ಅಗರ್ ಅಲಿಯಾಸ್ಸಿಮ್ ಅವರನ್ನು ಮಣಿಸಿ ಮುನ್ನಡೆದರು.

ಆ್ಯಂಡ್ರಿಸ್ಕೂಗೆ ಗಾಯ: ಮಹಿಳೆಯರ ವಿಭಾಗದ ಪಂದ್ಯದಲ್ಲಿ, ಅಮೆರಿಕ ಓಪನ್ ಮಾಜಿ ಚಾಂಪಿಯನ್ ಬಿಯಾಂಕಾ ಆ್ಯಂಡ್ರಿಸ್ಕೂ ಗಾಯಗೊಂಡು ನಿವೃತ್ತರಾದರು. ನಾಲ್ಕನೇ ಸುತ್ತಿನ ಪಂದ್ಯದಲ್ಲಿ ರಷ್ಯಾದ ಎಕಟೆರಿನಾ ಅಲೆಕ್ಸಾಂಡ್ರೊವಾ ಎದುರು ಸ್ಪರ್ಧಿಸಿದ್ದ ಬಿಯಾಂಕಾ ಒಂದು ಸೆಟ್ ಹಿನ್ನಡೆಯಲ್ಲಿದ್ದರು.

ಫುಟ್‌ಬಾಲ್: ಭಾರತ ಪುರುಷರ ತಂಡಕ್ಕೆ ಗೆಲುವು


ಸಂದೇಶ್

ಇಂಫಾಲ್ (ಪಿಟಿಐ): ಉತ್ಸಾಹಿ ಆಟವಾಡಿದ ಭಾರತ ಪುರುಷರ ಫುಟ್‌ಬಾಲ್ ತಂಡದವರು ಮೂರು ರಾಷ್ಟ್ರಗಳ ಟೂರ್ನಿಯಲ್ಲಿ ಟ್ರೋಫಿಯನ್ನು ಜಯಿಸಿದರು.

ಮಂಗಳವಾರ ಇಲ್ಲಿ ನಡೆದ ಅಂತಿಮ ಪಂದ್ಯದಲ್ಲಿ ಭಾರತ 2–0ಯಿಂದ ಕಿರ್ಗಿಸ್ತಾನ ತಂಡವನ್ನು ಸೋಲಿಸಿತು.

ಭಾರತ ತಂಡಕ್ಕಾಗಿ ಸೆಂಟರ್ ಬ್ಯಾಕ್ ಆಟಗಾರ ಸಂದೇಶ್ ಜಿಂಗಾನ್ (34ನೇ ನಿಮಿಷ) ಮೊದಲ ಗೋಲು ಹೊಡೆದರು. 84ನೇ ನಿಮಿಷದಲ್ಲಿ ಸುನಿಲ್ ಚೆಟ್ರಿ ಚೆಂಡನ್ನು ಗುರಿ ಸೇರಿಸಿದರು.

ಮಾರ್ಚ್ 22ರಂದು ನಡೆದ ಪಂದ್ಯದಲ್ಲಿ ಭಾರತ 1–0ಯಿಂದ ಮ್ಯಾನ್ಮಾರ್ ವಿರುದ್ಧ ಗೆದ್ದಿತ್ತು.

ಭಾರತ ಮಹಿಳೆಯರಿಗೆ ಸೋಲು (ತಾಷ್ಕೆಂಟ್ ವರದಿ): ಭಾರತ ಮಹಿಳಾ ತಂಡದವರು ಇಲ್ಲಿ ನಡೆದ ಸ್ನೇಹಪರ ಪಂದ್ಯದಲ್ಲಿ 2–3ರಿಂದ ಆತಿಥೇಯ ಉಜ್ಬೆಕಿಸ್ತಾನ ಎದುರು ನಿರಾಸೆ ಅನುಭವಿಸಿದರು.

ಎಚ್–1ಬಿ ವೀಸಾ: 65000 ಜನರ ನೋಂದಣಿ

ವಾಷಿಂಗ್ಟನ್ (ಪಿಟಿಐ): '2024ನೇ ಹಣಕಾಸು ವರ್ಷದಲ್ಲಿ ಎಚ್–1ಬಿ ವೀಸಾ ಕೋರಿ ನಿಗದಿತ ಗುರಿಯ, ಅಂದರೆ 65 ಸಾವಿರ ಮಂದಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ' ಎಂದು ಅಮೆರಿಕದ ವಲಸಿಗರ ಸೇವಾ ವಿಭಾಗವು ತಿಳಿಸಿದೆ.

ಎಚ್–1ಬಿ ಎಂಬುದು ವಲಸಿಗೇತರರಿಗೆ ನೀಡುವ ವೀಸಾ ಆಗಿದೆ. ಅಮೆರಿಕದ ವಿವಿಧ ಕಂಪನಿಗಳು ವಿಶೇಷ ತಾಂತ್ರಿಕ ಪರಿಣತಿಯ ವಿದೇಶಿಯರನ್ನು ನೇಮಕ ಮಾಡಿಕೊಳ್ಳಲಿದ್ದು, ನೇಮಕಗೊಳ್ಳುವ ವ್ಯಕ್ತಿಯು ಈ ವೀಸಾ ಹೊಂದಿರುವುದು ಕಡ್ಡಾಯವಾಗಿದೆ.

ಅಮೆರಿಕ ಮೂಲದ ತಂತ್ರಜ್ಞಾನ ಆಧರಿತ ಕಂಪನಿಗಳು ಪ್ರತಿ ವರ್ಷ ಸಾವಿರಾರು ಸಂಖ್ಯೆಯಲ್ಲಿ ವಿದೇಶಿಯರನ್ನು ಮುಖ್ಯವಾಗಿ ಭಾರತ, ಚೀನಾ ಮೂಲದವರನ್ನು ನೇಮಿಸಿಕೊಳ್ಳಲಿವೆ. ಅಮೆರಿಕದ ಶಾಸನಸಭೆ 2024ನೇ ಸಾಲಿಗೆ 65000 ಎಚ್–1ಬಿ ವೀಸಾ ನೀಡುವ ಗುರಿ ನಿಗದಿಸಿತ್ತು.


ಸಂಸತ್ತಿನಲ್ಲಿ ಚರ್ಚೆಯೇ ಇಲ್ಲದೇ ಪಿಂಚಣಿ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಸರ್ಕಾರದ ಕ್ರಮವನ್ನು ವಿರೋಧಿಸಿ ಫ್ರಾನ್ಸ್‌ನಲ್ಲಿ ಪ್ರತಿಭಟನೆ ತೀವ್ರಗೊಂಡಿದೆ. ಮಂಗಳವಾರ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು.

–ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಮೆಕ್ಸಿಕೊ– ಅಗ್ನಿ ಅವಘಡ: 39 ವಲಸಿಗರ ಸಾವು

ಮೆಕ್ಸಿಕೊ (ಎ.ಪಿ): ಅಮೆರಿಕದ ಗಡಿಗೆ ಹೊಂದಿಕೊಂಡಿರುವ, ಇಲ್ಲಿನ ಸಿಯುದಾದ್ ಜುರೆಜ್‌ನಲ್ಲಿ ವಲಸಿಗರನ್ನು ಇರಿಸಲಾಗಿದ್ದ ಕೇಂದ್ರವೊಂದರಲ್ಲಿ ಸೋಮವಾರ ರಾತ್ರಿ ಅಗ್ನಿ ಅವಘಡ ಸಂಭವಿಸಿದ್ದು, ಕನಿಷ್ಠ 39 ಜನರು ಮೃತಪಟ್ಟಿದ್ದಾರೆ.

ಈಚಿನ ವರ್ಷಗಳಲ್ಲಿಯೇ ಸಂಭವಿಸಿದ ಭೀಕರ ಅಗ್ನಿದುರಂತವಿದು. 39 ಜನ ಸ್ಥಳದಲ್ಲೇ ಸತ್ತಿದ್ದು, 29 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಕೇಂದ್ರ, ದಕ್ಷಿಣ ಅಮೆರಿಕ ಕಡೆಯಿಂದ ವಲಸೆ ಬಂದು ಸಿಕ್ಕಿಬಿದ್ದಿದ್ದ 68 ಜನರನ್ನು ಇಲ್ಲಿ ಇರಿಸಲಾಗಿತ್ತು ಎಂದು ವರದಿ ತಿಳಿಸಿದೆ.

ತಮ್ಮನ್ನು ಬಿಡುಗಡೆ ಮಾಡಬಹುದು ಎಂದು ಭಾವಿಸಿ ಕೇಂದ್ರದಲ್ಲಿದ್ದ ವಲಸಿಗರೇ ಹಾಸಿಗೆಗೆ ಬೆಂಕಿ ಹೊತ್ತಿಸಿದ್ದರು ಎಂದು ಮೆಕ್ಸಿಕೊ ಅಧ್ಯಕ್ಷರು ಪ್ರತಿಕ್ರಿಯಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಬೀಜಿಂಗ್: ಬೆಂಕಿ ಅವಘಡ, 11 ಸಾವು

ಬೀಜಿಂಗ್ (ಎಪಿ): ಚೀನಾದ ಹೇಬೆ ಪ್ರಾಂತ್ಯದಲ್ಲಿನ ಗೋದಾಮಿನಲ್ಲಿ ಮಂಗಳವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ 11 ಮಂದಿ ಮೃತಪಟ್ಟಿದ್ದಾರೆ ಎಂದು ಚೀನಾದ ಸ್ಥಳೀಯ ಆಡಳಿತವು ತಿಳಿಸಿದೆ.

ಸೋಮವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿದೆ. 11 ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅವಘಡಕ್ಕೆ ಕಾರಣ ತಿಳಿಯಲು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಾತಿ ಆಧಾರಿತ ತಾರತಮ್ಯ ನಿಷೇಧ ಕಾಯ್ದೆ ಜಾರಿ

ವಾಷಿಂಗ್ಟನ್ (ಪಿಟಿಐ): ಜಾತಿ ಆಧಾರಿತ ತಾರತಮ್ಯವನ್ನು ನಿಷೇಧಿಸುವ ಕಾಯ್ದೆಯನ್ನು ಅಮೆರಿಕದ ಸಿಯಾಟಲ್ ನಗರದಲ್ಲಿ ಜಾರಿಗೆ ತರಲಾಗಿದೆ. ಇಂತಹ ಕಾಯ್ದೆಯನ್ನು ಜಾರಿಗೊಳಿಸಿದ ಭಾರತದ ಹೊರಗಿನ ಮೊದಲ ನಗರ ಇದಾಗಿದೆ.

ಭಾರತ ಮೂಲದ ಅಮೆರಿಕ ರಾಜಕಾರಣಿ, ಅರ್ಥಶಾಸ್ತ್ರಜ್ಞೆ ಕ್ಷಮಾ ಸಾವಂತ್ ಅವರು ಕಳೆದ ತಿಂಗಳು ಈ ಸಂಬಂಧ ನಿರ್ಣಯ ಮಂಡಿಸಿದ್ದರು. ಇದನ್ನು ಸಿಯಾಟಲ್ ನಗರದ ಸ್ಥಳೀಯ ಆಡಳಿತ ಸಂಸ್ಥೆಯು ಸರ್ವಾನುಮತದಿಂದ ಅಂಗೀಕರಿಸಿತು.

ರಾಮೋಜಿ ರಾವ್, ಶೈಲಜಾಗೆ ಆಂಧ್ರ ಸಿಐಡಿ ಸಮನ್ಸ್

ಅಮರಾವತಿ (ಪಿಟಿಐ): ಮಾರ್ಗದರ್ಶಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ರಾಮೋಜಿ ರಾವ್ ಮತ್ತು ಅವರ ಸೊಸೆ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಚೆರುಕುರಿ ಶೈಲಜಾ ಹಾಗೂ ಉನ್ನತ ಅಧಿಕಾರಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ಆಂಧ್ರ ಪ್ರದೇಶದ ಸಿಐಡಿ, ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖೆಗೆ ಸಿಐಡಿ ಅಧಿಕಾರಿಗಳು ನಾಲ್ಕು ದಿನಗಳ ಆಯ್ಕೆಯನ್ನು ನೀಡಿದ್ದು, ಬುಧವಾರ, ಶುಕ್ರವಾರ, ಸೋಮವಾರ ಅಥವಾ ಮಂಗಳವಾರದಂದು ಹಾಜರಾಗುವಂತೆ ಸೂಚಿಸಿದ್ದಾರೆ.

ಐಪಿಸಿ ಸೆಕ್ಷನ್ 420, 120 - ಬಿ, 477 (ಎ), ಸೆಕ್ಷನ್ 34 ಮತ್ತು ಆಂಧ್ರ ಪ್ರದೇಶ ಠೇವಣಿದಾರರ ಹಣಕಾಸು ಹಿತರಕ್ಷಣಾ ಕಾಯಿದೆ, 1999ರ ಸೆಕ್ಷನ್ 5ರ ಅಡಿಯಲ್ಲಿ ದಾಖಲಿಸಲಾದ ಪ್ರಕರಣಗಳನ್ನು ಉಲ್ಲೇಖಿಸಿ ತನಿಖೆಗೆ ಸಹಕರಿಸುವಂತೆ ರಾಮೋಜಿ ರಾವ್ ಮತ್ತು ಶೈಲಜಾ ಅವರನ್ನು ಅಧಿಕಾರಿ ಕೋರಿದ್ದಾರೆ.

ಇತ್ತೀಚೆಗೆ, ಸಿಐಡಿಯು ಕಂಪನಿಯ ಕೆಲವು ಉದ್ಯೋಗಿಗಳನ್ನು ಬಂಧಿಸಿತ್ತು. ವೈಯಕ್ತಿಕ ಲಾಭಕ್ಕಾಗಿ ಠೇವಣಿದಾರರ ಹಣವನ್ನು ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆಗಳಿಗೆ ತಿರುಗಿಸುವುದು ಸೇರಿ ಹಲವು ಅಕ್ರಮಗಳ ಆರೋಪದಲ್ಲಿ ಎಫ್‌ಐಆರ್‌ಗಳನ್ನು ದಾಖಲಿಸಿತ್ತು.

ಕೆನಡಾ: ಖಾಲಿಸ್ತಾನ್ ಬೆಂಬಲಿಗರಿಂದ ಮತ್ತೊಂದು ಗಾಂಧಿ ಪ್ರತಿಮೆ ಧ್ವಂಸ

ಟೊರಂಟೊ (ಪಿಟಿಐ): 'ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದ ಸೈಮನ್ ಫ್ರೇಜರ್ ವಿಶ್ವವಿದ್ಯಾಲಯ ಆವರಣದಲ್ಲಿದ್ದ ಮಹಾತ್ಮಗಾಂಧಿ ಅವರ ಪ್ರತಿಮೆಯನ್ನು ಖಾಲಿಸ್ತಾನ ಪರ ಬೆಂಬಲಿಗರು ಧ್ವಂಸಗೊಳಿಸಿದ್ದಾರೆ' ಎಂದು ಭಾರತದ ಕಾನ್ಸುಲೇಟ್ ಜನರಲ್ ಮಂಗಳವಾರ ತಿಳಿಸಿದೆ.

ಕೆನಡಾದಲ್ಲಿ ಇದೇ ತಿಂಗಳಲ್ಲಿ ಗಾಂಧಿ ಪ್ರತಿಮೆಯನ್ನು ಧ್ವಂಸಗೊಳಿಸಿದ ಎರಡನೇ ಪ್ರಕರಣ ಇದಾಗಿದೆ. ವಿಶ್ವವಿದ್ಯಾಲಯದ ಪೀಸ್ ಸ್ಕ್ವೈರ್‌ನಲ್ಲಿ ಪ್ರತಿಮೆ ಪ್ರತಿಷ್ಠಾಪಿಸಲಾಗಿತ್ತು. ಈ ಬಗ್ಗೆ ತನಿಖೆ ನಡೆಸಬೇಕು ಎಂದು ಕಾನ್ಸುಲೇಟ್ ಕಚೇರಿ ಆಗ್ರಹಪಡಿಸಿದ್ದು, ಟ್ವೀಟ್ ಮಾಡಿದೆ.

ಗಾಂಧೀಜಿ ಪ್ರತಿಮೆಯನ್ನು ಧ್ವಂಸಗೊಳಿಸಿದ ಹೇಯ ಕೃತ್ಯವನ್ನು ಬಲವಾಗಿ ಖಂಡಿಸುತ್ತೇವೆ. ಈ ಬಗ್ಗೆ ತುರ್ತು ತನಿಖೆ ನಡೆಸಬೇಕು ಹಾಗೂ ದುಷ್ಕರ್ಮಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಅಧಿಕಾರಿಗಳಿಗೆ ಒತ್ತಾಯಿಸಲಾಗಿದೆ' ಎಂದು ತಿಳಿಸಿದೆ.



ಗಾಲ್ಫ್: ಎರಡನೇ ಸ್ಥಾನದಲ್ಲಿ ದಿವ್ಯಾಂಶು

ಬೆಂಗಳೂರು: ಭಾರತದ ದಿವ್ಯಾಂಶು ಬಜಾಜ್ ಅವರು ಇಲ್ಲಿ ಆರಂಭವಾದ ಯೂರೋಪಿಯನ್ ಚಾಲೆಂಜ್ ಗಾಲ್ಫ್ ಟೂರ್ನಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಮಂಗಳವಾರ ಮೊದಲ ಸುತ್ತಿನ ಸ್ಪರ್ಧೆಯನ್ನು ಅವರು 65 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದರು. ಜರ್ಮನಿಯ ಮೈಕಲ್ ಹಿಮೆರ್ (64) ಅಗ್ರಸ್ಥಾನದಲ್ಲಿದ್ದಾರೆ.

ಕಾರ್ತಿಕ್ ಶರ್ಮಾ, ಮಾರಿಮುತ್ತು ಜಂಟಿ ಐದನೇ ಸ್ಥಾನದಲ್ಲಿದ್ದಾರೆ.

ಮಹಿಳೆಯರ ರಾಷ್ಟ್ರೀಯ ರ್‍ಯಾಂಕಿಂಗ್ ವೇಟ್‌ಲಿಫ್ಟಿಂಗ್

ನಿಷೆಲ್‌ಗೆ ಬೆಳ್ಳಿ, ಉಷಾಗೆ ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ನಿಷೆಲ್ ಡೆಲ್ಫಿನಾ ಡಿಸೋಜಾ ಮತ್ತು ಉಷಾ ಎಸ್.ಆರ್ ಅವರು ಖೇಲೊ ಇಂಡಿಯಾ ಮಹಿಳೆಯರ ರಾಷ್ಟ್ರೀಯ ರ್‍ಯಾಂಕಿಂಗ್ ವೇಟ್‌ಲಿಫ್ಟಿಂಗ್ ಟೂರ್ನಿಯಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ 76 ಕೆಜಿ ಸ್ಪರ್ಧೆಯ ಜೂನಿಯರ್ ವಿಭಾಗದಲ್ಲಿ ನಿಷೆಲ್ ಒಟ್ಟು 158 ಕೆಜಿ (ಸ್ನ್ಯಾಚ್ 72 + ಕ್ಲೀನ್ ಆ್ಯಂಡ್ ಜರ್ಕ್ 86) ಭಾರ ಎತ್ತಿದರು. ಈ ವಿಭಾಗದಲ್ಲಿ ತೆಲಂಗಾಣದ ವಿ.ಸಾಹಿತಿ (ಒಟ್ಟು 174 ಕೆಜಿ) ಚಿನ್ನ ಜಯಿಸಿದರೆ, ಉತ್ತರ ಪ್ರದೇಶದ ಜ್ಯೋತಿ ಯಾದವ್ (156 ಕೆಜಿ) ಕಂಚು ಗೆದ್ದರು.

87 ಕೆಜಿ ಸೀನಿಯರ್ ವಿಭಾಗದಲ್ಲಿ ಉಷಾ ಅವರಿಗೆ ಕಂಚು ಒಲಿಯಿತು. ಅವರು ಒಟ್ಟು 187 ಕೆಜಿ (ಸ್ನ್ಯಾಚ್ 83 + ಕ್ಲೀನ್ ಆ್ಯಂಡ್ ಜರ್ಕ್ 104) ಭಾರ ಸಾಧನೆ ಮಾಡಿದರು. ಈ ವಿಭಾಗದ ಚಿನ್ನವು ಅಸ್ಸಾಂನ ಮಧುಸ್ಮಿತಾ ಬರುವಾ (ಒಟ್ಟು 196 ಕೆಜಿ) ಅವರ ಪಾಲಾಯಿತು. ರೈಲ್ವೆ ತಂಡದ ಬಿ.ಎನ್.ಉಷಾ (187 ಕೆಜಿ) ಬೆಳ್ಳಿ ಜಯಿಸಿದರು.

87 ಕೆಜಿ ಜೂನಿಯರ್ ವಿಭಾಗದಲ್ಲಿ ಗುಜರಾತ್‌ನ ಆಯುಷಿ ಗಜ್ಜರ್ (171 ಕೆಜಿ), + 81 ಕೆಜಿ ಯೂತ್ ವಿಭಾಗದಲ್ಲಿ ಹರಿಯಾಣದ ಮುಸ್ಕಾನ್ (152 ಕೆಜಿ), 81 ಕೆಜಿ ಸೀನಿಯರ್ ವಿಭಾಗದಲ್ಲಿ ಛತ್ತೀಸಗಡದ ವನಿಷ್ಠಾ ವರ್ಮಾ (196 ಕೆಜಿ), ಜೂನಿಯರ್ ವಿಭಾಗದಲ್ಲಿ ಒಡಿಶಾದ ಶ್ವೇತಾಲಿನಾ ನಾಯಕ್ (162 ಕೆಜಿ), ಯೂತ್ ವಿಭಾಗದಲ್ಲಿ ತಮಿಳುನಾಡಿನ ಆರ್.ಪಿ. ಕೀರ್ತನಾ (170 ಕೆಜಿ), 76 ಕೆಜಿ ಸೀನಿಯರ್ ವಿಭಾಗದಲ್ಲಿ ಮಿಜೋರಾಂನ ಲಾಲ್‌ಚಾನಿಮಿ (215 ಕೆಜಿ), ಯೂತ್ ವಿಭಾಗದಲ್ಲಿ ತಮಿಳುನಾಡಿನ ಹಸೀನಾ ಶ್ರಿನ್ (160 ಕೆಜಿ) ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

ಕೊಡವ ಕೌಟುಂಬಿಕ ಹಾಕಿ ಟೂರ್ನಿ

ಐಚಂಡ, ಕೊಂಗೆಟಿರ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ


ಐಚಂಡ ಮತ್ತು ಜಮ್ಮಡ ತಂಡಗಳ ಆಟಗಾರರ ಪೈಪೋಟಿ

ನಾಪೋಕ್ಲು (ಕೊಡಗು ಜಿಲ್ಲೆ): ಐಚಂಡ ತಂಡದವರು ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಗೆಲುವು ಸಾಧಿಸಿದರು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಮ್ಮಡ ತಂಡದವರನ್ನು 1-0 ಗೋಲುಗಳಿಂದ ಮಣಿಸಿದರು. ಪೈಪೋಟಿಯಿಂದ ಕೂಡಿದ ಪಂದ್ಯದಲ್ಲಿ ಎದುರಾಳಿ ತಂಡದವರಿಗೆ ಗೋಲು ಗಳಿಸುವ ಅವಕಾಶವನ್ನೇ ನೀಡಲಿಲ್ಲ.

ಕರಿನೆರವಂಡ ತಂಡದವರು ಭರ್ಜರಿ 8–0 ಗೋಲುಗಳಿಂದ ಕೊಲ್ಲೀರ ತಂಡವನ್ನು ಮಣಿಸಿದರು. ಬೊಲ್ಲೇಪಂಡ 5-1ರಲ್ಲಿ ಪಾಲಕಂಡ ವಿರುದ್ಧ ಗೆದ್ದರೆ, ಮಾಚಮಾಡ ತಂಡದ ವಿರುದ್ಧ ಪಟ್ಟಮಾಡ ಜಯ ಸಾಧಿಸಿತು. ಬೊಳ್ಳೆಪಂಡ ಪರ ಹಾಕಿ ಕೋಚ್ ಬೊಳ್ಳೆಪಂಡ ಕಾರಿಯಪ್ಪ ಆಡಿದ್ದು ವಿಶೇಷ. ಕೊಂಗೆಟಿರ ತಂಡದವರು 4-2ರಲ್ಲಿ ಐತಿಚಂಡ ವಿರುದ್ಧ, ಚೊಟ್ಟೆಯಂಡಮಾಡ 2-1ರಲ್ಲಿ ಮೊಳ್ಳೆರ ಎದುರು, ಚೇಯಕಪೂವಂಡ 4-1ರಲ್ಲಿ ಮುಕ್ಕಾಟಿರ ವಿರುದ್ಧ, ನೆಲ್ಲಮಕ್ಕಡ ತಂಡದವರು 6–0ರಲ್ಲಿ ಅಪ್ಪಟ್ಟಿರ ವಿರುದ್ಧ ಗೆದ್ದರು.

ಚೇಂದಿರ ತಂಡದವರು 3-0ರಲ್ಲಿ ಕಾಂಡೇರ ವಿರುದ್ಧ, ಮಂಡೇಪಂಡ 4–1ರಲ್ಲಿ ಕೇಚೆಟ್ಟಿರ ವಿರುದ್ಧ, ಕುಲ್ಲೇಟಿರ 3-1ರಲ್ಲಿ ಉದ್ದಪಂಡ ವಿರುದ್ಧ, ಚೌರಿರ (ಹೊದ್ದೂರು) ತಂಡದವರು 4-0ರಲ್ಲಿ ಸಣ್ಣುವಂಡ ವಿರುದ್ಧ, ಕೋಟೆರ 4-1ರಲ್ಲಿ ಅವರೇಮಾದಂಡ ಎದುರು, ಶಾಂತೆಯೆಂಡ 4-0ರಲ್ಲಿ ಮಾಚೆಟ್ಟಿರ ವಿರುದ್ಧ, ಕೊಲ್ಕಿರ 4-0ರಲ್ಲಿ ನೆರ್ಪಂಡ ವಿರುದ್ಧ, ಚಂದುರತಂಡ 4-0ರಲ್ಲಿ ಪೊನ್ನೋಲತಂಡ ವಿರುದ್ಧ ಗೆಲುವು ಸಾಧಿಸಿತು.

ಅಂತರರಾಷ್ಟ್ರೀಯ ಹಾಕಿ ಆಟಗಾರರಾದ ಕೆಂಚೆಟ್ಟಿರ ವಿಜಯ್ ಉತ್ತಯ್ಯ, ಕುಲ್ಲೇಟಿರ ಎಸ್.ಉತ್ತಯ್ಯ, ಕೊಂಗೇಟಿರ ನೀಲೇಶ್, ಕೆಂಚೆಟ್ಟಿರ ವಿಜಯ್ ಉತ್ತಯ್ಯ, ಆಟಗಾರ್ತಿ ಕೆಂಚೆಟ್ಟಿರ ರೇಷ್ಮಾ ಗಮನ ಸೆಳೆದರು.

ಟಿ20: ಕೊನೆಯ ಪಂದ್ಯ ಗೆದ್ದ ಪಾಕಿಸ್ತಾನ

ಶಾರ್ಜಾ (ಎಪಿ): ಪಾಕಿಸ್ತಾನ ತಂಡ ಕೊನೆಯ ಟಿ20 ಕ್ರಿಕೆಟ್ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವನ್ನು 66 ರನ್‌ಗಳಿಂದ ಮಣಿಸಿ 'ಕ್ಲೀನ್‌ಸ್ವೀಪ್' ಅವಮಾನದಿಂದ ಪಾರಾಯಿತು.


ಮೊದಲ ಎರಡು ಪಂದ್ಯಗಳನ್ನು ಗೆದ್ದಿದ್ದ ರಶೀದ್ ಖಾನ್ ಬಳಗ ಮೂರು ಪಂದ್ಯಗಳ ಸರಣಿಯನ್ನು 2–1 ರಲ್ಲಿ ಗೆದ್ದುಕೊಂಡಿತು.

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ, ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 182 ರನ್ ಪೇರಿಸಿತು. ಸೈಮ್ ಅಯೂಬ್ (49) ಮತ್ತು ಇಫ್ತಿಕಾರ್ ಅಹ್ಮದ್ (31) ಅವರು ಉತ್ತಮ ಆಟವಾಡಿದರು.

ಶಾದಾಬ್ ಖಾನ್ (13ಕ್ಕೆ 3) ಮತ್ತು ಇಹ್ಸಾನುಲ್ಲಾ (29ಕ್ಕೆ 3) ಅವರ ಬಿಗುವಾದ ದಾಳಿಗೆ ನಲುಗಿದ ಅಫ್ಗಾನಿಸ್ತಾನ ತಂಡ 18.4 ಓವರ್‌ಗಳಲ್ಲಿ 116 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 182 (ಸೈಮ್ ಅಯೂಬ್ 49, ಅಬ್ದುಲ್ಲಾ ಶಫೀಕ್ 23, ಇಫ್ತಿಕಾರ್ ಅಹ್ಮದ್ 31, ಶಾದಾಬ್ ಖಾನ್ 28, ಮುಜೀಬ್ ಉರ್ ರಹ್ಮಾನ್ 28ಕ್ಕೆ 2, ಫಜಲ್‌ಹಕ್ ಫರೂಕಿ 25ಕ್ಕೆ 1, ರಶೀದ್ ಖಾನ್ 31ಕ್ಕೆ 1)

ಅಫ್ಗಾನಿಸ್ತಾನ 18.4 ಓವರ್‌ಗಳಲ್ಲಿ 116 (ರಹ್ಮಾನುಲ್ಲಾ ಗುರ್ಬಾಜ್ 18, ಮೊಹಮ್ಮದ್ ನಬಿ 17, ಅಜ್ಮತುಲ್ಲಾ ಒಮರ್‌ಜಾಯ್ 21, ಶಾದಾಬ್ ಖಾನ್ 13ಕ್ಕೆ 3, ಇಹ್ಸಾನುಲ್ಲಾ 29ಕ್ಕೆ 3) ಫಲಿತಾಂಶ: ಪಾಕಿಸ್ತಾನಕ್ಕೆ 66 ರನ್ ಗೆಲುವು



ಮುಂಬೈ ಇಂಡಿಯನ್ಸ್ ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ವಿಜೇತವಾಗಿದೆ!

ಬಿಡಬ್ಲ್ಯುಎಫ್ ರ್‍ಯಾಂಕಿಂಗ್: ಸಿಂಧು ಸ್ಥಾನ ಕುಸಿತ

ನವದೆಹಲಿ (ಪಿಟಿಐ): ಭಾರತದ ಪಿ.ವಿ. ಸಿಂಧು ಅವರು ಬಿಡಬ್ಲ್ಯುಎಫ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರ 10ರೊಳಗಿನ ಪಟ್ಟಿಯಿಂದ ಹೊರಬಿದ್ದಿದ್ದಾರೆ.

ಮಂಗಳವಾರ ಪ್ರಕಟವಾದ ಮಹಿಳೆಯರ ಸಿಂಗಲ್ಸ್ ಕ್ರಮಾಂಕದಲ್ಲಿ ಅವರು 11ನೇ ಸ್ಥಾನದಲ್ಲಿದ್ದಾರೆ. ಇತ್ತೀಚೆಗೆ ನಿರೀಕ್ಷಿತ ಸಾಮರ್ಥ್ಯ ತೋರುವಲ್ಲಿ ವಿಫಲವಾಗುತ್ತಿರುವ ಸಿಂಧು, ಕಳೆದ ವಾರ ನಡೆದ ಸ್ವಿಸ್ ಓಪನ್ ಟೂರ್ನಿಯಲ್ಲೂ ಪ್ರಶಸ್ತಿ ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದರು. 27 ವರ್ಷದ ಆಟಗಾರ್ತಿಯ ಬಳಿ ಸದ್ಯ 60,448 ಪಾಯಿಂಟ್‌ಗಳಿವೆ.

ಒಂದು ಸಂದರ್ಭದಲ್ಲಿ ಜೀವನಶ್ರೇಷ್ಠ ಎರಡನೇ ರ್‍ಯಾಂಕ್‌ನಲ್ಲಿ ಇದ್ದ ಸಿಂಧು, 2016ರ ನವೆಂಬರ್‌ನಿಂದ ಅಗ್ರ 10ರೊಳಗಿನವರ ಪಟ್ಟಿಯಲ್ಲಿದ್ದರು.


ಪಿ.ವಿ.ಸಿಂಧು

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎಚ್.ಎಸ್. ಪ್ರಣಯ್ ಎಂಟನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಕ್ರಮವಾಗಿ 21 ಮತ್ತು 25ನೇ ಸ್ಥಾನದಲ್ಲಿದ್ದಾರೆ.

ಸ್ವಿಸ್ ಓಪನ್ ಚಾಂಪಿಯನ್‌ಗಳಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಡಬಲ್ಸ್ ವಿಭಾಗದಲ್ಲಿ ಆರನೇ ಕ್ರಮಾಂಕದಲ್ಲಿ ಮುಂದುವರಿದಿದ್ದಾರೆ.

ಅಜಯ್ ಸಿಂಗ್ ಐಬಿಎ ಉಪಾಧ್ಯಕ್ಷ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಫೆಡರೇಷನ್‌ನ (ಬಿಎಫ್‌ಐ) ಅಧ್ಯಕ್ಷ ಅಜಯ್ ಸಿಂಗ್ ಅವರು ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಭಾನುವಾರ ನಡೆದ ಐಬಿಎ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅಜಯ್ ಅವರ ನೇಮಕ ಖಚಿತಪಡಿಸಲಾಗಿದೆ.

ನೆಟ್‌ಬಾಲ್: ಕರ್ನಾಟಕ ತಂಡಗಳಿಗೆ ಮನೋಜ್, ಶಿವಲೀಲಾ ಸಾರಥ್ಯ

ಬೆಂಗಳೂರು: ಇದೇ ಮೊದಲ ಬಾರಿ ನಡೆಯಲಿರುವ ರಾಷ್ಟ್ರೀಯ 'ಫಾಸ್ಟ್ ಫೈವ್ ನೆಟ್‌ಬಾಲ್' ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡಗಳನ್ನು ಪ್ರಕಟಿಸಲಾಗಿದೆ. ಹರಿಯಾಣದ ಸಿಸಾನಾದಲ್ಲಿ ಮಾರ್ಚ್ 30ರಿಂದ ಏಪ್ರಿಲ್ 2ರವರೆಗೆ ಚಾಂಪಿಯನ್‌ಷಿಪ್ ನಡೆಯಲಿದ್ದು, ರಾಜ್ಯ ಪುರುಷರ ತಂಡಕ್ಕೆ ಮನೋಜ್ ಕೆ. ಮತ್ತು ಮಹಿಳೆಯರ ತಂಡಕ್ಕೆ ಶಿವಲೀಲಾ ಎಸ್. ನಾಯಕತ್ವ ವಹಿಸಲಿದ್ದಾರೆ.


ಮನೋಜ್


ಶಿವಲೀಲಾ ಎಸ್.

ಕರ್ನಾಟಕ ತಂಡಗಳು: ಪುರುಷರು: ಮನೋಜ್ ಕೆ. (ನಾಯಕ), ರೋಹಿತ್ ಪಿ.ಡಿ. (ಉಪನಾಯಕ), ಸುಜನ್, ಮೋಹನ್‌ರಾಜ್ ಜಿ, ದಿನೇಶ್ ಎಂ, ಕರಣ್ ಎಂ. ಜೈನ್, ಯಶವಂತ್ ಥೇಲ್ಕರ್ ಬಿ.ಸಿ., ಸೂರ್ಯ ಬಿ, ತುಷಾರ್. ಕೋಚ್: ಗಿರೀಶ್ ಸಿ.

ಮಹಿಳೆಯರು: ಶಿವಲೀಲಾ ಎಸ್. (ನಾಯಕಿ), ಸ್ವಾತಿ ಜಿ. (ಉಪನಾಯಕಿ), ಮನಸ್ವಿ ಎಚ್, ಮಹೇಶ್ವರಿ ಎಸ್, ಯಶಸ್ವಿನಿ ಎಂ, ಐಶ್ವರ್ಯ ಎಸ್.ಎಂ, ಅಕ್ಷಯಾ ಕೆ, ಪವಿತ್ರಾ ಕೆ, ಚೇತನಾ ಎಸ್, ಧ್ರುತಿ ಡಯಾನಾ ಮಾರ್ಟಿನ್. ಕೋಚ್: ಅವಿನಾಶ್ ಕುಮಾರ್.